# ನಾಡಿಗೆ ನಮಸ್ಕಾರ ಸರಣಿ

## ಚೇರ್ಕಾಡಿ ಗಾಂಧಿ ರಾಮಚಂದ್ರ ರಾಯರು

**ಮಹಾತ್ಮಾ ಗಾಂಧಿ – ಚೇರ್ಕಾಡಿ ಗಾಂಧಿ**

ಗಾಂಧೀಜಿಯ ಬಾಲ್ಯ ಸಹಜವಾಗಿತ್ತು. ತನ್ನ ಚಿಂತನ ಶಕ್ತಿಯಿಂದ ಉತ್ತಮ ಗುಣಗಳನ್ನು ರೂಢಿಸಿಕೊಳ್ಳಲು, ಉದಾತ್ತ ಗುಣಗಳ ತಾಯಿಯ ಮಾರ್ಗದರ್ಶನವಿತ್ತು. ತನ್ನ ಜೀವನದ ವಿವಿಧ ಹಂತಗಳಲ್ಲಿ ಅನುಭವಿಸಿದ ಪರಿಸ್ಥಿತಿಯನ್ನಾಧರಿಸಿ, ತನ್ನ ಸ್ವಂತ ಚಿಂತನೆಗಳ ಮೂಲಕ ಮಾನವ ಕುಲದ ಸಮಾನತೆಗಾಗಿ ತನ್ನ ಜೀವನವನ್ನು ಸವೆಸಿದ ಮಹಾ ಆತ್ಮ ಗಾಂಧೀಜಿ. ಭಾರತ ದೇಶದ ಮೂಲೆ ಮೂಲೆಗೂ ಸಂಚರಿಸಿ ಇಲ್ಲಿಯ ಪ್ರಜೆಗಳ ಕಷ್ಟಗಳನ್ನು ಅಭ್ಯಾಸ ಮಾಡಿದ್ದರು. ಭಾರತದ ಪ್ರತಿಯೊಬ್ಬ ಪ್ರಜೆಯ ಉದ್ಧಾರಕ್ಕಾಗಿ ತನ್ನ ಜೀವಮಾನವಿಡೀ ಚಿಂತನೆ ನಡೆಸಿದ್ದಾರೆ. ಅವರ ಜೀವನ ತತ್ವಗಳನ್ನು ಸಂಪೂರ್ಣವಾಗಿ ಅರಿತುಕೊಂಡವರು ಈ ಪ್ರಪಂಚದಲ್ಲಿ ಸಿಗಲಾರರು. ಸಮಾಜದಲ್ಲಿ ಮಾನವರೇ ಸೃಷ್ಟಿಸಿಕೊಂಡ ಮೇಲುಕೀಳೆಂಬ ಪದ್ಧತಿಯಿಂದ ನಡೆಯುವ ಅನ್ಯಾಯವನ್ನು ಅಂತ್ಯಗೊಳಿಸುವತ್ತ ಚಿಂತನೆ ನಡೆಸಿ, ಸರಿಪಡಿಸಲು ಹೋರಾಡಿದ ಧೀಮಂತ ವ್ಯಕ್ತಿ. ಅವರನ್ನು ಅನುಸರಿಸುವುದು ಸುಲಭದ ಮಾತಲ್ಲ. ಅವರ ಜೀವನ ತೆರೆದ ಪುಸ್ತಕ. ಅದನ್ನು ಅರ್ಥೈಸಿಕೊಂಡು ಓದಿ ತನ್ನ ಜೀವನದಲ್ಲಿ ಅನುಷ್ಠಾರಗೊಳಿಸಿಕೊಂಡವರೆಲ್ಲರಿಗೂ ಜೀವನ ಅತ್ಯಂತ ಸುಖಮಯ.

ಗಾಂಧೀಜಿಯವರ ಸಮಕಾಲೀನರಲ್ಲದಿದ್ದರೂ, ಅವರನ್ನು ನೋಡಿ ಪ್ರೇರಣೆ ಪಡೆಯುವ ಅವಕಾಶ ದೊರೆಯದಿದ್ದರೂ, ಕೇವಲ ಅವರ ತತ್ವಗಳನ್ನು ಕೇಳಿ ಪ್ರಭಾವಿತರಾಗಿ, ಅವುಗಳಲ್ಲಿ ಕೆಲವನ್ನು ಅನುಷ್ಠಾನಗೊಳಿಸುವ ಭರವಸೆಯನ್ನು ಮೂಡಿಸಿಕೊಂಡು, ಅವರ ಚಿಂತನೆಯ ಹಾದಿಯಲ್ಲಿಯೇ ನಡೆದು ಯಶಸ್ಸನ್ನು ಕಂಡ ಅಪರೂಪದ ವ್ಯಕ್ತಿ ದಿ ಚೇರ್ಕಾಡಿ ರಾಮಚಂದ್ರ ರಾಯರು. ಗಾಂಧೀಜಿಯವರ ಸ್ವಾವಲಂಬನೆ ತತ್ವ ಹಾಗೂ ಕೃಷಿ ಮತ್ತು ಕೈಗಾರಿಕೆಯೆರಡನ್ನೂ ಜೀವನದಲ್ಲಿ ಅಳವಡಿಸಿಕೊಂಡು, ತನ್ನ ಕಾಯಕದಲ್ಲಿಯೇ ಸಮಾಜಕ್ಕೆ ಮಾರ್ಗದರ್ಶಿಯಾಗಿ ಒಂಬತ್ತು ದಶಕಗಳ ಸಾರ್ಥಕ ಜೀವನ ನಡೆಸಿದವರು. ಭೂತಾಯಿಯನ್ನು ಅತ್ಯಂತ ಸರಳ ರೀತಿಯಲ್ಲಿ ಅರ್ಥ ಮಾಡಿಕೊಂಡು, ನೆಮ್ಮದಿಯ ಬದುಕನ್ನು ಕಂಡುಕೊಂಡ ವಿಶಿಷ್ಟ ವ್ಯಕ್ತಿ. ಪ್ರಪಂಚದ ಇತರ ಲಕ್ಷಾಂತರ ಜೀವಿಗಳಂತೆ ಪ್ರಕೃತಿಯಲ್ಲಿ ಬೆರೆತು, ತನ್ನ ಜೀವನಾವಶ್ಯಕತೆಗಳನ್ನು ಪೂರೈಸಿಕೊಂಡರೆ ಸುಖ, ಶಾಂತಿ ತಮ್ಮ ಕಾಲು ಬುಡದಲ್ಲಿ ಪಡೆಯಲು ಸಾಧ್ಯವೆನ್ನುವುದಕ್ಕೆ ಜೀವಂತ ಉದಾಹರಣೆಯಾಗಿದ್ದವರು. ಇವರಲ್ಲಿ ಗಾಂಧೀಜಿಯವರ ಮಟ್ಟದ ಉನ್ನತ ವಿಚಾರ ಲಹರಿಗಳು ಇಲ್ಲದಿರಬಹುದು. ಆದರೆ ಅನ್ನ ಮತ್ತು ವಸ್ತ್ರ ಸ್ವಾವಲಂಬನೆಯ ವಿಚಾರದಲ್ಲಿ ಅವರ ನೈಜ ಅನುಯಾಯಿಯಾಗಿದ್ದರು.

ಕೃಷಿಯನ್ನು ನಂಬಿ ಬದುಕು ಸಾಧಿಸಲು ಅಸಾಧ್ಯವೆನ್ನುವ ಕಾಲದಲ್ಲಿ, ಹಿರಿಯರ ಕೃಷಿತೋ ನಾಸ್ತಿ ದುರ್ಭಿಕ್ಷಂ ಎನ್ನುವುದನ್ನು ಮತ್ತೊಮ್ಮೆ ಸಮಾಜಕ್ಕೆ ಸಾಧಿಸಿ ತೋರಿಸಿದ ಧೀಮಂತ ವ್ಯಕ್ತಿ ದಿ ಚೇರ್ಕಾಡಿ ರಾಮಚಂದ್ರ ರಾಯರು.

**ಹೋರಾಟದ ಶೈಶವ**

ಚೇರ್ಕಾಡಿಯವರ ಜನನ ದಿನಾಂಕವನ್ನು ಕರಾರುವಾಕ್ಕಾಗಿ ನೆನಪಿಟ್ಟು ಕೊಂಡವರಿಲ್ಲ. ಬಡತನದ ಕುಟುಂಬಗಳಲ್ಲಿ ಜೀವನ ನಿರ್ವಹಣೆಯೇ ಮೂಲಭೂತ ಅವಶ್ಯಕತೆ ಹಾಗೂ ಸಮಸ್ಯೆ. ಇಂತಹ ಸಂಸಾರಗಳಲ್ಲಿ ಹುಟ್ಟು ಸಾವಿಗೆ ಹೆಚ್ಚಿನ ಮನ್ನಣೆಯಿಲ್ಲ. ತಂದೆ ನಾರಾಯಣ ರಾವ್, ಮಡಿಕೇರಿ ಜಿಲ್ಲೆಯ ಅರೆಕಾಡು ಎನ್ನುವ ಸಣ್ಣ ಹಳ್ಳಿಯಲ್ಲಿ ಸ್ವಲ್ಪ ಜಮೀನು ಹೊಂದಿದ್ದವರು. ಯಾವುದಕ್ಕೂ ನಿಖರ ಮಾಹಿತಿಯಿಲ್ಲ. ಅದರಲ್ಲಿ ಬರುತ್ತಿದ್ದ ಆದಾಯ ಸಂಸಾರದ ಖರ್ಚು ವೆಚ್ಚಗಳನ್ನು ಸರಿತೂಗಿಸಲು ಸಾಕಾಗುತ್ತಿರಲಿಲ್ಲ. ಅದಕ್ಕಾಗಿ ಪಿತ್ರಾರ್ಜಿತವಾಗಿ ಬಂದ ಭವಿಷ್ಯ, ನಾಟಿವೈದ್ಯ ಮತ್ತು ತಾಂತ್ರಿಕ ವಿದ್ಯೆಗಳನ್ನು ಅವಲಂಬಿಸಿದ್ದರು. ಆದರೂ ನಿಶ್ಚಿಂತೆಯ ದಿನಗಳನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ. ಸೇವೆಗೆ ಇಂತಿಷ್ಟೇ ಶುಲ್ಕವೆಂದು ನಿರ್ಧರಿಸುವ ದಿನಗಳಾಗಿರಲಿಲ್ಲ. ಕೊಟ್ಟದ್ದನ್ನು ಪ್ರಸಾದವೆಂದು ಸ್ವೀಕರಿಸುವ ಕಾಲ. ಇವರ ಸಹಾಯ, ಸೇವೆ ಕೋರಿ ಬರುವವರೆಲ್ಲಾ ತಾವೇ ಸ್ವತಃ ಕಷ್ಟ ಎದುರಿಸುತ್ತಿದ್ದವರು. ಹಲವಾರು ಸಂದರ್ಭಗಳಲ್ಲಿ

ಪರವೂರಿಗೆ ಕೆಲಸದ ನಿಮಿತ್ತ ಹೋಗಬೇಕಾಗುತ್ತಿತ್ತು. ಕೆಲವು ಸಲ ಅದೇ ದಿನ ಮರಳಿ ಮನೆಗೆ ಬರಲಾಗುತ್ತಿರಲಿಲ್ಲ. ಮನೆಯಲ್ಲಿ ಮುಂಚಿತವಾಗಿ ತಿಳಿಸುವುದು ಅಸಾಧ್ಯ. ಅದೇ ದಿನ ಮರಳಿ ಬಾರದ ದಿನಗಳನ್ನು ಮನೆಯವರೆಲ್ಲಾ ಆತಂಕದಲ್ಲಿಯೇ ಬೆಳಗು ಮಾಡುವುದು ಬಿಟ್ಟರೆ ಅನ್ಯ ಮಾರ್ಗವಿರಲಿಲ್ಲ. ಇಂತಹ ಸಂದರ್ಭಗಳಲ್ಲಿ ತಾಯಿ ಜಾನಕಿಯ ಮನಸ್ಥಿತಿ, ಒತ್ತಡ ಊಹಿಸಲು ಸಾಧ್ಯವಿಲ್ಲ. ಸದಾ ಅಸ್ಥಿರತೆಯಲ್ಲಿ ನಾಳಿನ ದಿನಗಳನ್ನು ಕಳೆಯುತ್ತಿರುವಾಗ ಮಕ್ಕಳು ಹುಟ್ಟಿದ ದಿನಾಂಕವನ್ನು ನೆನೆಪಿಟ್ಟುಕೊಳ್ಳುವುದೂ ಸುಲಭವಲ್ಲ. ಜಾತಕ ಬರೆಸುವ ಕ್ರಮವಿತ್ತು. ಅದನ್ನು ಜೋಪಾನವಾಗಿ ಕಾಯ್ದಿಡುವ ವ್ಯವಸ್ಥೆ ಕಡಿಮೆ. ರಾಯರ ಜನ್ಮ ದಿನದ ಬಗ್ಗೆ ನಿಖರವಾದ ಮಾಹಿತಿಯಿಲ್ಲ. ತಿಳುವಳಿಕೆ ಬಂದ ನಂತರ ಊಹಿಸಿಕೊಂಡ ವರ್ಷ 1919ನೇ ಇಸವಿ.

ರಾಯರಿಗೆ ಸುಮಾರು ಎರಡು ವರ್ಷ ವಯಸ್ಸಾದಾಗ ಒಂದು ದಿನ ತಂದೆ ಸಾಯಂಕಾಲ ಮನೆಗೆ ಮರಳಲಿಲ್ಲ. ತಾಯಿ ಆತಂಕದಲ್ಲಿಯೇ ರಾತ್ರಿ ಕಳೆದರು. ಮುಂಜಾನೆ ನೆರೆಹೊರೆಯವರು ತಂದೆಯ ಶವವನ್ನು ಮನೆಯ ಮುಂದೆ ತಂದಿರಿಸಿದರು. ಯಾರಿಗೂ ಸಾವಿನ ಖಚಿತವಾದ ಕಾರಣ ಗೊತ್ತಿಲ್ಲ. ಕಣ್ಣಾರೆ ಕಂಡವರಿಲ್ಲ. ನಿಜ ತಿಳಿಸಲು ತಂದೆಯ ಜೀವದಲ್ಲಿ ಉಸಿರಿಲ್ಲ. ಅದು ಹೃದಯ ಸ್ಥಂಭನ, ವಿಷ ಜಂತುವಿನ ಕಡಿತ ಅಥವಾ ತಾಂತ್ರಿಕ ವಿದ್ಯೆಯನ್ನು ಪ್ರಯೋಗಿಸುತ್ತಿದ್ದರಿಂದ ಶತ್ರುಗಳ ಪ್ರತೀಕಾರವೂ ಇದ್ದಿರಬಹುದು. ಬಂಧು ಬಾಂಧವರನ್ನು ಕರೆಯಲು ಸಂವಹನ ಮಾಧ್ಯಮ ಇಂದಿನಂತಿರಲಿಲ್ಲ. ನೆರೆಹೊರೆಯವರೇ ಸೇರಿ ಶವ ಸಂಸ್ಕಾರ ನಡೆಸಿದರು. ರಾತ್ರಿಯಿಡೀ ತಾಯಿ ಹೇಗೆ ಸುಧಾರಿಸಿಕೊಂಡರೆನ್ನುವುದು ರಾಯರ ಊಹನೆಗೂ ನಿಲುಕದ ವಿಷಯ. ಆದರೆ ಮುಂಜಾನೆ ಎದ್ದಾಗ, ತಾಯಿ ಪತಿಯನ್ನನುಸರಿಸಿ ಮರಳಿ ಬಾರದ ಪ್ರಪಂಚಕ್ಕೆ ಪ್ರಯಾಣಿಸಿದ್ದು ಅವರ ನಿಶ್ಚಲ ದೇಹವನ್ನು ನೋಡಿದಾಗಲೇ ತಿಳಿದದ್ದು.

ಬಾಲ್ಯ ವಿವಾಹ ಸಾಮಾನ್ಯವಾಗಿದ್ದ ಕಾಲವಾದ್ದರಿಂದ, ರಾಯರ ಹಿರಿಯಕ್ಕನನ್ನು ಸಣ್ಣ ಪ್ರಾಯದಲ್ಲಿಯೇ ಧರ್ಮಸ್ಥಳದ ಮುಖ್ಯಪ್ರಾಣ ಎನ್ನುವವರೊಂದಿಗೆ ವಿವಾಹ ಮಾಡಿಸಿದ್ದರು. ಅವರಿಗೆ ಸುದ್ದಿ ತಿಳಿದು ಅರೆಕಾಡಿಗೆ ಬರುವಷ್ಟರಲ್ಲಿ ವೈಕುಂಠ ಸಮಾರಾಧನೆ ನಡೆಸಬೇಕಾದ ದಿನಗಳು ಬಂದಿದ್ದವು. ಭಾವನ ಸಂಸಾರವೂ ಬಡತನದ್ದೇ. ಇಲ್ಲಿಯ ಆಸ್ತಿ ಪಾಸ್ತಿಗಳನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡು ಎರಡೂ ಕಡೆಯಿರಲು ಸಾಧ್ಯವಿರಲಿಲ್ಲ. ಆದ್ದರಿಂದ ಎಲ್ಲಾ ನಾಲ್ಕು ಜನ ಅನಾಥ ಮಕ್ಕಳನ್ನುರಾಯರ ಎರಡನೇ ಅಕ್ಕ, ಅಣ್ಣ ಮತ್ತು ತಮ್ಮ ತಮ್ಮೊಡನೆ ಧರ್ಮಸ್ಥಳಕ್ಕೆ ಕರೆದೊಯ್ದರು. ಅಲ್ಲಿಗೆ ರಾಯರ ಜನ್ಮಸ್ಥಳದ ನಂಟು ಮುಗಿಯಿತು. ನಂತರ ವಾಪಾಸು ಹೋಗುವ ಪ್ರಮೇಯ ಬರಲಿಲ್ಲ. ತಂದೆಯ ಮನೆ, ಆಸ್ತಿಯೆಲ್ಲಾ ಮಕ್ಕಳೊಂದಿಗೆ ಅನಾಥವಾಯಿತು. ಮುಂದೆ ಅದರ ಭೂಕಂದಾಯವನ್ನು ಯಾರೂ ಕಟ್ಟದ್ದರಿಂದ, ಸರಕಾರ ಮನೆ ಜಮೀನನ್ನು ಹರಾಜು ಹಾಕಿ ಯಾರದೋ ಪಾಲಾಗುವಂತೆ ನೋಡಿಕೊಳ್ಳಲಾಯಿತು.

ಧರ್ಮಸ್ಥಳದ ಅಕ್ಕ ಭಾವನ ಸಂಸಾರ ಕೂಡಾ ಬಡತನದ್ದೇ. ಎಷ್ಟು ಕಷ್ಟವೆನ್ನುವುದನ್ನು ತಿಳಿದುಕೊಳ್ಳುವ ಶಕ್ತಿ ರಾಯರ ಮಿದುಳಿಗಿರಲಿಲ್ಲ. ಹೊಟ್ಟೆಗೆ ಹಿಟ್ಟು ಬೀಳುತ್ತಿತ್ತು. ಮಕ್ಕಳಾಟದಲ್ಲಿ ಸಮಯ ಜಾರುತ್ತಿತ್ತು. ಇಲ್ಲಿ ಕಳೆದ ದಿನಗಳನ್ನು ಮುಂದೆ ನೆನಪಿಸಿಕೊಳ್ಳಲಾಗಲಿಲ್ಲ. ಹೆತ್ತವರ ವಾತ್ಸಲ್ಯ ವಂಚಿತರಾಗಿ ಬದುಕಿದರೂ, ಮುಂದಿನ ದಿನಗಳಲ್ಲಿ ಅದರ ಬಗ್ಗೆ ಕೊರಗಿದವರಲ್ಲ. ಶೈಶವದಿಂದ ಪ್ರಾರಂಭವಾದ ಹೋರಾಟವನ್ನು ಸಹಜವಾಗಿ ಸ್ವೀಕರಿಸಿ, ಸಮಾಜದಲ್ಲಿ ದಿಟ್ಟ ಹೆಜ್ಜೆಗಳನ್ನಿಡುತ್ತಾ ಯಾರಿಗೂ ತಲೆಬಾಗದೆ, ಸ್ವತಂತ್ರರಾಗಿ ಬದುಕಿದರು. ಇವರ ಸಮಗ್ರ ಬದುಕನ್ನು ಅವಲೋಕಿಸಿದಾಗ ಇವರೊಬ್ಬ ಹುಟ್ಟು ಹೋರಾಟಗಾರರೆನಿಸದೆ ಇರದು. ಅವರ ಜೀವನ ತೆರೆದ ಪುಸ್ತಕದಂತಿದೆ.

**ಅರೆಕಾಡಿನಿಂದ ಚೇರ್ಕಾಡಿಗೆ**

ಧರ್ಮಸ್ಥಳದ ಭಾವನ ಮನೆಯಲ್ಲಿ ಒಂದು ವರ್ಷ ಕಳೆದಿರಬಹುದು. ಇವರ ಎರಡನೇ ಅಕ್ಕನನ್ನು ಚೇರ್ಕಾಡಿಯಲ್ಲಿರುವ ವೆಂಕಟ್ರಾಯರಿಗೆ ಮದುವೆ ಮಾಡಿ ಕೊಡಲಾಯಿತು. ಮದುವೆ ಧರ್ಮಸ್ಥಳದಲ್ಲಿ. ಸಮಾರಂಭ ಸಂಭ್ರಮದಲ್ಲಿ ನಡೆದಿತ್ತೋ ಇಲ್ಲವೋ ಎಂಬುದರ ಅರಿವಿಲ್ಲ. ಚೇರ್ಕಾಡಿಯ ಭಾವನ ಸ್ಥಿತಿಯೂ ಉಳಿದವರಂತೆಯೇ. ಆದರೂ ಮರುದಿನ ಎರಡನೇ ಅಕ್ಕ ಮೀನಾಕ್ಷಿಯೊಂದಿಗೆ ಭಾವ ವಾಪಾಸು ಪ್ರಯಾಣ ಪ್ರಾರಂಭಿಸಿದಾಗ, ಮೂರು ಜನ ಗಂಡುಮಕ್ಕಳ ಜವಾಬ್ದಾರಿಯನ್ನು ವಹಿಸಿಕೊಂಡು ಧರ್ಮಸ್ಥಳದಿಂದ ಕಾರ್ಕಳದ ವರೆಗೆ ಎತ್ತಿನ ಬಂಡಿ, ಅಲ್ಲಿಂದ ಹಿರಿಯಡ್ಕದ ವರೆಗೆ ಬಸ್ಸು ನಂತರದ ಐದು ಮೈಲು ಕಾಲು ನಡಿಗೆಯಲ್ಲಿ ಪ್ರಯಾಣಿಸಿ ತಮ್ಮ ಮನೆಗೆ ತಲುಪಿದರು. ಹೀಗೆ

ಮೂರು ವರ್ಷಗಳ ಅವಧಿಯಲ್ಲಿ, ತಿಳಿದುಕೊಳ್ಳುವ ಶಕ್ತಿಯಿಲ್ಲದ ಸಮಯದಲ್ಲಿ, ಊಹಿಸಲಾಗದ ಘಟನೆಗಳು ಕನಸಿನಂತೆ ನಡೆದು ಹೋದವು. ರಾಯರ ಬಾಲ್ಯ ಅಯೋಮಯ.

ರಾಯರ ಪುಟ್ಟ ಪುಟ್ಟ ಹೆಜ್ಜೆಗಳು ಬಲಿಯಲು ಪ್ರಾರಂಭಿಸಿತು. ಮನೆಯಲ್ಲಿ ಭಾವನಿಗೆ ನಿರ್ದಿಷ್ಟ ಆದಾಯವಿರಲಿಲ್ಲ. ಸಣ್ಣ ಜಮೀನಿದ್ದರೂ ಬೇಸಾಯ ಮಾಡುತ್ತಿರಲಿಲ್ಲ. ನೆರಹೊರೆಯವರ ವ್ಯಾಜ್ಯ ತೀರ್ಮಾನ ಮಾಡುವುದು, ಕಾನೂನು ಹೇಳಿಕೊಡುವುದು ಇದರಿಂದಲೇ ಸಣ್ಣ ಗಳಿಕೆ. ಮನೆಯಲ್ಲಿ ಎರಡು ದನ, ಅದರಲ್ಲಿ ಸ್ವಲ್ಪ ಉತ್ಪತ್ತಿ. ದನ ಮೇಯಿಸಿಕೊಂಡು, ಗುಡ್ಡ ಅಲೆದಾಡಿಕೊಂಡು, ಪ್ರಕೃತಿಯ ಮಡಿಲಲ್ಲಿ, ಅತಂತ್ರ ಬದುಕಿನಲ್ಲಿಯೂ ಸ್ವತಂತ್ರ ಬಾಲ್ಯ ಕಳೆಯುತ್ತಿತ್ತು.

ಹೀಗೊಮ್ಮೆ ಮನೆಯ ಹತ್ತಿರ ಬಂದ ಅಲೆಮಾರಿ ದನವನ್ನೋಡಿಸಲು ಹೋಗಿ ಆವರಣವಿಲ್ಲದ ನೀರಿದ್ದ ಬಾವಿಗೆ ರಾಯರು ಬಿದ್ದರು. ಜನಸಂಖ್ಯೆ ಕಡಿಮೆಯಿರುವ ಪ್ರದೇಶದಲ್ಲಿದ್ದ ಬಾವಿಯ ಕಡೆ ಗಮನವಿಟ್ಟಿರುವವರು ಕಡಿಮೆ. ಅದೃಷ್ಟವಶಾತ್ ನೆರೆಮನೆಯಲ್ಲಿದ್ದವರು ನೋಡಿ ಬೊಬ್ಬೆ ಹಾಕಿ ಜನ ಸೇರಿಸುವಷ್ಟರಲ್ಲಿ ಮಾಣಿ ಕೈಕಾಲು ಬಡಿದು ಸುಸ್ತಾಗಿ ನೀರು ಕುಡಿಯಲು ಪ್ರಾರಂಭಿಸಿಯಾಗಿತ್ತು. ಬಾವಿಯಿಂದ ಮೇಲೆತ್ತುವಾಗ ಮೇಲಿದ್ದವರಿಗೆ ಮಾಣಿಯು ಬದುಕುವ ಭರವಸೆಯಿರಲಿಲ್ಲ. ಆದರೆ ಮುಂದೆ ಸಮಾಜಕ್ಕೆ ಮಾರ್ಗದರ್ಶಕರಾಗಿ ಬದುಕುವ ಜವಾಬ್ದಾರಿಯನ್ನು ಭೂಮಿಗೆ ಬರುವಾಗಲೇ ಬ್ರಹ್ಮ ಬರೆದು ಕಳುಹಿಸಿದ್ದರಿಂದ, ಬಾವಿಯಿಂದ ಮೇಲೆ ಬರುವಾಗ ಇನ್ನೂ ಉಸಿರಾಟ ನಿಂತಿರಲಿಲ್ಲ. ಹೊಟ್ಟೆಯೊಳಗಿದ್ದ ನೀರನ್ನು ಕಾರಿಸಿದ ನಂತರ ಯಥಾಸ್ಥಿತಿಗೆ ತಲುಪಿದರು.

ಭಾವ ದುರ್ವಾಸನ ಅವತಾರ. ತಪ್ಪು ಮಾಡಿದರೆ ಕಠಿಣ ಶಿಕ್ಷೆ. ಅದು ಮನೆಯಲ್ಲಿಯೂ, ಸಮಾಜದಲ್ಲಿಯೂ ನಡೆಯುತ್ತಿತ್ತು. ಅವರೊಂದಿಗೆ ಜಗಳಕ್ಕೆ ನಿಂತವರಿಗೆ ಬಿಸಿ ಎಣ್ಣೆ ಮಾಡಿ ಮೈಮೇಲೆ ಎರಚುವುದರಿಂದ ಹಿಡಿದು ನಾನಾ ರೀತಿಯ ಪ್ರಯೋಗ ಅವರಲ್ಲಿತ್ತು. ತಪ್ಪು ಮಾಡಿದಾಗ ಕಟ್ಟಿ ಹಾಕಿ, ಬೆಲ್ಲದ ನೀರು ಮೈಮೇಲೆ ಸುರಿದು ನಂತರ ಚೌಳಿಕೆಂಪಿರುವೆಯನ್ನು ಮೈಮೇಲೆ ಬಿಡುವ ಕಾರ್ಯಕ್ರಮಗಳೂ ಇರುತ್ತಿದ್ದವು. ಬಾಲ್ಯದಲ್ಲಿ ಸಹಜ ಕುತೂಹಲದಿಂದ, ಸೇದಿ ಬಿಸಾಕಿದ ಬೀಡಿ ತುದಿಗಳನ್ನು ಸಂಗ್ರಹಿಸಿ ಸೇದುವ ಚಟವನ್ನು ಪ್ರಾರಂಭಿಸಿದ್ದರು. ಅದನ್ನು ಅಕ್ಕ ನೋಡಿ, ಭಾವನಲ್ಲಿ ತಿಳಿಸುವೆನೆಂದೊಡನೆ, ಅವರ ಶಿಕ್ಷೆಗಳ ನಮೂನೆ ಜ್ಞಾಪಿಸಿಕೊಂಡು ಅದರ ಗೊಡವೆಗೆ ಮುಂದೆ ಹೋಗಲಿಲ್ಲ.

**ಗಾಂಧೀ ತತ್ವ – ವಸ್ತ್ರ ಸ್ವಾವಲಂಬನೆ**

ರಾಯರಿಗೆ ಶಿಕ್ಷಣ ಪಡೆಯುವ ವಯಸ್ಸು ಮೀರಿದರೂ ಮನೆಯ ಹತ್ತಿರ ಶಿಕ್ಷಣ ಸಂಸ್ಥೆ ಇಲ್ಲದ್ದರಿಂದ ಶಾಲೆಗೆ ದಾಖಲಾಗಲು ಸಾಧ್ಯವಾಗಲಿಲ್ಲ. ಮನೆಯಲ್ಲಿಯೇ ಭಾವನಿಂದ ಅಕ್ಷರಾಭ್ಯಾಸ, ಮಂತ್ರ ಪಠಣ, ಪೂಜಾ ವಿಧಿಗಳು ಕಲಿಸಲ್ಪಟ್ಟವು. ಗುರುಗಳ ಸ್ಥಾನದಲ್ಲಿ ನಿಂತು, ತನಗೆ ತಿಳಿದಷ್ಟನ್ನು ವರ್ಗಾಯಿಸಿದ್ದರು. ಸರಿಯಾಗಿ ಒಪ್ಪಿಸದಿದ್ದರೆ ಶಿಕ್ಷೆ ತಪ್ಪಿದ್ದಲ್ಲ. ಆದ್ದರಿಂದ ಅವರು ಕಲಿಸಿದ್ದನ್ನೆಲ್ಲಾ ಚಾಚೂ ತಪ್ಪದೆ ಒಪ್ಪಿಸುತ್ತಿದ್ದರು.

1928ರಲ್ಲಿ ಚೇರ್ಕಾಡಿಯ ಮುಂಡ್ಕಿನಜೆಡ್ಡಿನಲ್ಲಿ ಊರಿನ ಮಹನೀಯರ ಶ್ರಮದಿಂದ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ನಂತರ ಒಂದೆರಡು ವರ್ಷದೊಳಗೆ ರಾಯರು ಆಧುನಿಕ ಉಡುಗೆ ತೊಡುಗೆ ರಹಿತರಾಗಿ ತನ್ನ ಹತ್ತನೇ ವರ್ಷದ ಸುಮಾರಿಗೆ ಒಂದನೇ ತರಗತಿಗೆ ದಾಖಲಾದರು. ಭಾವನಿಂದ ಕಲಿತ ಮನೆಪಾಠದ ವಿದ್ಯೆಯ ಹಿನ್ನೆಲೆ, ಇವರ ಬುದ್ಧಿಮತ್ತೆ ಮತ್ತು ಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಸೇರಿದ ಆರು ತಿಂಗಳೊಳಗೆ ಇವರನ್ನು ಎರಡನೇ ತರಗತಿಗೆ ಶಿಫಾರಸು ಮಾಡಿ ಸೇರಿಸಲಾಯಿತು. ಇದು ಶಾಲೆಗೆ ಸೇರಿದ ಒಂದು ವರ್ಷದಲ್ಲಿಯೇ ಮೂರನೇ ತರಗತಿಗೆ ತೇರ್ಗಡೆಯಾಗಲು ಸಹಕಾರಿಯಾಯಿತು.

ಗಾಂಧೀಜಿಯವರ ಹೋರಾಟದ ದಿನಗಳವು. ಎಲ್ಲರೂ ಸ್ವತಂತ್ರ ಭಾರತದ ಕನಸು ಕಾಣುತ್ತಿದ್ದವರು. ಶಾಲೆಯಲ್ಲಿ ಮಕ್ಕಳಿಗೆ ಗಾಂಧೀ ತತ್ವ ಮತ್ತು ವಿಚಾರಗಳನ್ನು ವಿವರಿಸುತ್ತಿದ್ದ ಕಾಲವದು. ಚೇರ್ಕಾಡಿ ಶಾಲೆಯ ರಾಮಚಂದ್ರ ಪಾಟೀಲ ಮಾಸ್ತರರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಗಾಂಧೀಜಿಯವರ ವಸ್ತ್ರ ಸ್ವಾವಲಂಬನೆಯನ್ನು ಅನುಷ್ಠಾನ ಗೊಳಿಸಲೋಸುಗ ಒಂದು ಮಗ್ಗವನ್ನು ಶಾಲೆಯಲ್ಲಿ ಸ್ಥಾಪಿಸಿ,

ಮಕ್ಕಳಿಗೆ ನುರಿತವರಿಂದ ಬಟ್ಟೆ ತಯಾರಿಸುವುದನ್ನು ಪಠ್ಯೇತರ ಚಟುವಟಿಕೆಯಾಗಿ ಕಲಿಸಲು ಪ್ರಾರಂಭಿಸಿದರು. ಅವರಿಗೆ ಗಾಂಧೀ ವಿಚಾರದಲ್ಲಿ ಅಚಲ ಶ್ರದ್ಧೆ. ಅದನ್ನು ಮಕ್ಕಳಿಗೆ ಆಸಕ್ತಿಯಿಂದ ಬೋಧಿಸುತ್ತಿದ್ದರು. ವಿದೇಶಿ ವಸ್ತುಗಳ ಬಹಿಷ್ಕಾರದ ಸಮಯದಲ್ಲಿ ಮಕ್ಕಳಿಗೆ ಸ್ವತಂತ್ರ ಜೀವನದ ಮಾಹಿತಿಯನ್ನು ಕೊಡುವ ಕಾರ್ಯಕ್ರಮದ ಸೂಕ್ಷ್ಮವನ್ನು ಅರಿತ ರಾಯರು ತನ್ನ ಜೀವನೋಪಾಯ ವೃತ್ತಿಗೆ ಇದು ಸೂಕ್ತ ಅಂದುಕೊಂಡರು.

ತರುಣಾವಸ್ಥೆಯತ್ತ ಹೆಜ್ಜೆಯಿಡುತ್ತಿದ್ದ ರಾಯರಿಗೆ ಜೀವನದಲ್ಲಿ ನೆಲೆ ಕಂಡುಕೊಳ್ಳುವ ಅಗತ್ಯವಿತ್ತು. ವಸ್ತ್ರ ತಯಾರಿಸುವುದರಿಂದ ಸ್ವತಂತ್ರ ಬದುಕು ಸಾಧಿಸಲು ಸಾಧ್ಯವಿರುವ ಹಿನ್ನಲೆ ಮತ್ತು ಗಾಂಧೀಜಿಯ ತತ್ವ ವಿಚಾರಗಳು ಅವರಿಗೆ ಭರವಸೆ ಮೂಡಿಸಿದ್ದರಿಂದ, ಆಸಕ್ತಿಯಿಂದ ಮಗ್ಗದಲ್ಲಿ ವಸ್ತ್ರ ತಯಾರಿಸುವ ತರಬೇತಿ ಪಡೆಯಲಾರಂಭಿಸಿದರು. ಶಾಲೆಯ ಶಿಕ್ಷಣ ಮಹತ್ವವೆನಿಸಲಿಲ್ಲ. ವೃತ್ತಿ ಶಿಕ್ಷಣ ಪಡೆದುಕೊಂಡ ರಾಯರು, ಮೂರನೇ ತರಗತಿಗೆ, ಶಾಲೆಯ ಶಿಕ್ಷಣಕ್ಕೆ ವಿದಾಯ ಹೇಳಿದರು. ನೇಕಾರಿಕೆ ಕುಲಕಸುಬಲ್ಲದಿದ್ದರೂ, ನೇಕಾರರಿಗಿಂತ ಚೆನ್ನಾಗಿ ನೇಯುವ ಕಲೆಯನ್ನು ಕರಗತ ಮಾಡಿಕೊಂಡರು. ಇವರ ಸ್ವಯಂ ಸ್ಫೂರ್ತಿಯಿಂದ ಕಲಿತ ವಿದ್ಯೆಯಿಂದ ಆದಾಯ ಪಡೆಯುವುದನ್ನು ಗಮನಿಸಿದ ಭಾವ, ಮನೆಯಲ್ಲಿಯೇ ಒಂದು ಮಗ್ಗ ಹೊಂದಿಸಿಕೊಟ್ಟು ಅವರ ಸಂಸಾರದ ಆದಾಯ ಹೆಚ್ಚಿಸಿಕೊಳ್ಳುವಂತೆ ನೋಡಿಕೊಂಡರು. ರಾಯರು ಕೂಡಾ ತನ್ನ ಭವಿಷ್ಯದ ಚಿಂತನೆ ಮಾಡಿ, ತಾನು ದುಡಿದ ಹಣದಲ್ಲಿ ಸ್ವಲ್ಪ ಭಾಗ ತನ್ನ ಉಪಯೋಗಕ್ಕೆ ಉಳಿಸಲು ಮನಸ್ಸು ಮಾಡಿದರು. ರಾಯರ ಈ ಚಿಂತನೆ ಭಾವನಿಗೆ ಹಿಡಿಸಲಿಲ್ಲ. ಒಂದು ದಿನ ಜಗಳ ಮಾಡಿ ಉಟ್ಟ ಬಟ್ಟೆಯಲ್ಲಿಯೇ ಮನೆ ಬಿಡುವಂತೆ ಆದೇಶ ಮಾಡಿದರು. ಅದನ್ನು ಸವಾಲಾಗಿ ಸ್ವೀಕರಿಸಿ, ಮನೆಯಿಂದ ಏನನ್ನು ತೆಗೆದುಕೊಳ್ಳದೆ, ಉಟ್ಟಿದ್ದ ಬೈರಾಸಿನಲ್ಲಿಯೇ ಐದು ಮೈಲು ದೂರದ ಬ್ರಹ್ಮಾವರಕ್ಕೆ ನಡೆದುಕೊಂಡು ಹೋಗಿ ಅಗತ್ಯದ ಬಟ್ಟೆಯನ್ನು ಹೊಂದಿಸಿಕೊಂಡು, ಶಾಲೆಯಲ್ಲಿ ತನ್ನ ಮಗ್ಗದ ಗುರುವಾಗಿದ್ದ ಸಾಲಿಕೇರಿಯ ವೀರಣ್ಣ ಶೆಟ್ಟಿಗಾರರ ಮನೆಯಲ್ಲಿ ವಾಸ್ತವ್ಯ ಹೂಡಿ ತನ್ನ ವೃತ್ತಿಯನ್ನು ಮುಂದುವರಿಸಿ ಸ್ವಾವಲಂಬನೆಯ ದಾರಿ ಹಿಡಿದರು. ಸ್ವತಃ ಅಡುಗೆ ಮಾಡಿಕೊಂಡು ಹಸಿವು ನೀಗಿಸಿಕೊಳ್ಳುವುದರ ಜೊತೆಗೆ ಬಿಡುವಿದ್ದಾಗ ಗಾಂಧೀ ಚಿಂತನೆಗಳತ್ತ ಗಮನ ಹರಿಸಿಕೊಂಡು ಅವರ ಮಾರ್ಗದಲ್ಲಿ ನಡೆಯುವ ಸಾಹಸ ಮಾಡುತ್ತಿದ್ದರು. ತನ್ನ ಖರ್ಚಿಗೆ ಮೀರಿದ ಆದಾಯ ಕೇವಲ ವಸ್ತ್ರ ತಯಾರಿಸುವುದರಿಂದ ಬರಲಾರಂಭಿಸಿತು. ಯಾವ ರೀತಿಯ ದುರಭ್ಯಾಸವನ್ನೂ ಅಂಟಿಸಿಕೊಳ್ಳದ ರಾಯರಿಗೆ ಹಣ ಉಳಿಸುವುದು ಕಷ್ಟವಾಗಲಿಲ್ಲ. ಗಾಂಧೀಜಿಯವರ ವಸ್ತ್ರ ಸ್ವಾವಲಂಬನೆಯಲ್ಲಿ ಸತ್ಯವನ್ನು ಅನುಭವಿಸಿ, ಜೀವನದಲ್ಲಿ ಸುಖದ ಭರವಸೆಯನ್ನು ನೋಡಲಾರಂಭಿಸಿದರು.

**ಜೊತೆಗಾತಿಯೊಡನೆ ಜೀವನ ಪ್ರಯಾಣ**

ಜೀವನಾವಶ್ಯಕ ಆದಾಯದ ದಾರಿಯನ್ನು ಕಂಡುಕೊಂಡ ನಂತರ, ಸಹಜವಾಗಿ ಜೊತೆಗಾತಿಯ ಅವಶ್ಯಕತೆಯತ್ತ ಮನಸ್ಸು ತಿರುಗಲಾರಂಭಿಸಿತು. ಸುಂದರ ಯುವಕ ಮತ್ತು ಸಂಸಾರ ನಿಭಾಯಿಸಲು ವೃತ್ತಿಯಿರುವಾಗ, ಭಾವೀ ಪತ್ನಿಯ ಸೋದರ ಮಾವ ತನ್ನ ತಂಗಿ ಮಗಳ ಪ್ರಸ್ತಾಪವನ್ನು ಮಾಡಿದರು. ಎರಡನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ಷೋಡಷ ವರ್ಷದ ಲಕ್ಷ್ಮೀಯವರು ಮಲತಾಯಿಯಿಂದ ಸಹಜವಾಗಿ ಬೇರ್ಪಡಲು ತಯಾರಿದ್ದು, ರಾಯರ ಪ್ರಸ್ತಾಪವನ್ನು ಒಪ್ಪಿಕೊಂಡರು. 1944ರಲ್ಲಿ ಉಡುಪಿಯ ಸಮೀಪದ ಪುತ್ತೂರು ದೇವಸ್ಥಾನದಲ್ಲಿ ಸರಳ ರೀತಿಯಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ರಾಯರ ಅರ್ಧಾಂಗಿಯಾಗಿ ಅವರೊಂದಿಗೆ ಹೆಜ್ಜೆ ಹಾಕಲು ತಯಾರಾದರು. ಮದುವೆಯ ನಂತರ ಹಲವಾರು ಕಷ್ಟದ ಸಂದರ್ಭಗಳು ಎದುರಾದರೂ ಸಹಿಸಿಕೊಂಡು ಅವರನ್ನು ಅನುಸರಿಸಿಕೊಂಡು ಬದುಕಿದರು. ಪತಿಯ ಆಶೆ ಆಕಾಂಕ್ಷೆಗಳಿಗೆ ವಿರುದ್ಧವಾಗಿ ವರ್ತಿಸುವುದನ್ನು ಅವರು ಕಲ್ಪಿಸಿಕೊಳ್ಳಲಾರರು ಕೂಡ. ಮಗ್ಗವನ್ನೇ ನೋಡದವರು, ಸ್ವ ಇಚ್ಛೆಯಿಂದ ಮಗ್ಗ ಕಲಿತು ಪತಿಗೆ ಸಮನಾಗಿ ದುಡಿದರು. ಕೆಲವು ಸಂದರ್ಭಗಳಲ್ಲಿ ಪತಿಗಿಂತಲೂ ಹೆಚ್ಚು ಕೆಲಸ ಮಾಡಿದ ಧೀರ ಗೃಹಿಣಿಯಾಗಿದ್ದರು.

ಮನೆಯ ಕೆಲಸ, ಗೋಸೇವೆ, ಮಕ್ಕಳ ಲಾಲನೆ ಪಾಲನೆ, ನೇಯ್ಗೆ ಮುಂತಾದ ಕಾಯಕಗಳಲ್ಲಿ ತೃಪ್ತಿಯನ್ನು ಕಂಡರು. ರಾಯರು ಮಗ್ಗ ಮತ್ತು ಭೂಮಿಯಲ್ಲಿ ಅವಿರತ ಶ್ರಮ ಪಟ್ಟಿದ್ದರ ಪರಿಣಾಮ ಅವರ ಆರೋಗ್ಯದಲ್ಲಿ ಏರುಪೇರಾಯಿತು. ಸ್ಥಳೀಯ ವೈದ್ಯರಿಗೆ ರೋಗದ ಗುಟ್ಟು ತಿಳಿಯದೆ ಮಂಗಳೂರಿನಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ತೆರಳುವ ಪ್ರಸಂಗ ಬಂತು. ಆರು ತಿಂಗಳು ಅವರ ಅನುಪಸ್ಥಿತಿಯಲ್ಲಿ ತಾನೇ ಮಗ್ಗದಲ್ಲಿ ಕೆಲಸ ಮಾಡಿ ಸಂಪಾದಿಸಿ ಸಂಸಾರದ ಮತ್ತು ಔಷಧ ಖರ್ಚುಗಳನ್ನು ನಿಭಾಯಿಸಿ ತೃಪ್ತಿ ಪಟ್ಟಿದ್ದಾರೆ. ಚಿಕಿತ್ಸೆಗೆ ಹಣ ಕಡಿಮೆಯಾದಾಗ,

ತವರು ಮನೆಯಲ್ಲಿ ಕೊಟ್ಟ ಆಭರಣವನ್ನು ಮಾರಿ ಪತಿಯನ್ನು ಉಳಿಸಿಕೊಂಡಿದ್ದರು. ಮುಂದೆ ಆಭರಣಗಳನ್ನು ಮರಳಿ ಹೊಂದುವ ಆಸೆಯಿದ್ದರೂ, ಪತಿಯ ಇಚ್ಛೆಗೆ ವಿರುದ್ಧವಾಗಿ ಅದನ್ನು ಹೊಂದಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಅವರ ಅತಿ ಶ್ರಮದ ಫಲಸ್ವರೂಪ 1980ರ ಹೊತ್ತಿಗೆ ಮನೆ ಕೆಲಸ ಮಾಡಲೂ ಸಾಧ್ಯವಾಗದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಆಗ ಅವರ ವಯಸ್ಸು ಸುಮಾರು ಅರವತ್ತೈದು ವರ್ಷಗಳು. ಆದರೂ ತನ್ನ ಕೆಲಸವನ್ನು ತಾನೇ ಮಾಡಿ ಯಾರಿಗೂ ಹೊರೆಯಾಗದೆ ಬದುಕುತ್ತಿದ್ದಾರೆ. 81ನೇ ವಯಸ್ಸಿನಲ್ಲಿ ತನ್ನ ಜೀವನ ಸಂಗಾತಿಯನ್ನು ಕಳೆದುಕೊಂಡಾಗ, ಅದನ್ನು ನಿಸರ್ಗ ನಿಯಮದಂತೆ ಸ್ವೀಕರಿಸಿ, ನಿರ್ಲಿಪ್ತ ಜೀವನಕ್ಕೆ ಒಗ್ಗಿಕೊಂಡು ಯಾರಿಗೂ ಭಾರವಾಗದೇ ಕಿರಿಯ ಮಗನೊಡನೆ ಕಾಲ ಕಳೆಯುತ್ತಿದ್ದಾರೆ.

**ಆಹಾರದ ಅಭಾವ:**
**ಗಾಂಧೀಜಿಯ ಅನ್ನ ಸ್ವಾವಲಂಬನೆಯ ತತ್ವ**

ರಾಯರು ಶ್ರದ್ಧೆಯಿಂದ ಮಾಡುತ್ತಿದ್ದ ಕೆಲಸದ ಫಲಸ್ವರೂಪ, ಬ್ರಹ್ಮಾವರದ ಖಾದಿ ಕೇಂದ್ರವನ್ನು ನಡೆಸುವ ಜವಾಬ್ದಾರಿ ಹುಡುಕಿಕೊಂಡು ಬಂತು. ಮುಂದೆ ಮಂಗಳೂರಿನ ಖಾದಿ ಕೇಂದ್ರದಲ್ಲಿ ಖರೀದಿಸಿದ ಕೆಲವು ನೂಲುಗಳು ಜಿಡುಕಿನಿಂದ ಕೂಡಿದ್ದು, ಯಾವ ನೇಕಾರರೂ ಅದನ್ನು ಸ್ವೀಕರಿಸಲು ತಯಾರಿರಲಿಲ್ಲ. ಹಣ ಕೊಟ್ಟು ಖರೀದಿಸಿದ ಸಾಕಷ್ಟು ನೂಲನ್ನು ಏನು ಮಾಡುವುದೆಂಬುದೇ ಕೇಂದ್ರಕ್ಕೆ ಚಿಂತೆಯಾಗಿತ್ತು. ರಾಯರ ಕೈಚಳಕದ ಸುದ್ದಿ ಅವರಿಗೆ ತಲುಪಿದ್ದರಿಂದ ಅವರನ್ನು ಕರೆಸಿ ಅದಕ್ಕೇನಾದರೂ ಗತಿ ಕಾಣಿಸಿಕೊಡಲು ಕೇಳಿಕೊಳ್ಳಲಾಯಿತು. ರಾಯರು ಅದನ್ನು ಪರಿಶೀಲಿಸಿ ವಸ್ತ್ರ ಮಾಡಿಕೊಡುವ ಜವಾಬ್ದಾರಿ ವಹಿಸಿಕೊಂಡರು. ಅವರ ಕೈಯಲ್ಲಿ ಹಠಮಾರಿ ನೂಲಿಗೆ ಬಗ್ಗದೆ ಬೇರೆ ಉಪಾಯವಿರಲಿಲ್ಲ. ಜಿಡಕು ನೂಲಿನಿಂದ ತಯಾರಾದ ಗುಣ ಮಟ್ಟದ ವಸ್ತ್ರ ನೋಡಿ ಕೇಂದ್ರದವರಿಗೆ ಪರಮಾಶ್ಚರ್ಯ. ಇಲ್ಲಿಯ ಯಶಸ್ಸು ರಾಯರನ್ನು ಮೂಡಬಿದ್ರೆಯ ಖಾದಿ ಕೇಂದ್ರ  ತಲುಪುವಂತೆ ಮಾಡಿತು. ಅಲ್ಲಿ ಖಾದಿ ಉತ್ಪಾದನೆಯ ಜೊತೆಗೆ ಗೋಶಾಲೆಯ ಜವಾಬ್ದಾರಿ ಕೂಡಾ ಇವರ ಹೆಗಲಿಗೆ ಬಂತು. ಕೇಂದ್ರವನ್ನು ನೋಡಿಕೊಳ್ಳುವ ಜವಾಬ್ದಾರಿ ಬಂದಾಗಲೂ ತನ್ನ ಕೆಲಸವನ್ನು ಬಿಡಲಿಲ್ಲ. ಉಳಿದ ಕೆಲಸಗಾರರನ್ನು ಹುರಿದುಂಬಿಸಿ ಕೆಲಸ ತೆಗೆದುಕೊಳ್ಳುವುದರೊಂದಿಗೆ ತನ್ನ ಪಾಲಿನ ನೇಯುವ ಕೆಲಸ ಮಾಡುತ್ತಾ ಉತ್ತಮ ಮಾರ್ಗದರ್ಶಕರಾಗಿದ್ದರು. ಇಲ್ಲಿ ಅವರ ಜೀವನದಲ್ಲಿ ಪುತ್ರಿಯ ಆಗಮನವಾಯಿತು.

ಸುಮಾರು 1949ರ ಸಮಯದಲ್ಲಿ ಎರಡನೇ ಮಹಾಯುದ್ಧದ ಪರಿಣಾಮ, ಹಣ ಕೊಟ್ಟರೂ ಅಕ್ಕಿ ಸಿಗಲಾರದ ಪರಿಸ್ಥಿತಿ ಉಂಟಾಗಿ ಜನರೆಲ್ಲಾ ಕಂಗಾಲು. ಸರಕಾರ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸಿ ಹೇಗೋ ನಿಭಾಯಿಸುತ್ತಿತ್ತು. ಹಣವಿದ್ದರೂ ಹೊಟ್ಟೆ ಪೂರ್ತಿ ಹಿಟ್ಟಿಗೆ ಗತಿಯಿಲ್ಲದಾಯಿತು. ನಮ್ಮ ಪ್ರದೇಶಕ್ಕೆ ಒಗ್ಗದ ಹಿಟ್ಟನ್ನು ಬಳಸಿ ಪ್ರಾಣ ರಕ್ಷಣೆಯನ್ನು ಮಾಡಿಕೊಳ್ಳುವ ಪರಿಸ್ಥಿತಿ. ಸದ್ಯದ ದೇಶದ ಪರಿಸ್ಥಿತಿಯೂ ಯೋಚಿಸುವಂತೆ ಮಾಡುತ್ತಿದೆ. ರೈತರ ಉತ್ಪಾದನೆಗೆ ಅಸಲು ಬೆಲೆ ಕೂಡಾ ದೊರೆಯದ ಸನ್ನಿವೇಶ, ಸಮಾಜದ ಹಿತ ಕಾಪಾಡಲಾರದು. ಆಹಾರಕ್ಕಾಗಿ ಯುದ್ಧವಾಗುವ ಸಂದರ್ಭ ಬಂದರೂ ಆಶ್ಚರ್ಯವಿಲ್ಲ.

ಈ ಸಂದರ್ಭದಲ್ಲಿ ರಾಯರ ಮನಸ್ಸಿಗೆ ಬಂದದ್ದು ಗಾಂಧೀಜಿಯವರ ಅನ್ನ ಸ್ವಾವಲಂಬನೆಯ ತತ್ವ. ವಸ್ತ್ರ ಸ್ವಾವಲಂಬನೆಯಲ್ಲಿ ಉತ್ತೀರ್ಣರಾಗಿ ಜೀವನೋಪಾಯ ವೃತ್ತಿಯನ್ನು ಕಂಡುಕೊಂಡರೂ ಹಸಿವನ್ನು ತಣಿಸಿಕೊಳ್ಳಲು ಅಸಾಧ್ಯವಾದುದು ಅವರನ್ನು ಈ ದಿಸೆಯಲ್ಲಿ ಚಿಂತನೆ ಮಾಡುವಂತೆ ಪ್ರೇರೇಪಿಸಿತು. ಅದೇ ಸಮಯದಲ್ಲಿ ಖಾದಿ ಉತ್ಪನ್ನಗಳಿಗೆ ಬೇಡಿಕೆಯೂ ಕಡಿಮೆಯಾಗತೊಡಗಿತ್ತು. ಆಧುನಿಕ ಜವಳಿ ಯಂತ್ರಗಳ ಭರಾಟೆಯಲ್ಲಿ ಕೈಮಗ್ಗದ ಉತ್ಪಾದನೆಗಳು ಜನರಿಗೆ ದುಬಾರಿಯೆನಿಸಿದವು. ನೂಲಿನ ಸರಬರಾಜು ಕಡಿಮೆ, ನೇಯ್ದ ವಸ್ತ್ರಕ್ಕೆ ಬೇಡಿಕೆಯಿಲ್ಲದ ಪರಿಸ್ಥಿತಿ. ಸ್ವಾತಂತ್ರ್ಯ ಪೂರ್ವದಲ್ಲಿ ಜನರನ್ನು ಒಗ್ಗೂಡಿಸಿದ ಚರಕ ಕ್ರಾಂತಿ ಭಾರತ ಸ್ವತಂತ್ರವಾದ ನಂತರ ಸ್ವಯಂ ಚಾಲಿತ ಯಂತ್ರಗಳ ಸದ್ದಿನಲ್ಲಿ ನಿಂತುಹೋಯಿತು. ಗಾಂಧೀಜಿಯ ಸ್ವರಾಜ್ಯ ಕಲ್ಪನೆಯಲ್ಲಿದ್ದ, ಭಾರತದ ಜನರಿಗೆ ಉದ್ಯೋಗ ಒದಗಿಸುವ ಬಟ್ಟೆ ಮತ್ತು ಕೃಷಿ ಕ್ಷೇತ್ರಗಳು ನಿರ್ಲಕ್ಷ್ಯಕ್ಕೆ ಒಳಗಾದುದು ದೇಶದ ದುರಂತ. ರಾಯರಿಗೆ, ಸ್ವತಂತ್ರ ಭಾರತದಲ್ಲಿ ವಸ್ತ್ರ ಸ್ವಾವಲಂಬನೆಯ ಮಂತ್ರ ತನ್ನ ಅಸ್ತಿತ್ವವನ್ನು ಕಳೆದುಕೊಂಡು ನಿರುದ್ಯೋಗ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ಗೋಚರಿಸತೊಡಗಿತು. ಅಂತಹ ಸ್ಥಿತಿ ಬರುವ ಮುನ್ನವೇ ಪರ್ಯಾಯ ಸುಸ್ಥಿರ ಮಾರ್ಗದ ಚಿಂತನೆಯಲ್ಲಿದ್ದಾಗ, ಗಾಂಧೀಜಿಯವರ ಅನ್ನ ಸ್ವಾವಲಂಬನೆ ನೆನಪಿಗೆ ಬಂತು.

ಹಸಿವು ತಣಿಸಲು ಬೇಕಾದುದನ್ನು ತಾನೇ ಸಂಪಾದಿಸಿಕೊಂಡರೆ, ಮೂಲಭೂತ ಸಮಸ್ಯೆಗೆ ಪರಿಹಾರ. ಆದರೆ ಅನ್ನ ಬೆಳೆಯುವುದೆಲ್ಲಿ? ಹಿರಿಯರು ಮಾಡಿಟ್ಟ ಆಸ್ತಿಯಿಲ್ಲ. ಮಗ್ಗದಲ್ಲಿ ಸಂಪಾದಿಸಿದ ಹಣದ ಬಹುಭಾಗ ಸಂಸಾರದ ನಿರ್ವಹಣೆಯಲ್ಲಿಯೇ ವೆಚ್ಚವಾಗಿತ್ತು. ಉಳಿಸಿದ ಹಣ ಜಾಗ ಖರೀದಿಸಲು ಸಾಲದು. ಗೇಣಿಗಾದರೂ ಸರಿ, ಮೂಡಬಿದರೆಯ ಆಸುಪಾಸು ಎರಡು ಎಕರೆ ಜಾಗವನ್ನು ಹೊಂದಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರು. ಎಲ್ಲಿಯೂ ಅವರಿಗೆ ಸರಿಹೊಂದುವ ಜಾಗ ಸಿಗಲಿಲ್ಲ. ಮತ್ತೆ ನೆನಪಾದುದು, ಸುಮಾರು ಒಂದು ದಶಕದ ಹಿಂದೆ ವಿದಾಯ ಹೇಳಿದ ಚೇರ್ಕಾಡಿ.

**ಮರಳಿ ಚೇರ್ಕಾಡಿಗೆ**

ಒಂದು ದಶಕದ ಹಿಂದೆ ಉಟ್ಟ ಬಟ್ಟೆಯಲ್ಲಿಯೇ ಚೇರ್ಕಾಡಿಗೆ ವಿದಾಯ ಹೇಳಿದ ನಂತರ ಭಾವನೊಂದಿಗೆ ಸಂಪರ್ಕವಿರಲಿಲ್ಲ. ಆದರೆ ಅವರ ಹತ್ತಿರ ಸುಮಾರು ಎರಡು ಎಕರೆ ಗುಡ್ಡ ಜಾಗವಿರುವುದು ತಿಳಿದಿತ್ತು. ಅದನ್ನು ಖರೀದಿಸಲು ಇವರ ಸಂಪಾದನೆಯ ಹಣದ ಭಾಗ ವಿನಿಯೋಗವಾಗಿದ್ದೂ ಗೊತ್ತಿತ್ತು. ಎಲ್ಲೆಲ್ಲಿ ಅಲೆದಾಡುವುದಕ್ಕಿಂತ ಭಾವನ ಹತ್ತಿರ ಹೋದರೆ ಹೇಗೆ ಎನ್ನುವ ವಿಚಾರ ಮನಸ್ಸಿಗೆ ಬಂದು ಸ್ನೇಹಿತರ ಮೂಲಕ ಕೇಳಿಸಿದರು.

ರಾಯರು ದುಡಿದು ಗಳಿಸಿದ್ದರಲ್ಲಿ ತನಗೆ ಪೂರ್ಣ ಹಕ್ಕಿದೆ ಅಂದುಕೊಂಡಿದ್ದ ಭಾವ, ಹಣ ಕೊಡಲು ನಿರಾಕರಿಸಿದ್ದಕ್ಕೆ ಮನೆ ಬಿಟ್ಟು ಹೊರಡು ಎಂದು ಆವೇಶದ ಭರದಲ್ಲಿ ಹೇಳಿದ್ದರು. ಇಬ್ಬರೂ ಅದನ್ನು ಪ್ರತಿಷ್ಠೆಯ ವಿಚಾರವಾಗಿಸಿಕೊಂಡು, ಒಬ್ಬರನ್ನೊಬ್ಬರು ಭೇಟಿಯಾಗಲು ಪ್ರಯತ್ನಿಸಲಿಲ್ಲ. ಅವರಿಗೂ ರಾಯರನ್ನು ಓಡಿಸಿದ ಕೊರಗು ಕಾಡುತ್ತಿತ್ತು. ಅವರ ಮದುವೆಯಾದ ಒಬ್ಬಳೇ ಮಗಳು ವಾಂತಿ ಭೇದಿಗೆ ಸರಿಯಾದ ಚಿಕಿತ್ಸೆ ನೀಡಲಾಗದೆ ತೀರಿಕೊಂಡಿದ್ದಳು. ತನ್ನ ಇಳಿ ವಯಸ್ಸು ಪ್ರಾರಂಭವಾದ ಸಮಯದಲ್ಲಿ ರಾಯರೇ ಒಂದು ಮೆಟ್ಟಲು ಇಳಿದದ್ದು ಭಾವನಿಗೆ ಸಾಕಾಯಿತು. ಕೂಡಲೇ ಮೂಡಬಿದರೆಯ ಬಸ್ಸು ಹತ್ತಿ ರಾಯರನ್ನು ಭೇಟಿಯಾಗಿ ಆತ್ಮೀಯವಾಗಿ ಕರೆದರು. ಭಾವ ವಾಸಿಸುತ್ತಿದ್ದುದು ಮುಂಡ್ಕಿನಜೆಡ್ಡು ಚೇರ್ಕಾಡಿ ಗ್ರಾಮದ ಗಡಿ. ಅವರ ಎರಡೂವರೆ ಎಕ್ರೆ ಜಾಗವಿದ್ದುದು ಆರೂರಿನ ಗಡಿಯಲ್ಲಿ, ಅರ್ಧ ಕಿ. ಮೀ. ಅಂತರದಲ್ಲಿ. ಗ್ರಾಮ ಬೇರೆ ಬೇರೆ. ಆರೂರಿನ ಜಾಗವನ್ನು ಇಚ್ಛಾನುಸಾರ ಮೂಲಗೇಣಿಗೆ ಬರೆದುಕೊಟ್ಟದ್ದೂ ಆಯಿತು. ರಾಯರ ಸಂತೋಷಕ್ಕೆ ಪಾರವೇ ಇರಲಿಲ್ಲ. ಜಾಗ ಹೊಂದಿಸಿಕೊಳ್ಳುವುದೇ ಸಮಸ್ಯೆಯಾದಾಗ, ಯಾವ ಪ್ರತಿಫಲವಿಲ್ಲದೇ ಹೂವಿನಷ್ಟು ಹಗುರವಾಗಿ ಕೆಲಸ ನಡೆದುಹೋಯಿತು. ಇನ್ನು ಮೂಡಬಿದರೆಯ ಖಾದಿ ಕೇಂದ್ರದಲ್ಲಿ ಮುಂದುವರಿಯುವುದರಲ್ಲಿ ಅವರಿಗೆ ಯಾವ ಆಸಕ್ತಿಯೂ ಉಳಿಯಲಿಲ್ಲ. ಮುಳುಗುವ ಹಡಗನ್ನು ನಂಬಿಕೊಂಡಿರುವುದು ಮೂರ್ಖತನವೆಂದು ಎಣಿಸಿ, ಅನ್ನ ಸ್ವಾವಲಂಬನೆಯ ದಾರಿ ಹುಡುಕಲು ಅಣಿಯಾದರು.

1951ರ ಬೇಸಿಗೆಯಲ್ಲಿ ಮೂಡಬಿದರೆಗೆ ವಿದಾಯ ಹೇಳಿ, ಆರೂರಿನ ತನ್ನ ಮೂಲಗೇಣಿ ಜಾಗಕ್ಕೆ ಹೆಂಡತಿ ಮಗಳೊಂದಿಗೆ ಬಂದಿಳಿದರು. ಗುಡ್ಡ ಜಾಗ. ಇಳಿಜಾರು ಪ್ರದೇಶ. ಕಲ್ಲು ಮುಳ್ಳು ಬಿಟ್ಟರೆ ಬೇರೇನೂ ಸಿಗದು. ನೆತ್ತಿಯ ಮೇಲೆ ಸೂರ್ಯನೇ ಆಸರೆ. ಭಾವ ತೋಡಿಸಿದ ಬಾವಿಯಲ್ಲಿ ನೀರಿನ ಸಂಪತ್ತು ಬಿಟ್ಟರೆ ಎಲ್ಲಾ ಭಣ, ಭಣ. ಇಲ್ಲಿಯೇ ಸೂಕ್ತ ಜಾಗ ಆರಿಸಿ ಒಂದು ಅರಮನೆ ನಿರ್ಮಿಸಿಕೊಂಡರು. ಸದಾ ಕತ್ತಲೆಯ ಅಡಿಗೆಮನೆ, ಇನ್ನೊಂದು ಪಡಸಾಲೆ. ಇದು ಮಲಗುವ ಕೋಣೆಯೂ ಕೂಡಾ. ಮೂರು ಜನ ಮಲಗುವ ಈ ಜಾಗದಲ್ಲಿ ತನ್ನೊಂದಿಗೆ ತಂದಿದ್ದ ಮಗ್ಗಕ್ಕೆ ಕೂಡಾ ತಂಗಲು ಸ್ಥಳ. ಇದು ರಾಯರ ಅರಮನೆಯ ವಿವರ. ಮಗ್ಗದ ಮಧ್ಯದಲ್ಲಿ ಜಾಗ ಮಾಡಿಕೊಂಡು ರಾತ್ರಿ ಗಾಢ ನಿದ್ರೆ. ಮನೆಯ ಪೂರ್ಣ ವಿಸ್ತಾರ ಸುಮಾರು ಮುನ್ನೂರು ಚದರಡಿ. ಮಳೆ, ಬಿಸಿಲಿನ ರಕ್ಷಣೆಗೆ ಹುಲ್ಲಿನ ಛಾವಣಿ. ಪ್ರತಿವರ್ಷ ಹೊಸ ಹುಲ್ಲಿನ ಹೊದಿಕೆಯಾಗಬೇಕು. ಅತ್ಯಂತ ಸರಳ ಗುಡಿಸಲಿನಲ್ಲಿ ರಾಯರ ಅನ್ನ ಸ್ವಾವಲಂಬನೆಯ ಹೋರಾಟ ಪ್ರಾರಂಭ. ಈ ಸಮಯದಲ್ಲಿ ಮಡದಿಗೆ ನಾಲ್ಕನೆಯ ಗರ್ಭಧಾರಣೆಯಾಗಿತ್ತು. ಸ್ವಲ್ಪ ದಿನಗಳಲ್ಲಿ ಅವರನ್ನು ಮಗಳೊಂದಿಗೆ ಮಂಗಳೂರಿನ ತವರು ಮನೆಗೆ ಕಳುಹಿಸಿದರು. ತಾನೊಬ್ಬನೆ ಕೃಷಿ ತಪಸ್ಸನ್ನು ಪ್ರಾರಂಭಿಸಿದರು. 1952ರಲ್ಲಿ ಹಿರಿಯ ಮಗನ ಜನನವಾಯಿತು. ಬಚ್ಚಲು, ಸಂಡಾಸಿಲ್ಲದ ಈ ಮನೆಯಲ್ಲಿ ಈಗ ನಾಲ್ಕು ಜನರ ವಾಸ.

**ಭೂಮಿ ತಾಯಿಯೊಂದಿಗೆ ಬೆಸುಗೆ**

ತನ್ನದೇ ಸ್ವಂತ ಜಮೀನು ದೊರೆತದ್ದು ರಾಯರಿಗೆ ಆನೆ ಬಲ ಬಂದಿತ್ತು. ಭೂಮಿತಾಯಿಯ ಮಡಿಲಲ್ಲಿ ಯಶಸ್ವಿಯಾಗಿ ಬದುಕುವೆನೆಂಬ ಆತ್ಮವಿಶ್ವಾಸ ಉಕ್ಕುತ್ತಿತ್ತು. ಯಾವಾಗ ಭೂಮಿಯನ್ನು ಉತ್ತು ಬೆಳೆದು ಉಣ್ಣುವೆನೋ ಎನ್ನುವ ತವಕ. ಆದರೆ ಮೊದಲನೇ ವರ್ಷ ಕಾಲಿಟ್ಟಾಗ ಮಳೆಗಾಲ ಪ್ರಾರಂಭವಾಗುವ ದಿನಗಳಾದ್ದರಿಂದ ಆ ವರ್ಷ ಮಗ್ಗ ನಂಬಿಕೊಂಡೇ ಜೀವನ ಸಾಗಿಸಬೇಕಾಯಿತು. ತನ್ನ ನೇಯ್ಗೆ ಕಾಯಕದ ಮಧ್ಯೆ ಬಿಡುವು ಮಾಡಿಕೊಂಡು ಭೂಮಿ ಹಸನು ಮಾಡುವುದು, ಗೊಬ್ಬರ ಸರಬರಾಜು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ತರಕಾರಿ ಬೆಳೆಸುವ ಪ್ರಯೋಗವೂ ನಡೆದಿತ್ತು.

ಇಲ್ಲಿಯ ಮುಖ್ಯ ಆಹಾರ ಧಾನ್ಯ ಭತ್ತ. ಇದನ್ನು ಬೆಳೆಸಲು ಸಮತಟ್ಟಾದ ಜಾಗ, ಉಳುಮೆ ಮಾಡಲು ಎತ್ತು, ನೇಗಿಲುಗಳ ಅವಶ್ಯಕತೆ, ಜೊತೆಗೆ ನೀರು ನಿಲ್ಲಿಸಿ ಬೆಳೆಸಬೇಕು. ಇದು ನೀರಿರುವ ಬಯಲು ಪ್ರದೇಶದಲ್ಲಿ ಸುಲಭ. ಆದರೆ ರಾಯರ ಪಾಲಿಗೆ ಬಂದದ್ದು ಇಳಿಜಾರು ಗುಡ್ಡ ಪ್ರದೇಶ. ಇಲ್ಲಿ ಮಳೆ ಬಂದ ಅರ್ಧ ಗಂಟೆಯಲ್ಲಿ ನೀರು ಬಿದ್ದ ಕುರುಹೇ ಇರುವುದಿಲ್ಲ. ಇಂತಹ ಬರಡು ಜಾಗದಲ್ಲಿ ಭತ್ತ ಬೆಳೆಯುವ ಸಾಹಸಕ್ಕೆ ಇಳಿದರು. ಜಾಗ ಸಮತಟ್ಟು ಮಾಡಿ ಮಳೆ ಬರುವಾಗ ನೀರನ್ನು ಹಿಡಿದಿಟ್ಟು, ಬಾಡಿಗೆಗೆ ಎತ್ತು, ನೇಗಿಲು, ಕೂಲಿಯಾಳುಗಳನ್ನು ಹೊಂದಿಸಿ ಮಳೆಗಾಲದ ಪ್ರಾರಂಭದಲ್ಲಿ ಭತ್ತ ಬೆಳೆಸುವ ಹರಸಾಹಸ. ಮಗ್ಗದಲ್ಲಿನ ಸಂಪಾದನೆ ಮಣ್ಣಿಗೆ ಸುರಿಯುವುದು. ಉತ್ಪತ್ತಿಗಿಂತ ಖರ್ಚು ಹೆಚ್ಚು. ನೆರೆಹೊರೆಯಲ್ಲಿ ಸಮಯಕ್ಕೆ ಸರಿಯಾಗಿ ಕೃಷಿ ಪರಿಕರಗಳು, ಕೂಲಿಯಾಳುಗಳು ದೊರೆಯದೆ ಕಷ್ಟವಾಗುತ್ತಿತ್ತು. ಕೇವಲ ಭತ್ತವಲ್ಲದೆ, ತರಕಾರಿ, ಬಾಳೆ, ಮೆಣಸು ಮುಂತಾದ ಅಲ್ಪ ಕಾಲದಲ್ಲಿ ಬೆಳೆಯುವ ಆಹಾರ ಪದಾರ್ಥಗಳನ್ನು, ದೀರ್ಘಕಾಲದ ತೆಂಗು, ಗೇರು, ಹಲಸು, ಮಾವು ಬೆಳೆಗಳನ್ನು ಅಭಿವೃದ್ಧಿ ಪಡಿಸುತ್ತಿದ್ದರು. ಸುಮಾರು ಹತ್ತು ವರ್ಷ ಇದೇ ಅಸಫಲತೆಯ ಹೋರಾಟದ ಪುನರಾವರ್ತನೆ. ಆದರೂ ಛಲ ಬಿಡದ ತ್ರಿವಿಕ್ರಮನಂತೆ ಅನ್ನ ಸ್ವಾವಲಂಬನೆಯ ಗುರಿಯನ್ನು ಬಿಡಲಿಲ್ಲ.

**ದೇಶದ ಹಸಿರು ಕ್ರಾಂತಿಯ ಸಮಯದಲ್ಲಿ ರಾಯರ ನೆಲದಲ್ಲಿ ಒಂದು ಹುಲ್ಲಿನ ಯಶಸ್ವೀ ಕ್ರಾಂತಿ**

ಗುಡ್ಡ ಜಾಗದಲ್ಲಿ ಅನ್ನ ಸ್ವಾವಲಂಬನೆಯ ನಿರಂತರ ಹೋರಾಟದಲ್ಲಿ ತೊಡಗಿದ್ದ ರಾಯರಿಗೆ ಗುರಿ ಮುಟ್ಟುವ ಸಂಶಯ ಕಾಡತೊಡಗಿತ್ತು. ಅದಕ್ಕೆ ಸರಿಯಾಗಿ ಗುಡ್ಡ ಜಾಗದಲ್ಲಿ ಭತ್ತ ಬೆಳೆಯುವುದು ಅಸಾಧ್ಯ ಎನ್ನುವ ಸ್ಥಳೀಯ ಜನರ ಅನುಭವದ ತೀರ್ಪುಗಳು ಬೇರೆ. ಇನ್ನೇನು ರೈತಾಪಿ ಜನರ ತೀರ್ಮಾನ ಸ್ವೀಕರಿಸಿ ಯುದ್ಧ ನಿಲ್ಲಿಸಬೇಕೆನ್ನುವ ಸ್ಥಿತಿಯಲ್ಲಿಯೂ ಭೂಮಿ ತಾಯಿಯಲ್ಲಿನ ಭರವಸೆ ಕುಗ್ಗಿರಲಿಲ್ಲ. ಅರವತ್ತರ ದಶಕದ ಪ್ರಾರಂಭದ ಮಳೆಗಾಲದಲ್ಲಿ ಮೆಣಸಿನ ಬೆಳೆ ಮಾಡಿದ್ದರು. ಗೊಬ್ಬರ ಹಾಕಿ ಏರಿ ಮಾಡಿ ಆಸಕ್ತಿಯಿಂದ ಬೆಳೆಸಿದ್ದರು. ಆದರೆ ಮಳೆ ಹೆಚ್ಚಾದ್ದರಿಂದ ಮೆಣಸಿನ ಗಿಡಗಳೆಲ್ಲಾ ಕೊಳೆತು ಹೋಯಿತು. ಬೇಸರದಲ್ಲಿ ಆ ಜಾಗದತ್ತ ಹೋಗುವ ಮನಸ್ಸು ಮಾಡಲಿಲ್ಲ. ಮಳೆಗಾಲದ ಕೊನೆಯಲ್ಲೊಮ್ಮೆ ಅತ್ತ ಹಾಯ್ದಗ, ಮೆಣಸಿನ ಏರಿಯಲ್ಲಿ ಒಂದು ಭತ್ತದ ಗಿಡ ಸುಮಾರು ಹದಿನಾರು ಕವಲೊಡೆದು ರಾಯರನ್ನು ಕೈಬೀಸಿ ಕರೆಯುತ್ತಿತ್ತು. ನನ್ನನ್ನು ನೋಡಿ ಹೊಸ ಪ್ರಯೋಗ ಪ್ರಾರಂಭಿಸು ಎಂದು ಕರೆ ನೀಡುತ್ತಿತ್ತು. ನಂಬಿದ ಭೂತಾಯಿ ನನ್ನ ನಿರಾಶೆಯ ಸಂದರ್ಭದಲ್ಲಿ ಧೃತಿಗೆಡಲು ಅವಕಾಶ ನೀಡದೆ ಮತ್ತೆ ಕಾರ್ಯೋನ್ಮುಖನಾಗಲು ಉತ್ತೇಜಿಸಿದಳು ಎನ್ನುವ ಮಾತನ್ನು ಆ ಸಂದರ್ಭ ನೆನೆಸಿಕೊಂಡು ರಾಯರು ಆಗಾಗ ಹೇಳುತ್ತಿದ್ದರು. ಅಲ್ಲಿಗೆ ರಾಯರ ವಿಜ್ಞಾನಿ ಮನಸ್ಸು ಜಾಗೃತವಾಯಿತು. ನೀರಿಲ್ಲದೆಯೇ ಒಂದು ಭತ್ತದ ಬೀಜ ಮೆಣಸಿನ ಏರಿಯಲ್ಲಿ ಅರ್ಧ ಪಾವು ಭತ್ತ ಕೊಡಬಲ್ಲುದಾದರೆ, ಸೂಕ್ತ ರೀತಿಯಲ್ಲಿ ಬೆಳೆಸಿದರೆ, ಎಕರೆಗೆ ಅರವತ್ತು ಮುಡಿ ಬೆಳೆಯಲು ಅಡ್ಡಿಯಿಲ್ಲ ಎನ್ನುವ ಲೆಕ್ಕಾಚಾರ ಹಾಕಿದರು.

ಮುಂದಿನ ವರ್ಷದಿಂದ ರಾಯರ ಗುಡ್ಡ ಪ್ರದೇಶದಲ್ಲಿ ಭತ್ತ ಬೆಳೆಯುವ ಹೊಸ ಪದ್ಧತಿಯ ಆವಿಷ್ಕಾರದಲ್ಲಿ ತೊಡಗಿದರು. ಇದಕ್ಕೆ ನೀರು ಬೇಡ, ಎತ್ತು ಬೇಡ, ನೇಗಿಲು ಬೇಡ. ಕೇವಲ ಹಾರೆ ಪಿಕ್ಕಾಸುಗಳಿಂದ ಹುಡುಗನಿಂದ ಮುದುಕರ ವರೆಗೆ ಅವರವರ ಶಕ್ತ್ಯಾನುಸಾರ ಬೆಳೆಸುವ ಪದ್ಧತಿಗೆ ನಾಂದಿ ಹಾಡಿದರು. ಒಂದು ಎಕರೆಯಲ್ಲಿ ಅರವತ್ತು ಮುಡಿ ಭತ್ತ ಬೆಳೆಸಿ ಜನ ಬೆರಗಾಗುವಂತೆ ಮಾಡಿದರು. ನೀರಿದ್ದ ಪ್ರದೇಶದಲ್ಲಿ ಕೂಡಾ ಇಷ್ಟು ಸುಲಭದಲ್ಲಿ, ಕಡಿಮೆ ಖರ್ಚಿನಲ್ಲಿ ಬೆಳೆಸಲು ಅಸಾಧ್ಯ. ರಾಯರು ಇದಕ್ಕೆ ಸರ್ವೋದಯ ಪದ್ಧತಿಯೆಂದು ಕರೆದರು. ಜನರು ಚೇರ್ಕಾಡಿ ಪದ್ಧತಿಯೆಂದು ನಾಮಕರಣ ಮಾಡಿ ಸಾಕಷ್ಟು ಪ್ರಚಾರ ಮಾಡಿದರು. ಏನೇ ಆದರೂ ಹಸಿರು ಕ್ರಾಂತಿಗೆ ರಾಯರ ಈ ಕೊಡುಗೆಯಲ್ಲಿ, ಬಡತನ ನಿವಾರಣೋಪಾಯವೂ ಅಡಗಿತ್ತು.

ಆ ಸಮಯದಲ್ಲಿ ದೇಶದಲ್ಲಿ ಆಹಾರದ ಅಭಾವದ ಪರಿಸ್ಥಿತಿ. ಹಸಿರು ಕ್ರಾಂತಿಯ ಕರೆ ಕೊಟ್ಟು ಹೆಚ್ಚು ಆಹಾರ ವಸ್ತುಗಳ ಉತ್ಪಾದನೆಗೆ ದೇಶವನ್ನು ಸಜ್ಜುಗೊಳಿಸಲಾಗಿತ್ತು. ಕೃಷಿ ವಿಜ್ಞಾನಿಗಳೆಲ್ಲಾ ವಿದೇಶದ ಆಧುನಿಕ ವೈಜ್ಞಾನಿಕ ಪದ್ಧತಿ, ರಸಗೊಬ್ಬರ, ಕೀಟನಾಶಕಗಳನ್ನು ಗೊತ್ತು ಗುರಿಯಿಲ್ಲದೆ ಪ್ರಯೋಗಿಸಿ ಹೆಚ್ಚು ಉತ್ಪಾದನೆಯ ಗುರಿ ತಲುಪಲು ಪೈಪೋಟಿ ನಡೆಸಿ ಸಫಲಾರದರು. ಆದರೆ ಹೆಚ್ಚು ಉತ್ಪಾದನೆಯ ಭರಾಟೆಯಲ್ಲಿ, ಮಣ್ಣಿನ ಫಲವತ್ತತೆಯನ್ನು ಬಲಿಕೊಟ್ಟದ್ದು ಗಮನಕ್ಕೆ ಬಂದದ್ದು ಮೂವತ್ತು ವರ್ಷಗಳ ನಂತರ.

ಆದರೆ ಅದೇ ಸಂದರ್ಭದಲ್ಲಿ ರಾಯರ ಸುಸ್ಥಿರ ಕೃಷಿ ಪದ್ಧತಿ ವೈಜ್ಞಾನಿಕ ಪದ್ಧತಿಗಿಂತಲೂ ಉತ್ತಮ ಮಟ್ಟದಲ್ಲಿದ್ದುದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಇವರ ಪದ್ಧತಿಯಲ್ಲಿ ಕಡಿಮೆ ನೀರು, ಕಡಿಮೆ ಬೀಜ, ಕೇವಲ ಸಾವಯವ ಗೊಬ್ಬರದ ಬಳಕೆ. ಉತ್ಪತ್ತಿ ಹೆಚ್ಚು. ಯಾವ ಯಂತ್ರ ತಂತ್ರಗಳ ಬಳಕೆಯಿಲ್ಲ. ದೈಹಿಕ ಪರಿಶ್ರಮವೊಂದೇ ಸಾಕು. ಒಬ್ಬ ಮನುಷ್ಯನಿಗೆ ಹತ್ತು ಸೆಂಟ್ಸ್ ಜಾಗಿನಲ್ಲಿ ವರ್ಷಕ್ಕೆ ಸಾಕಾಗುವಷ್ಟು ಭತ್ತ, ರಾಗಿ ಗೋಧಿ ಬೆಳೆಸಿಕೊಳ್ಳಲು ಸಾಧ್ಯ. ಹತ್ತು ವರ್ಷಗಳ ನಿರಂತರ ಚಿಂತನೆ, ಹೋರಾಟ ಕೊನೆಗೂ ಯಶಸ್ವಿಯಾಯಿತು. ಮುಂದೆ ಎರಡು ದಶಕಗಳ ಕಾಲ ತಾನು ಸ್ವತಃ ಈ ಮಾದರಿ ಪದ್ಧತಿಯಲ್ಲಿ ಭತ್ತ ಬೆಳೆದು ಕ್ರಾಂತಿಯನ್ನು ಮಾಡಿದರು. ಆರ್ಥಿಕವಾಗಿಯೂ ಸ್ಥಿರತೆಯನ್ನು ಕಂಡುಕೊಂಡರು.

ದೇಶದ ಹಸಿರು ಕ್ರಾಂತಿಯ ತಪ್ಪು ಕ್ರಮಗಳಿಂದ ದಾರಿ ತಪ್ಪಿತು. ಆದರೆ ರಾಯರ ಒಂದು ಹುಲ್ಲಿನ ಕ್ರಾಂತಿ ಸರ್ವಕಾಲದಲ್ಲಿಯೂ ಪ್ರಸ್ತುತವಾಯಿತು. ಕೊನೆಗೂ ಭೂಮಿ ತಾಯಿ ಅವರ ಕೈಬಿಡಲಿಲ್ಲ. ಇವರ ನವೀನ ಕೃಷಿ ಪದ್ಧತಿ ದೇಶದ ವಿವಿಧ ಭಾಗಗಳಿಂದ ರೈತರನ್ನು ಆಕರ್ಷಿಸಿತ್ತು. ಆದರೆ ವಿಜ್ಞಾನಿಗಳ, ಜನಪ್ರತಿನಿಧಿಗಳ, ಅಧಿಕಾರಿಗಳ ಬೆಂಬಲವಿಲ್ಲದೆ ಜನಸಾಮಾನ್ಯರನ್ನು ಮುಟ್ಟುವುದರಲ್ಲಿ ಯಶಸ್ವಿಯಾಗಲಿಲ್ಲ. ಇದೇ ಸಮಯದಲ್ಲಿ ಜಪಾನಿನ ವಿಜ್ಞಾನಿ ಮಸನೋಬ ಪುಕುವೋಕ ಆವಿಷ್ಕಾರ ಮಾಡಿದ ಒಂದು ಹುಲ್ಲಿನ ಕ್ರಾಂತಿ ಪ್ರಪಂಚದ ಮೂಲೆಗಳನ್ನು ತಲುಪುವಲ್ಲಿ ಯಶಸ್ವಿಯಾಯಿತು. ಇಬ್ಬರ ಕೃಷಿ ಪದ್ಧತಿಯಲ್ಲಿ ವ್ಯತ್ಯಾಸವೇನೂ ಇರಲಿಲ್ಲ. ಗಾಂಧೀ ತತ್ವದ ಆಧಾರದ ಮೇರೆಗೆ ಸ್ವಂತ ಶ್ರಮದಲ್ಲಿ ಕಂಡುಕೊಂಡ ಈ ಪದ್ಧತಿಗೆ ಸೋಮಾರಿಗಳ, ಭ್ರಷ್ಟರ ಪ್ರಪಂಚದಲ್ಲಿ ಸೂಕ್ತ ಸ್ಥಾನ, ಉತ್ತೇಜನ ದೊರೆಯಲಿಲ್ಲ. ಇದು ಕೋಟ್ಯಾಂತರ ಬಡಜನರ ದುರಾದೃಷ್ಟವೆಂದುಕೊಳ್ಳಬಹುದು.

**ಆಳದ ಬಾವಿಯಿಂದ ನೀರೆತ್ತುವ ತಂತ್ರಜ್ಞಾನ**

ಅನ್ನ ಸ್ವಾವಲಂಬನೆಯಲ್ಲಿ ಯಶಸ್ಸನ್ನು ಕಂಡ ನಂತರದ ಆದ್ಯತೆ ಗಿಡಗಳಿಗೆ ಬಾವಿಯ ನೀರುಣಿಸುವ ಕಾರ್ಯಕ್ರಮ. ರಾಯರ ಬಾವಿ 40 ಅಡಿ ಆಳವಿದ್ದು ಮಳೆಗಾಲದ ನಂತರ ನೀರೆತ್ತುವುದು ಸಾಹಸ. ಪಾರಂಪರಿಕ ವಿಧಾನಗಳಾದ, ಏತ, ಸಂಬಳಿಗೆ, ರಾಟೆ ಯಾವುದೂ ಇಲ್ಲಿ ನಡೆಯುವುದಿಲ್ಲ. ಗಾಂಧೀ ತತ್ವಗಳಲ್ಲಿ ಸತ್ಯವನ್ನು ಕಂಡ ರಾಯರಿಗೆ ಯಂತ್ರಗಳು ನಮ್ಮ ಮೇಲೆ ಸವಾರಿ ಮಾಡುವುದು ಒಪ್ಪಿಗೆಯಿಲ್ಲ. ಸಮಾಜದ ಎಲ್ಲರಿಗೂ ಅನುಕೂಲವಾಗುವಂತೆ ಸರಳ ಹಾಗೂ ಕಡಿಮೆ ಖರ್ಚಿನ ನೀರೆತ್ತುವ ಸಾಧನದ ಬಗ್ಗೆ ಚಿಂತನೆ ನಡೆಸುತ್ತಿದ್ದರು. ಪಂಪಸೆಟ್ಟ್ ಖರೀದಿಸಿದರೆ ಅದರ ನಿರ್ವಹಣೆಯೇ ಬಡ ರೈತನಿಗೆ ಸಮಸ್ಯೆಯಾಗುತ್ತದೆ. ತಾನು ನೂಲುತ್ತಿದ್ದ ರಾಟೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸೂಕ್ತ ಮಾರ್ಪಾಡುಗಳೊಂದಿಗೆ ನೀರೆತ್ತಲು ಉಪಯೋಗಿಸುವ ಯೋಚನೆ ಬಂದೊಡನೆ ಕಾರ್ಯಪ್ರವರ್ತರಾದರು. ಮೂರಡಿ ವ್ಯಾಸದ ರಾಟೆಯನ್ನು ಬಾವಿ ಮಧ್ಯದಲ್ಲಿಟ್ಟು, ಎರಡು ಬದಿಗೂ ತಿರುಗಿಸಲು ಬೇಕಾದ ಕೈ ಜೋಡಿಸಿದರು. ರಾಟೆಗೆ ಎರಡು ಬದಿಯಲ್ಲಿ ನೀರಿಗೆ ತಾಗುವಷ್ಟು ಉದ್ದದ ಹಗ್ಗ ಕಟ್ಟಿ ಅದರ ತುದಿಗೆ ಎರಡು ಬಾಲ್ದಿಯನ್ನು ಕಟ್ಟಿದರು. ಒಂದು ಬಾಲ್ದಿ ಮೇಲೆ ಬರುವಾಗ ಇನ್ನೊಂದು ಬಾಲ್ದಿ ಕೆಳಗೆ ಹೋಗುವ ಹಾಗೆ ಜೋಡಿಸಿಕೊಂಡರು. ಒಂದು ಬಾಲ್ದಿಯ ನೀರು ರಾಟೆಯ ಮಧ್ಯಕ್ಕೆ ಬಂದು ಸುರಿಯುವಾಗ ಅದರ ಕೆಳಗೆ ಇರಿಸಿದ ಹರಿಣಿಯ ಮೂಲಕ ಬಾವಿ ಹೊರಗೆ ಹೋಗುವ ಹಾಗೆ ವ್ಯವಸ್ಥೆ ರಚಿಸಿಕೊಂಡರು. ಒಂದು ಬಾಲ್ದಿ ನೀರು ಬಂದು ಸುರಿದ ನಂತರ ಅದರ ವಿರುದ್ಧ ದಿಕ್ಕಿನಲ್ಲಿ ರಾಟೆ ತಿರುಗಿಸಿದಾಗ ನೀರು ಸುರಿಸಿದ ಬಾಲ್ದಿ ಕೆಳಗೆ ಹೋಗಿ, ಕೆಳಗೆ ನೀರು ತುಂಬಿಸಿಕೊಂಡ ಬಾಲ್ದಿ ಮೇಲೆ ಬರುತ್ತದೆ. ಇದು ಅತ್ಯಂತ ಸುಲಭ, ಸರಳ ಮತ್ತು ಎಷ್ಟು ಆಳದ ಬಾವಿಯಿಂದಲೂ ನೀರೆತ್ತಲು ಸಾಧ್ಯ. ಮಿನಿಟಿಗೆ 10 ಲೀಟರ ನೀರು ಹಿಡಿಯುವ 6 ಬಾಲ್ದಿ ಅನಾಯಾಸವಾಗಿ ಮೇಲೆ ಬರುತ್ತದೆ. ಒಂದು ಗಂಟೆ ಅವಧಿಯಲ್ಲಿ 3600 ಲೀಟರ್ ನೀರು ಮೇಲೆ ತರಲು ಸಾಧ್ಯ. ಇದು ಎರಡೆಕರೆ ಜಮೀನು ಹೊಂದಿದ ರೈತನಿಗೆ ನೀರಿನ ವ್ಯವಸ್ಥೆ ಮಾಡಿಕೊಳ್ಳಲು ಧಾರಾಳ.

**ಹಳ್ಳಿಯಲ್ಲಿ ಮಲ ಮೂತ್ರಗಳ ನಿರ್ವಹಣೆಗೆ ಸಮರ್ಥ ಸುಲಭ ವಿಧಾನ**

ರಾಯರು ಎಲ್ಲದರಲ್ಲೂ ಲೆಕ್ಕಾಚಾರದ ಮನುಷ್ಯ. ಶರೀರದ ಅನಗತ್ಯ ಪದಾರ್ಥಗಳನ್ನು ಸುಮ್ಮನೆ ಮಣ್ಣಿನೊಳಗೆ ಯಾವ ಉಪಯೋಗಕ್ಕೂ ಬಾರದಂತೆ ಶೇಖರಿಸುವುದು ಅವರಿಗೆ ಹಿತವಾಗಲಿಲ್ಲ. ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಕಂಡುಕೊಳ್ಳುವತ್ತ ಚಿಂತನೆ ಮಾಡಿ ಯಶಸ್ವಿಯಾದರು. ಇದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವಲ್ಲಿಯೂ ಸಫಲರಾದರು. ಇದರ ವಿವರಗಳು ಹೀಗಿದೆ.

ನಮ್ಮ ಶರೀರ ಅಗತ್ಯವಿಲ್ಲದ/ಹೆಚ್ಚಾದ ಪದಾರ್ಥಗಳನ್ನು ಪ್ರಕೃತಿ ನಿಯಮದಂತೆ ಹೊರ ಹಾಕುತ್ತದೆ. ಇದನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ಅನೇಕ ಕಾಯಿಲೆಗಳಿಗೆ ಮೂಲವಾಗಬಹುದು. ಅದರಲ್ಲೂ ನಾವು ವಾಸಿಸುವ ಪರಿಸರದಲ್ಲಿ ಇದನ್ನು ಯಶಸ್ವಿಯಾಗಿ ಪುನಃ ಮಣ್ಣಿಗೆ ಸೇರಿಸುವುದು ಅತ್ಯಗತ್ಯ. ಹಳ್ಳಿಯಲ್ಲಿ ವಾಸಿಸುವವರು ಇದರ ಬಗ್ಗೆ ಜಾಗೃತಿಯನ್ನು ಸ್ವತಃ ಕಂಡುಕೊಳ್ಳುವವರ ಸಂಖ್ಯೆ ಅತಿ ಕಡಿಮೆ. ನಮ್ಮ ದೇಶದಲ್ಲಿ ಕೇವಲ 30% ಜನರಿಗೆ ಮಾತ್ರ ಸಂಡಾಸಿನ ಸೌಲಭ್ಯವಿದೆಯೆಂದರೆ ಸಮಸ್ಯೆಯ ಅಗಾಧತೆಯ ಅರಿವಾಗಬಹುದು. ಎಲ್ಲೆಂದರಲ್ಲಿ ಮಲ ವಿಸರ್ಜಿಸುವ ಅಭ್ಯಾಸ ಹಲವಾರು ಕಾಯಿಲೆಗಳಿಗೆ ಮೂಲ ಕಾರಣವಾಗುತ್ತದೆ. ಹಾಗೆಯೇ ಮಾನವರ ಮಲ ಮೂತ್ರಗಳನ್ನು ಸಮರ್ಪಕವಾಗಿ ಬಳಸಿಕೊಂಡಲ್ಲಿ ಕೃಷಿ ಭೂಮಿಯನ್ನು ಫಲವತ್ತಾನ್ನಾಗಿ ಮಾಡಲು ಅನ್ಯ ಗೊಬ್ಬರಗಳ ಅವಶ್ಯಕತೆಯಿಲ್ಲ.

ಹಳ್ಳಿ ಜನರು ಅತೀ ಕಡಿಮೆ ವೆಚ್ಚದಲ್ಲಿ ಉಪಯೋಗಿಸಬಹುದಾದ ಬಹು ಉಪಯೋಗಿ ಪರಿಸರಸ್ನೇಹಿ ಸಂಡಾಸನ್ನು ರಾಯರು ಕಂಡುಕೊಂಡು ಉಪಯೋಗಿಸುತ್ತಿದ್ದರು. ಇದು ಮಲ ವಿಸರ್ಜನೆಯನ್ನು ಯಶಸ್ವಿಯಾಗಿ ನಿರ್ವಹಿಸುವುದರ ಜೊತೆಗೆ ರೈತರ ಜಮೀನನ್ನು ಫಲವತ್ತಾನ್ನಾಗಿ ಪರಿವರ್ತಿಸುತ್ತದೆ. ಇದಕ್ಕೆ ಅಗತ್ಯವಿರುವುದು ಎಲ್ಲಾ ಸ್ಯಾನಿಟರಿ ಅಂಗಡಿಗಳಲ್ಲಿ ದೊರೆಯುವ ಬೇಸಿನ್ ಮಾತ್ರ. ಮೂರು ಆಡಿ ಉದ್ದಗಲ ಮತ್ತು ಆಳವಿರುವ ಹೊಂಡ ತೋಡಿ ಒಂದು ಬದಿಯಲ್ಲಿ ಬೇಸಿನ್‌ನನ್ನು ಮಣ್ಣಿನಿಂದಲೇ ತಾತ್ಕಾಲಿಕ ನೆಲೆಯಲ್ಲಿ ಕೂರಿಸಬೇಕು. ಹೊಂಡವನ್ನು ಮೂರು, ನಾಲ್ಕು ಕಟ್ಟಿಗೆಯಿಂದ ಮುಚ್ಚಿ, ಅದರ ಮೇಲೆ ಗಿಡ ಮರಗಳ ಗೆಲ್ಲು ಅಥವಾ ಅಡಿಕೆ/ತೆಂಗಿನ ದಬ್ಬೆಗಳನ್ನು ಅಡ್ಡವಾಗಿ ಇಟ್ಟು ತೆಳುವಾಗಿ ಮಣ್ಣನ್ನು ಹರಡಬೇಕು. ಬೇಸಿನ್ ಇರುವ ಸುತ್ತ ಒಬ್ಬರು ಕುಳಿತುಕೊಳ್ಳಲು ಬೇಕಾಗುವ ಜಾಗಕ್ಕೆ ಸೋಗೆಯ ತಟ್ಟಿ ಕಟ್ಟಿಕೊಂಡರೆ ದಿನದ ಯಾವ ಹೊತ್ತಿನಲ್ಲಿಯೂ ಪಾಯಿಖಾನೆ ಮಾಡಬಹುದು. ತಲೆಯ ಮೇಲೆ ಪ್ಲಾಷ್ಟಿಕ್‌ನ್ನು ಹೊದಿಸಿಕೊಂಡರೆ ಮಳೆ, ಬಿಸಿಲು ಯಾವಾಗ ಬೇಕಾದರೂ ಬಳಸಬಹುದು. ಈ ಪಾಯಿಖಾನೆಯನ್ನು ಆರು ತಿಂಗಳ ಕಾಲ ಉಪಯೋಗಿಸಿ ಮತ್ತೆ ಬೇರೆಡೆಗೆ ಸ್ಥಳಾಂತರಿಸಬಹುದು. ಹೊಂಡದಲ್ಲಿ ಅರ್ಧಕ್ಕಿಂತ ಸ್ವಲ್ಪ ಜಾಸ್ತಿ ತರಗೆಲೆಗಳನ್ನು ತುಂಬಿಸಿಟ್ಟರೆ ಆರು ತಿಂಗಳಲ್ಲಿ ಅತ್ಯುತ್ತಮ ಸಾವಯವ ಗೊಬ್ಬರ ತಯಾರಾಗುತ್ತದೆ. ಆರು ತಿಂಗಳ ಕಾಲ ಬಳಸಿದ ಹೊಂಡಕ್ಕೆ ಸುಣ್ಣ ಹಾಕಿ ಸ್ವಲ್ಪ ದಿನ ಬಿಟ್ಟರೆ ಅದು ಮಣ್ಣಾಗಿ ಯಾವ ವಾಸನೆಯೂ ಇರುವುದಿಲ್ಲ. ಇದನ್ನು ಸಾವಯವ ಗೊಬ್ಬರದಂತೆ ಬಳಸಬಹುದು. ಬೇಡವಾದರೆ ಅದರಲ್ಲಿ ತೆಂಗಿನ ಸಸಿ ನೆಡಬಹುದು. ಹಾಗೆಯೇ ಬಿಟ್ಟರೆ ಸುತ್ತಮುತ್ತಲಿನ ಮರಗಳು ಅದರ ಸಾರವನ್ನು ಹೀರಿಕೊಳ್ಳುತ್ತವೆ. ವೈಜ್ಞಾನಿಕವಾಗಿ ಮಾನವನ ಮಲದಲ್ಲಿ 1.30% ಸಾರಜನಕ, 1.00% ರಂಜಕ, 0.40% ಪೊಟ್ಯಾಶ್ ಇದೆ ಎಂದು ದೃಢ ಪಟ್ಟಿದೆ.

ಹಳ್ಳಿಯಲ್ಲಿ ಇಂತಹ ಸಂಡಾಸನ್ನು ಐನೂರು ರೂಪಾಯಿ ವೆಚ್ಚದೊಳಗೆ ಮಾಡಿಕೊಳ್ಳಬಹುದು. ಇದರಿಂದ ಪರಿಸರವನ್ನು ಚೊಕ್ಕಟವಿಟ್ಟುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಇದನ್ನು ನಗರದಲ್ಲಿ ಕೂಡಾ ಮನೆಯ ಸುತ್ತ ಜಾಗವಿದ್ದಲ್ಲಿ ಉಪಯೋಗಿಸಲು ಅಡ್ಡಿಯಿಲ್ಲ. ಯಾರಿಗೂ ಇದರಿಂದ ಹಾನಿಯಿಲ್ಲ. ಕುಡಿಯುವ ನೀರಿನ ಬಾವಿಯಿಂದ ಕನಿಷ್ಠ 30 ಅಡಿ ದೂರ ಕಾಯ್ದುಕೊಳ್ಳುವುದು ಅಗತ್ಯ.

**ಸಾವಯವ ಕೃಷಿ**

ಹಸಿರು ಕ್ರಾಂತಿಯ ಕಾಲದಲ್ಲಿ ಕೃಷಿ ವಿಜ್ಞಾನಿಗಳು ಪ್ರಯೋಗಾಲಯಗಳಲ್ಲಿ ನಡೆಸಿದ ಪ್ರಯೋಗ ಫಲದಿಂದ ಕೃತಕವಾಗಿ ರಾಸಾಯನಿಕ ಗೊಬ್ಬರದ ಆವಿಷ್ಕಾರವಾಯಿತು. ಇಂತಹ ಗೊಬ್ಬರಗಳು ಮಣ್ಣಿನಲ್ಲಿರುವ ಪೋಷಕಾಂಶಗಳ ಕೊರತೆಯನ್ನು ನೀಗಿಸಲಿಕ್ಕೆ ಮಾತ್ರ ಸೀಮಿತವಾಗಬೇಕಿತ್ತು. ಆದರೆ ಇವುಗಳನ್ನು ಬಳಸಿದಾಗ ದೊರೆತ ಆರಂಭದ ಫಲಿತಾಂಶದಿಂದ ಉತ್ತೇಜಿತರಾದ ರೈತರು, ಅದನ್ನೇ ನೆಲಕ್ಕೆ ಹಾಕಿ ಹೆಚ್ಚಿನ ಇಳುವರಿ ತೆಗೆಯುವಲ್ಲಿ ಸಫಲರಾದರು. ಇದನ್ನು ತಯಾರಿಸುವ ಕಂಪೆನಿಗಳು ಮತ್ತು ಮಾರಾಟಗಾರರು ಮನ

ಬಂದಂತೆ ಪ್ರಚಾರ ಮಾಡಿ ಹಣ ಗಳಿಸುವುದರಲ್ಲಿಯೂ ಯಶಸ್ವಿಯಾದರು. ಆದರೆ ರುಚಿಯಿದೆಯೆಂದು ಬರೀ ಸಿಹಿಯನ್ನು ಸೇವಿಸಿದವರ ಪರಿಸ್ಥಿತಿ ಭೂಮಿಗೂ ಬಂತು. ಇದರ ದುಷ್ಪರಿಣಾಮ ತಿಳಿಯಲು ಮೂರು ದಶಕಗಳೇ ಬೇಕಾದವು.

ರಾಯರು ಕೂಡಾ ರಸಗೊಬ್ಬರಗಳ ಭರಾಟೆಯಲ್ಲಿ ಸ್ವಲ್ಪ ದಿಕ್ಕು ತಪ್ಪಿದ್ದುಂಟು. ಆದರೆ ಹಟ್ಟಿ ಗೊಬ್ಬರದೊಂದಿಗೆ ಮಿತವಾಗಿ ಬಳಸಿದ್ದರಿಂದ ಅಂತಹ ಹಾನಿಯೇನೂ ಆಗಲಿಲ್ಲ. ರಾಯರ ತತ್ವ ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಮತ್ತು ಭೂಮಿ ತಾಯಿಯಿಂದ ಸಾಧ್ಯವಾಗದ್ದಕ್ಕಿಂತ ಹೆಚ್ಚು ಬಯಸಬಾರದು. ಹಾಲು ಸಿಗುತ್ತದೆಂದು ಕೆಚ್ಚಲು ಕೊಯ್ಯುವ ಕೆಲಸ ಮಾಡಬಾರದು. ರಸ ಗೊಬ್ಬರದ ಆವಾಂತರ ಕೆಲವು ವರ್ಷಗಳಲ್ಲಿಯೇ ಗಮನಕ್ಕೆ ಬಂದು, ಅದರ ಬಳಕೆಯನ್ನು ಸಂಪೂರ್ಣ ನಿಲ್ಲಿಸಿ. ಕೇವಲ ಪಶುಗಳ ಸೆಗಣಿ, ಗಂಜಳ, ಸೊಪ್ಪು, ದರಗು ಮಣ್ಣಿಗೆ ಸೇರಿಸಿ ಸುಸ್ಥಿರ ಕೃಷಿಯನ್ನು ಅಭಿವೃದ್ಧಿಪಡಿಸಿದರು. ಇದು ಯಾವ ಕಾಲಕ್ಕೂ ಪ್ರಸ್ತುತ. ಈಗಲೂ ಅವರ ತೋಟದಲ್ಲಿ ಪರಿಸರದ ಸಸ್ಯಗಳ ತ್ಯಾಜ್ಯಗಳೇ ಗೊಬ್ಬರ. ಸೆಗಣಿಯ ಬಳಕೆ ಕೂಡಾ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಆದರೆ ಇಳುವರಿಯಲ್ಲಿ ವ್ಯತಾಸವಿಲ್ಲ.

ಇವರ ತೋಟದ ವಿಶೇಷತೆಯನ್ನು ಅವರು ಬೆಳೆಸುವ ಅನಾನಾಸು, ಕಾಳುಮೆಣಸುಗಳಲ್ಲಿ ಕಾಣಬಹುದು. ಅನಾನಾಸಿನ ನಾಟಿ ವ್ಯವಸ್ಥಿತ ರೀತಿಯಲ್ಲಿರುವಂತೆ ಕಾಣುವುದಿಲ್ಲ. ತೋಟದ ತುಂಬಾ ಬಿಸಾಡಿದ ಹಾಗೆ ಕಾಣುತ್ತದೆ. ಮಳೆಗಾಲದಲ್ಲಿ ಹುಲ್ಲಿನ ಮಧ್ಯೆ ಕಾಣುವುದೆ ಇಲ್ಲ. ಆದರೆ ಎಪ್ರಿಲ್ ತಿಂಗಳಲ್ಲಿ ಭೂಮಿಯಿಂದ ಕಮಲ ಅರಳಿದಂತೆ ಅವರ ಜಾಗದ ತುಂಬಾ ಅದರ ಜುಟ್ಟು ಪ್ರತ್ಯಕ್ಷವಾಗಲು ಶುರುವಾಗುತ್ತದೆ. ಮೇಯಲ್ಲಿ ಮಾಗಿದ ಹಣ್ಣು ಕಾಯಿಗಳು ಕೈಬೀಸಿ ಕರೆಯುತ್ತವೆ. ಅವುಗಳಿಗೆ ನೀರೂ ಇಲ್ಲ, ಗೊಬ್ಬರವೂ ಇಲ್ಲ. ಆದರೆ ಸಿಹಿ ಸಕ್ಕರೆಗಿಂತ ದುಪ್ಪಟ್ಟು. ಹತ್ತಿರದ ಮಾರುಕಟ್ಟೆಯಲ್ಲಿ ಚೇರ್ಕಾಡಿಯವರ ಅನಾನಾಸೆಂದೇ ಪ್ರಸಿದ್ಧಿ ಪಡೆದ ಹಣ್ಣಿಗೆ ಮೊದಲ ಆದ್ಯತೆ. ವರ್ಷಕ್ಕೆ ಸುಮಾರು ಒಂದೂವರೆ ಟನ್‌ನಷ್ಟು ಬೆಳೆಯುವ ಬೆಳೆಯಿಂದ 15000ಕ್ಕೂ ಮಿಕ್ಕಿದ ಆದಾಯ. ಅವರೆನ್ನುವಂತೆ ಸೋಮಾರಿತನ ಬಿಟ್ಟು, ತನ್ನ ಮಣ್ಣಿನ ವಿಜ್ಞಾನಿ ತಾನೇ ಆದರೆ ಈ ಭೂಮಿಯಲ್ಲಿ ಬಡವರು ಯಾರೂ ಇಲ್ಲ.

### ಎರಡು ಎಕರೆ ಮತ್ತು ಸ್ವಾತಂತ್ರ್ಯ

ರಾಯರ ತೊಟ ವೀಕ್ಷಿಸಲು ಬಂದ ಮಹನಿಯರೊಬ್ಬರು ಒಂದು ಎಕರೆ ಮತ್ತು ಸ್ವಾತಂತ್ರ್ಯ ಎನ್ನುವ ಪುಸ್ತಕವನ್ನು ವಿದೇಶದಲ್ಲಿ ಓದಿದೆ. ಇದು ಸಾಧ್ಯವೇ ಎಂದು ಅನುಮಾನಿಸಿದ್ದೆ. ಆದರೆ ನಿಮ್ಮ ತೋಟ ನೋಡಿದ ನಂತರ ಇದು ಸತ್ಯವೆಂದು ಮನವರಿಕೆಯಾಯಿತು ಎಂದರಂತೆ. ಈ ಪ್ರಪಂಚದಲ್ಲಿ ಬಡವರಾಗಿ ಹುಟ್ಟುವುದು ಪಾಪಿಗಳು ಎನ್ನುವ ಅಭಿಪ್ರಾಯವಿದೆ. ಆದರೆ ರಾಯರ ಅನುಭವದಲ್ಲಿ ಹುಟ್ಟುವಾಗ ಪ್ರತಿಯೊಬ್ಬನಿಗೂ ಬೆಲೆಕಟ್ಟಲಾಗದ ಆಸ್ತಿಯನ್ನು ದೇವರು ಕೊಟ್ಟು ಕಳುಹಿಸುತ್ತಾನೆ. ಮಾನವನ ಪ್ರತಿಯೊಂದು ಅವಯವ ಅದ್ಭುತ ಮತ್ತು ದುಡಿದು ತಿನ್ನಲು ಸೂಕ್ತ. ಅದಕ್ಕೆ ಬೆಲೆ ಕಟ್ಟಿದರೆ ಮೂರ್ಖತನವಾದೀತು. ಅವರ ಪ್ರಕಾರ ಸೋಮಾರಿತನದಿಂದ ಬಡವರಾಗಿ, ಸಮಾಜಕ್ಕೆ ಹೊರೆಯಾಗಿ ಬದುಕುತ್ತಿರುವವರು ಪಾಪಿಗಳು.

ಎರಡು ಎಕರೆ ಜಾಗದಲ್ಲಿ ಒಂದು ಕುಟುಂಬದ ನಿರ್ವಹಣೆ ಸಾಧ್ಯವಿದೆ. ನಿಸರ್ಗದಲ್ಲಿ ಜನಿಸುವ ಪ್ರತಿಯೊಂದು ಜೀವಿಗೂ ಬದುಕಲು ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ ವ್ಯವಸ್ಥೆಯಿದೆ. ಆದರೆ ಮನುಷ್ಯನ ದುರಾಶೆಗೆ ಹಾಗೂ ಸೋಮಾರಿತನಕ್ಕೆ ಇಲ್ಲಿ ಅವಕಾಶವಿಲ್ಲ. ರಾಯರು ಹುಟ್ಟು, ಬಾಲ್ಯವನ್ನು ಅವಲೋಕಿಸಿದರೆ ಅವರು ಸಮಾಜ ಘಾತುಕರಾಗಿಯೋ, ಹೊರೆಯಾಗಿಯೋ ಬದುಕುವ ಸಾಧ್ಯತೆ ಕಾಣುತ್ತದೆ. ಇಲ್ಲವೇ ಕಳ್ಳನೋ, ದರೋಡೆಕೋರನೋ ಆಗಿ ಜೀವಿಸುವ ವಾತಾವರಣ. ಆದರೆ ತನ್ನ ಸ್ವಂತ ಬುದ್ಧಿಶಕ್ತಿಯಿಂದ, ಸಶ್ರಮದಿಂದ ಕೇವಲ ಎರಡು ಎಕರೆ ಗುಡ್ಡೆ ಭೂಮಿಯಲ್ಲಿ ಸ್ಥಳೀಯರ ಪ್ರಕಾರ ಯಾವುದಕ್ಕೂ ಪ್ರಯೋಜನ ಬಾರದ ಜಾಗ ಸತತ ಹೋರಾಟ ನಡೆಸಿ ಕಸದಿಂದ ರಸ ತೆಗೆದು ತೃಪ್ತಿಯ ಜೀವನ ನಡೆಸಿದುದಲ್ಲದೆ, ಇತರರಿಗೂ ಮಾರ್ಗದರ್ಶಿಯಾಗಿ ಸಾರ್ಥಕ ಬದುಕು ಸಾಗಿಸಿದರು. ಪ್ರಪಂಚ ತ್ಯಜಿಸುವಾಗ ಉಳಿಸಿದ ಹಣದ ಬಡ್ಡಿಯಿಂದ ಎರಡು ಕುಟುಂಬ ನಿಶ್ಚಿಂತೆಯಿಂದ ಜೀವನ ಸಾಗಿಸಬಹುದು. ದೇಶ ಸ್ವತಂತ್ರವಾದ 60 ವರ್ಷಗಳ ನಂತರವೂ ಬಡತನ ನಿವಾರಣೆ ಮಾಡಲು ದೇಶ ಕಂಡ ವಿವಿಧ ಮುಖಗಳ, ಆದರೆ ಒಂದೇ ತತ್ವದಹಣ ನುಂಗುವ ಸರಕಾರಗಳಿಗೆ ಸಾಧ್ಯವಾಗಲಿಲ್ಲ. ಮಹಾತ್ಮಾ ಗಾಂಧಿ ಮತ್ತು ಚೇರ್ಕಾಡಿ ಗಾಂಧಿಯಿಬ್ಬರೂ ತಮ್ಮ ತತ್ವ, ಸಿದ್ಧಾಂತ,

ಕೆಲಸಗಳಿಂದ ಬಡತನ ನಿವಾರಣೋಪಾಯ ಗಳನ್ನು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಸಂಬಂಧಪಟ್ಟವರು ಇದಕ್ಕೆ ಸ್ಪಂದಿಸದೆ, ಕಣ್ಣು ಮುಚ್ಚಿಕೊಂಡಲ್ಲಿ ಯಾವ ದೇವರಿಂದಲೂ ಬಡತನ ನಿವಾರಣೆ ಸಾಧ್ಯವಿಲ್ಲ.

**ರಾಯರ ಸಾಧನೆಯಲ್ಲಿ ಭಾಗಿಗಳು**

ಪ್ರಾರಂಭದಲ್ಲಿ ಜನರು ಇವರ ಸಾಧನೆಯನ್ನು ಪ್ರಯೋಜನಕ್ಕೆ ಬಾರದ್ದು ಎಂದು ಕಡೆಗಣಿಸಿದ್ದುಂಟು. ಆದರೆ ಅವರ ಕಾಯಕದಲ್ಲಿ ಸತ್ಯವನ್ನು ಕಂಡ ಹಲವಾರು ಜನರು ಅವರನ್ನು ಮೆಚ್ಚಿ, ಅವರ ಸಾಧನೆಗಳನ್ನು ಸಮಾಜಕ್ಕೆ ಪರಿಚಯಿಸಿದವರಿದ್ದಾರೆ. ಅವರಲ್ಲಿ ದಿ ಖದ್ದರ್ ಶ್ರೀನಿವಾಸ ಪೈಗಳು ಒಬ್ಬರು. ಗಾಂಧೀ ಮತ್ತು ವಿನೋಬಾರ ಅನುಯಾಯಿಗಳಾಗಿದ್ದ ಇವರು ರಾಯರ ಕೃಷಿ ಕ್ರಮವನ್ನು ಮುದ್ರಿಸಿ ಸಮಾಜದಲ್ಲಿ ಪ್ರಚಾರವಾಗುವಂತೆಯೂ ಮಾಡಿದ್ದರು. ರಾಯರಿಗೆ ಅವರು ಹೇಳುತ್ತಿದ್ದ ಮಾತು ರಾಯರೇ ನಮ್ಮ ಕೆಲಸ ಒಂದು ಹಣತೆ ಹಚ್ಚಿ ಇಡುವುದು ಮಾತ್ರ. ಅದರ ಬೆಳಕಿನಿಂದ ಸಾವಿರಾರು ಜನ ಪ್ರಯೋಜನ ಪಡೆಯುತ್ತಾರೆ ಎನ್ನುವುದು ಅವರ ನಿಸ್ವಾರ್ಥ ಬಯಕೆಗೆ ಸಾಕ್ಷಿ. ಇವರ ಕೃಷಿ ಮತ್ತು ಜೀವನ ಪದ್ಧತಿ ಜನರ ಗಮನಕ್ಕೆ ಬರುವಂತೆ ಆಸಕ್ತಿ ವಹಿಸಿದವರಲ್ಲಿ ಸಿಂಡಿಕೇಟ್ ಬ್ಯಾಂಕಿನ ಕೆ.ಎಂ. ಉಡುಪರು ಪ್ರಮುಖರು. 1961ರಿಂದಲೇ ರಾಯರ ಒಡನಾಟವಿರಿಸಿಕೊಂಡ ಉಡುಪರು ಬ್ಯಾಂಕ್ ಮತ್ತು ಸಿಂಡಿಕೇಟ್ ಕೃಷಿ ಪ್ರತಿಷ್ಠಾನದ ಮೂಲಕ ಇವರ ಪದ್ಧತಿಯನ್ನು ರಾಜ್ಯದ ಮೂಲೆ ಮೂಲೆಗೆ ತಲುಪಿಸಿದ್ದಾರೆ. ಸಣ್ಣ ಹಿಡುವಳಿ ಮತ್ತು ಸುಸ್ಥಿರ ಕೃಷಿಯನ್ನು ಇವರ ಪದ್ಧತಿಯ ಆಧಾರದ ಮೇಲೆ ಹುಟ್ಟುಹಾಕಿ ಲಕ್ಷಾಂತರ ಜನ ಕೃಷಿಕರಿಗೆ ತಲುಪಿಸಲು ಕಾರಣರಾಗಿದ್ದಾರೆ. ಕೃಷಿಯಿಂದ ತೃಪ್ತಿಯ ಜೀವನ ಸಾಧ್ಯವೆಂದು ಜಾಗೃತಗೊಳಿಸಿ ಈಗಲೂ ಅದನ್ನು ನಂಬಿಕೊಂಡೇ ಇರುವ ವ್ಯಕ್ತಿಯಿವರು. ರಾಯರ ಸುಖ, ಸಮಸ್ಯೆಗಳನ್ನು ಆಪ್ತಮಿತ್ರರಾಗಿ ಹಂಚಿಕೊಂಡು ಅವರ ಕೊನೆಯ ದಿನಗಳ ವರೆಗೂ ಆತ್ಮೀಯರಾಗಿ ಉಳಿದವರು. ಕೊನೆಗೆ ಅವರ ಅಂತಿಮ ದರ್ಶನ ಮಾಡಿ ಗೌರವವನ್ನು ಕೊಟ್ಟು ತನ್ನ ಕರ್ತವ್ಯ ನಿಭಾಯಿಸಿದ್ದಾರೆ.

ಹೀಗೆ ಸಾವಿರಾರು ಮಂದಿ ಇವರ ಸಾಧನೆ ಮೆಚ್ಚಿ ಸಮಾಜದಲ್ಲಿ ಪ್ರಚಾರ ಮಾಡಿದ್ದಾರೆ. ಅಂತಹವರ ಲೆಕ್ಕವೇ ಸಿಗುತ್ತಿಲ್ಲ. ಪತ್ರಿಕೆಗಳು ಕೂಡಾ 1966 ರಿಂದ ನಿರಂತರ ಇವರ ಸದ್ದಿಲ್ಲದ ಕೃಷಿಯಿಂದ ಬಡತನ ನಿವಾರಣ ಕಾಯಕಗಳನ್ನು ಸಮಾಜಕ್ಕೆ ಪರಿಚಯಿಸಿವೆ. ಅದನ್ನು ನೋಡಿ ಸಾವಿರಾರು ಮಂದಿ ಇವರ ಕ್ಷೇತ್ರ ಸಂದರ್ಶಿಸಿ, ಸತ್ಯ ದರ್ಶನ ಮಾಡಿದ್ದಾರೆ.

**ರಾಯರ ಸಮಾಜಮುಖಿ ಚಿಂತನೆಗಳು**

ರಾಯರು ಕೇವಲ ಕಾಯಕವನ್ನು ಮಾಡಿಕೊಂಡು ಕುಳಿತವರಲ್ಲ. ಉತ್ತಮ ಸಂವಾದಕರು ಹೌದು. ಆಸಕ್ತ ಸಂದರ್ಶಕರೊಡನೆ ಚರ್ಚಿಸಿ ತಾನು ನಂಬಿದ ತತ್ವ ಮತ್ತು ಯಶಸ್ಸಿನ ಕೆಲಸಗಳನ್ನು ಮನದಟ್ಟಾಗುವಂತೆ ವಿವರಿಸುವುದರಲ್ಲಿಯೂ ಸಿದ್ಧಹಸ್ತರು. ಕೇಳಿದವರು ತಲೆದೂಗಿಕೊಂಡೇ ಮರಳುವಂತೆ ಅವರ ವಿಚಾರ ಲಹರಿ ಸಾಗುತ್ತಿತ್ತು. ಅವರ ಕೆಲವು ಚಿಂತನೆಗಳನ್ನು ಆಯ್ದು ಕೆಳಗೆ ಕೊಡಲಾಗಿದೆ.

ನಾವು ಭೂಮಿಯನ್ನು ಆಳುವವರಲ್ಲ. ಬದಲಿಗೆ ಭೂಮಿ ನಮ್ಮನ್ನು ಆಳುತ್ತದೆ. ನಾವ್ಯಾರು ಭೂಮಿ ಇದ್ದಷ್ಟು ಕಾಲ ಬದುಕುವವರಲ್ಲ. ಇಂತಹ ನಂಬಿಕೆಗಳು ನಮ್ಮಲ್ಲಿರಬೇಕು. ಇದರಿಂದಾಗಿ ಉತ್ತಮ ಕೃಷಿಕರಾಗುವುದು ಸಾಧ್ಯ. ಇದನ್ನೇ ನನ್ನ ಬದುಕಿನುದ್ದಕ್ಕೂ ಪಾಲಿಸುತ್ತಾ ಬಂದಿದ್ದೇನೆ.

ನಾನು ಮದುವೆಯಾದ ಆರಂಭದಲ್ಲಿ ಇನ್ಸುರೆನ್ಸ್ ಏಜೆಂಟರೊಬ್ಬರು ನನ್ನಲ್ಲಿಗೆ ಬಂದರು. ನಿಮ್ಮ ಹೆಂಡತಿ ಮಕ್ಕಳ ಜೀವನ ಭದ್ರತೆಗಾಗಿ ಒಂದು ಪಾಲಿಸಿ ಮಾಡೋಣವೇ ಎಂದರು. ಸದಾ ಅಭದ್ರತೆಯಲ್ಲಿ ಬೆಳೆದು ಬಂದ ನಾನು ಸರಿ ಎನಿಸಿ ಅದಕ್ಕೆ ಒಪ್ಪಿದೆ. ವರ್ಷವೂ 36 ರೂಪಾಯಿ ಪ್ರೀಮಿಯಂ ಕಟ್ಟುತ್ತಾ ಹೋದರೆ 30 ವರ್ಷದ ನಂತರ ಅಂದರೆ ನನ್ನ 55ನೇ ವರ್ಷದಲ್ಲಿ ಒಂದು ಸಾವಿರ ರೂಪಾಯಿ ದೊರೆಯುತ್ತದೆ ಎಂದರು. ಅದೇ ರೀತಿ ಕಟ್ಟುತ್ತಾ ಬಂದೆ. ನನ್ನ ಆರ್ಥಿಕ ಸಮಸ್ಯೆ ಜಟಿಲವಾಗುತ್ತಾ ಬಂತು. ಕಾರಣ ಕೆಲವು ವರ್ಷಗಳ ಬಳಿಕ ಕಂತು ಕಟ್ಟಲಾಗಲಿಲ್ಲ. ನಾನೇ ತಪ್ಪಿದ ಮೇಲೆ ಎಲ್ಲವೂ ನಿರರ್ಥಕವಾಯಿತೆಂದು ಬಗೆದೆ. ಆದರೆ ನಾನು ಬೇರೊಂದು ದಾರಿ ಹುಡುಕಿಕೊಂಡೆ. ನಮ್ಮ ಹಿತ್ತಲಿನಲ್ಲಿ ಖಾಲಿ ಜಾಗವನ್ನು ಆಯ್ದು ಎಂಟು ಕಸಿ ಮಾವಿನ ಗಿಡಗಳನ್ನು ನೆಟ್ಟೆ. ಅವುಗಳನ್ನು ಒಳ್ಳೆಯ ರೀತಿಯಲ್ಲಿ

ಸಾಕಿದೆ. ಕೇವಲ ಏಳು ವರ್ಷಗಳಲ್ಲಿ ವಿಶಾಲವಾಗಿ ಬೆಳೆದು ಮರದ ತುಂಬಾ ಫಲ ಕಾಣಿಸಿತು. ಅದೇ ವರ್ಷ ಮಾವಿನ ಫಸಲನ್ನು ನಾಲ್ಕು ಸಾವಿರ ರೂಪಾಯಿಗೆ ಬಿಟ್ಟುಕೊಟ್ಟೆ. ಆ ಮೇಲೆ ಪ್ರತಿವರ್ಷವೂ ಸಾವಿರಾರು ರೂಪಾಯಿಗಳ ಇಳುವರಿ ಪಡೆಯುತ್ತಾ ಬಂದೆ. ಇದೇ ನನ್ನ ಜೀವವಿಮೆ ಅಂದುಕೊಂಡೆ. ಅಂದರೆ 30 ವರ್ಷಗಳ ಬಳಿಕ ಒಂದು ಸಾವಿರವಲ್ಲ. ಬದಲಿಗೆ ಪ್ರತಿ ವರ್ಷವೂ ಸಾವಿರಾರು ರೂಪಾಯಿಗಳು ದೊರೆಯುತ್ತಿವೆ.

ಚಿಕ್ಕ ಹಿಡುವಳಿಯಲ್ಲಿ, ನನ್ನ ರೀತಿಯ ಸರ್ವೋದಯ ಕೃಷಿ ಪದ್ಧತಿ ಅನುಸರಿಸಿದರೆ ಎಲ್ಲ ಕೃಷಿಕರ ಉದ್ಧಾರವಾಗುತ್ತದೆ. ನಿರುದ್ಯೋಗಕ್ಕೆ ಉತ್ತರವಾಗುತ್ತದೆ. ಇದು ಸುಲಭ ಮತ್ತು ಎಲ್ಲರೂ ಮಾಡಬಹುದಾದ್ದು.

ಈ ಭೂಮಿ ಒಂದು ಆಕಾಶವಾಣಿ ಇದ್ದಂತೆ. ಅದರಲ್ಲಿ ನಿರಂತರ ಕಾರ್ಯಕ್ರಮಗಳು ಇರುತ್ತವೆ. ಆದರೆ ನಾವು ಕೇಳಲು ಸ್ವಿಚ್ ಹಾಕಬೇಕು. ಭೂಮಿಯಲ್ಲೂ ರೇಡಿಯೋದಂತೆ ನಿರಂತರ ಕಾರ್ಯಕ್ರಮಗಳು ತುಂಬಿರುತ್ತವೆ. ಅವು ನಮಗೆ ಕೇಳಬೇಕಾದರೆ, ಅರ್ಥವಾಗಬೇಕಾದರೆ, ಅನುಭವಿಸಬೇಕಾದರೆ ಗಿಡ, ಮರ, ಬಳ್ಳಿಗಳಂತಹ ಸ್ವಿಚ್ ಅದುಮ ಬೇಕು. ಕೇವಲ ಒಂದೇ ಒಂದು ಬಳ್ಳಿ, ಪ್ರಕೃತಿಯ ಪರಿಸ್ಥಿತಿ-ಅಂತರಂಗವನ್ನು ಪ್ರಕಟಿಸಬಹುದು.

ನಾನು ಹೇಳುವುದಾದರೆ ಬ್ಯಾಂಕಿನವರೇ, ಬಡವರಿಗೆ ಸಾಲ ಕೊಡಬೇಡಿ. ನೀವು ಕೊಡುವ ಸಾಲದಿಂದ ಆತ ಪಂಪು ಸೆಟ್ಟು, ಮೈಕು ಸೆಟ್ಟು, ರೇಡಿಯೋ ಸೆಟ್ಟು ತಂದು ಹಣ ಖರ್ಚು ಮಾಡುತ್ತಾನೆ. ಫಸಲಿನಿಂದ ಸಿಗುವ ಹಣ ಬಡ್ಡಿ ತೀರಿಸಲಿಕ್ಕೂ ಸಾಕಾಗುವುದಿಲ್ಲ. ಒಂದು ದಿನ ಸಾಲ ತೀರಿಸಲಾರದೆ ಎಲ್ಲಾ ಅಡವಿಟ್ಟು ದಿಕ್ಕಾಪಾಲಾಗುತ್ತಾನೆ. ಸಾಲ ಕೊಡಬೇಡಿ, ಬಡವರನ್ನು ಲಗಾಡಿ ತೆಗೆಯಬೇಡಿ.

ನಾನು ಇಲ್ಲಿಗೆ ಬಂದದ್ದು ಎಟೆಂಡರ್ ಆಗಿ. ಅನಂತರ ಕ್ಲರ್ಕ ಆದೆ. ಮುಂದೆ ಆಫೀಸರ್- ಮನೇಜರ್ ಆಗಿ ಬಡ್ತಿ ಪಡೆದೆ. ಈಗ ನಾನು ಎಂ.ಡಿ. ಕೃಷಿ ರಂಗದಲ್ಲಿ ಯಂತ್ರಗಳು ನಮ್ಮ ಮೇಲೆ ಸವಾರಿ ಮಾಡಬಾರದು. ನಾವು ಅವುಗಳ ಮೇಲೆ ಸವಾರಿ ಮಾಡಬೇಕು. ಮರ ಇಂತಿಷ್ಟೇ ಬೆಳೆ ಕೊಡಬೇಕೆಂದು ನನಗೆ ಕಡ್ಡಾಯ ಇಲ್ಲ. ಅದು ಎಷ್ಟು ಕೊಡುತ್ತದೋ ಅಷ್ಟು ಕೊಡಲಿ. ನಾನು ತೃಪ್ತ. ಬಲಾತ್ಕಾರದಿಂದ ಬೆಳೆ ತೆಗೆಯುವುದು ಸರಿಯಲ್ಲ. ನಮಗೆ ಪ್ರಕೃತಿ ಒಂದು ಹೊಟ್ಟೆಗೆ ಎರಡು ಕೈಗಳನ್ನು ಕೊಟ್ಟಿದೆ. ಮನಸ್ಸು ಮಾಡಿದರೆ ನಾವು ಅದರಿಂದ ಎಷ್ಟೆಲ್ಲಾ ಸಂಪಾದಿಸಬಹುದು ಮಾರಾಯ್ರೆ. ಈ ಆಧುನಿಕತೆ ನಮ್ಮ ಬದುಕಿನ ನೇಯ್ಗೆಯನ್ನು ಕತ್ತರಿಸಿ ಹಾಕುತ್ತಿದೆ. ಆಧುನಿಕತೆ ಎಂಬುದು ಕುದುರೆಯ ರೀತಿ. ಅದನ್ನು ನಾವು ಸವಾರಿ ಮಾಡಬೇಕೇ ಹೊರತು ಅದು ನಮ್ಮನ್ನು ಸವಾರಿ ಮಾಡಬಾರದು.

ಗಾಂಧೀಜಿ, ಗುಡಿಕೈಗಾರಿಕೆ ನಮ್ಮ ದೇಶ ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಬಹುದು ಎಂದಿದ್ದರು. ಆದರೆ ಬಹುರಾಷ್ಟ್ರೀಯ ಕಂಪೆನಿಗಳು ನಮಗೆ ಸಿಕ್ಕಿರುವ ಸ್ವಾತಂತ್ರ್ಯದ ಎಲ್ಲವನ್ನೂ ಮಣ್ಣುಗೂಡಿಸಿ, ಪರಾವಲಂಬಿಯಾಗಿಸುತ್ತಿವೆ. ಆಧುನಿಕ ಉದ್ಯಮ ಒಂದು ರೀತಿಯಲ್ಲಿ ಸಮಯಸಾಧಕ ಹಾಗೂ ಸಂಹಾರಕ ಗುಣಗಳನ್ನು ಹೊಂದಿರುತ್ತದೆ.

ಈ ಭೂಮಿ ನೊರೆಹಾಲು ಕೊಡುವ ಕೆಚ್ಚಲು, ಹಾಲನ್ನು ಕುಡಿದು ಸುಖ ಅನುಭವಿಸಬೇಕಾದ ಜನ ಸಾರಾಯಿ ಕುಡಿದು ಸಾಯುತ್ತಿದ್ದಾರೆ.

ನನ್ನಿಂದ ಈ ರಾಷ್ಟ್ರಕ್ಕೆ ಯಾವ ನಷ್ಟವೂ ಇಲ್ಲ, ಭಾರವೂ ಇಲ್ಲ. ನಾನು ಕರೆಂಟು ಕೊಡಿ, ಸಾಲ ಕೊಡಿ, ಫೋನ್ ಕೊಡಿ, ಸಬ್ಸಿಡಿ ಕೊಡಿ ಎಂದು ಕೇಳುವುದಿಲ್ಲ. ನಾನು ಭೂಮಿಯ ಅನುಗ್ರಹದಿಂದ ಬದುಕುತ್ತಿದ್ದೇನೆ.

ಯಾರೋ ಬೆಳೆಸಿದ್ದನ್ನು ಕೃಷಿಕರಾಗಿ ನಾವು ಅಪೇಕ್ಷಿಸಿ ತಿನ್ನುವುದು ಕಳ್ಳತನವಲ್ಲವೆ?

ಕೃಷಿಕರಿಗೆ ಕೃಷಿಯಲ್ಲಿ ರಾತ್ರಿ ಬೆಳಗಾಗುವುದರೊಳಗೆ ಹಣ ಸಂಪಾದನೆ ಮಾಡುವ ಯೋಚನೆ ಸಲ್ಲ. ಅವರಿಗೆ ಕೃಷಿ ಹೊಂದಿಕೆಯಾಗುವುದಿಲ್ಲ. ಅಂತಹವರು ಒಂದಂಕೆ ಲಾಟರಿಯಲ್ಲಿ ಹಣ ತೊಡಗಿಸಿ ಅದೃಷ್ಟ ಪರೀಕ್ಷೆ ಮಾಡಬಹುದು.

ಯಾಕೆ ಸ್ವಾಮಿ ಕೃಷಿಯಲ್ಲಿ ಗುದ್ದಾಟ, ನನಗಿಷ್ಟೇ ಬೇಕೆಂದು ನಾನು ಪ್ರಕೃತಿಯನ್ನು ಆಗ್ರಹಿಸುವುದಿಲ್ಲ. ಭಗವಂತ ಕೊಟ್ಟಷ್ಟರಲ್ಲಿ ನನಗೆ ತೃಪ್ತಿ ಇದೆ. ಜಾಸ್ತಿ ಇಳುವರಿಗೆ ಸ್ಪ್ರೇ, ರಾಸಾಯನಿಕ ಗೊಬ್ಬರ ಯಾವುದನ್ನೂ ನಾನು ಬಳಸುವುದಿಲ್ಲ. ಭಗವಂತ ಕೊಟ್ಟಷ್ಟರಲ್ಲಿ ನನಗೆ ತೃಪ್ತಿಯಿದೆ.

ಯಾರ್ಯಾರೋ ಬೆಳೆಸಿದ್ದನ್ನು ನಾವು ತಿಂದರೆ ಅದು ಕಳ್ಳತನ. ಗಾಂಧಿಯ ಈ ಮಾತು ನನ್ನ ಸಾಧನೆಗೆ ಮೂಲ. ಪರಾವಲಂಬಿಯಾಗಿ ನಾನು ಎಂದಿಗೂ ಬದುಕಲಾರೆ.

ತಾಯಿ ತನ್ನ ಮಗು ಅಳುತ್ತಿರುವಾಗ ಒಂದು ತುಂಡು ಬೆಲ್ಲ ಕೊಟ್ಟು ಸಮಾಧಾನ ಮಾಡುತ್ತಾಳೆ. ಬೆಲ್ಲವನ್ನು ನೆಚ್ಚಿಕೊಂಡು ಮಗು ಸುಮ್ಮನಾಗುತ್ತದೆ. ಇದೇ ರೀತಿ ಈ ಭೂಮಿಯಲ್ಲಿ ದುಡಿದರೆ ಆ ತಾಯಿ ಕೂಡಾ ನಮಗೆ ಏನಾದರೂ ಸಿಹಿ ಕೊಡುತ್ತಾ ಇರುತ್ತಾಳೆ.

ಈ ನೀರು, ಗಾಳಿ, ನೆಲ ಯಾರೊಬ್ಬರಿಗೂ ಸೇರಿದ್ದಲ್ಲ. ಅದನ್ನು ಒಬ್ಬರೇ ಇಟ್ಟುಕೊಂಡರೆ ಉಳಿದವರು ಉಸಿರುಕಟ್ಟಿ ಸಾಯುವುದೆ? 90 ಕೋಟಿ ಜನರಿಗೆ ಆಹಾರವಿಲ್ಲವೆಂದು ಸರಕಾರ ಬೊಬ್ಬೆ ಹೊಡೆಯುತ್ತಿದೆ. ಕುಟುಂಬ ಯೋಜನೆ ಮಾಡಿ ಎಂದು ಕೋಟಿ ಕೋಟಿ ರೂಪಾಯಿ ವ್ಯಯ ಮಾಡುತ್ತಿದೆ. ತೊಂಬತ್ತು ಅಲ್ಲ ಇನ್ನೂ ನೂರು ಕೋಟಿ ಜನ ಮಿಕ್ಕಿದರೂ ಈ ದೇಶದಲ್ಲಿ ಆಹಾರಕ್ಕೆ, ಭೂಮಿಗೆ ಬರಗಾಲವಿಲ್ಲ. ಯಾರಿಗೆ ಭೂಮಿ ಇಲ್ಲವೋ ಅವರಿಗೆ ಎರಡು ಎಕರೆ ಜಾಗ ಹಂಚಿಕೊಡಿ. ಎಲ್ಲರೂ ನನ್ನಂತೆ ಮಾಡಲಿ.

ಒಬ್ಬ ಅಸ್ಪಶ್ಯ ದಾರಿಯಲ್ಲಿ ಸಂಚರಿಸಬೇಕಾದರೆ ಎಲ್ಲರಿಗೂ ನಮಸ್ಕಾರ ಎಂದು ಎರಡೂ ಕೈ ಸೇರಿಸಿ ಬಗ್ಗಿ ನಮ್ರತೆಯಿಂದ ನಮಸ್ಕರಿಸುತ್ತಿದ್ದ. ಅದಕ್ಕೆ ಪ್ರತಿಯಾಗಿ ಅವರೆಲ್ಲರೂ ಹುಂ ಎಂದು ಗಂಭೀರದಿಂದ ಸ್ವೀಕರಿಸುತ್ತಿದ್ದರು. ಕೊನೆಗೊಂದು ದಿನ ಅದೇ ವ್ಯಕ್ತಿಗೆ ದೊಡ್ಡ ನಿಧಿ ದೊರೆತಿದೆ ಎಂದು ಪ್ರಚಾರವಾಗಿ ಬಿಟ್ಟಿತು. ಆ ಕ್ಷಣದಿಂದ ಜನರೆಲ್ಲಾ ಅವನಿಗೇ ನಮಸ್ಕಾರ ಕೊಡಲು ಪ್ರಾರಂಭಿಸಿದರು. ಆ ವ್ಯಕ್ತಿ ಪ್ರತಿಯೊಬ್ಬನ ನಮಸ್ಕಾರಕ್ಕೂ ಆಯ್ತು ತಲುಪಿಸುತ್ತೇನೆ ಎಂದು ಹೇಳುತ್ತಾ ಮುಂದುವರಿಯುತ್ತಿದ್ದ. ಒಮ್ಮೆ ಓರ್ವ ವ್ಯಕ್ತಿ ಆತನನ್ನು ಈತ ಎಲ್ಲಿಗೆ ನಮಸ್ಕಾರ ತಲುಪಿಸುತ್ತಾನೆ ನೋಡುವಾ ಎಂದು ಹಿಂಬಾಲಿಸಿದ. ಆತ ಮನೆ ಒಳಗೆ ಚಾವಡಿ ಕೋಣೆವರೆಗೂ ಹೋದ. ಆಗ ಮುಂದಿದ್ದವ ಹಿಂದೆ ಮುಂದೆ ನೋಡದೆ ಟ್ರಜರಿಯ ಬಾಗಿಲು ತೆಗೆದು ನಿನಗೆ ಇಂತಿಂತವರು ನಮಸ್ಕಾರ ತಿಳಿಸಿದ್ದಾರೆಂದು ಅದನ್ನೆಲ್ಲಾ ಒಪ್ಪಿಸಿದ. ಅವನಲ್ಲಿ ಹಣವಿದ್ದುದರಿಂದ ಅವನಿಗೆ ನಮಸ್ಕಾರ. ಅದೇ ರೀತಿ ನನಗೆ ಇದೊಂದು ಸಣ್ಣ ಭೂಮಿ ಇದ್ದುದರಿಂದ ನನಗೊಂದು ಹೆಸರು. ಅದು ನನ್ನದಲ್ಲ ನನ್ನ ಶ್ರಮದ್ದು, ಪ್ರಕೃತಿಗೆ ಸೇರಿದ್ದು.

ಸಾಮಾನ್ಯ ಹಕ್ಕಿಗಳು ತನ್ನ ಮಕ್ಕಳನ್ನು ಸಾಕಲು ಗೂಡು ಕಟ್ಟುವುದರಿಂದ ಹಿಡಿದು ರೆಕ್ಕೆ ಬಲವಾಗುವ ತನಕ ಶ್ರಮ ಪಡುತ್ತವೆ. ಆದರೆ ಕೋಳಿ ಹಾಗಲ್ಲ. ಮೊಟ್ಟೆಯೊಡೆದ ನಂತರ ಕೋಳಿಮರಿಗಳನ್ನು ತಾಯಿ ಕೋಳಿ ತನ್ನೊಂದಿಗೆ ಕರೆದೊಯ್ದು ಅಲ್ಲಲ್ಲಿ ಮಣ್ಣು ಕೆದಕಿ, ಇಲ್ಲಿ ಆಹಾರವಿದೆ. ನೀವು ತಿನ್ನಬಹುದು ಎಂದು ತೋರಿಸಿ ಕೊಡುತ್ತದೆ. ನನ್ನ ಜೀವನ ಕ್ರಮ ಹೀಗಿದೆ. ನನ್ನ ಮಕ್ಕಳಿಗೂ ನಾನು ಇದೇ ರೀತಿ ಹೇಳಿ ಕೊಟ್ಟವ. ಬದುಕುವಂತೆ ಅನ್ನ ತಂದು ಕಾಲ ಬುಡಕ್ಕೆ ಹಾಕಲಿಲ್ಲ. ಬದಲಾಗಿ ಬದುಕುವ ದಾರಿ ತೋರಿಸಿದ್ದೇನೆ.

ಜೀವನ ಎಂಬುದು ಒಂದು ಹಾಯಿ ಕಟ್ಟಿದ ದೋಣಿಯಂತಿರಬೇಕು. ಒಮ್ಮೆ ಹಾಯಿ ಕಟ್ಟಿದರೆ ಅದರಲ್ಲಿ ನಾವು ನಿಶ್ಚಿಂತೆಯಿಂದ ಜಾಗರೂಕತೆಯಲ್ಲಿ ಮುಂದೆ ಹೋಗುವಂತಿರಬೇಕು. ಬದಲಾಗಿ ಅನುದಿನ ಪರ್ಯಂತ, ಜೀವನವೆಂಬ ದೋಣಿಗೆ ಹುಟ್ಟು ಹಾಕುತ್ತಾ ಮುಂದೆ ಚಲಾಯಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ರೈಲಿನಲ್ಲಿ ಕುಳಿತವ, ಬಸ್ಸಿನಲ್ಲಿ ಕುಳಿತವ ಗಂಟನ್ನು ತಲೆಯ ಮೇಲೆ ಮತ್ತೂ ಹೊರಬೇಕಾಗಿಲ್ಲ. ರೈಲು ಅವನ ಜೊತೆ ಅದನ್ನೂ ಹೊರಬಲ್ಲದು. ಆದುದರಿಂದ ಅದನ್ನು ಇಡುವ ಜಾಗದಲ್ಲಿ ಇಟ್ಟು ಆರಾಮವಾಗಿ ಕುಳಿತುಕೊಳ್ಳಬಹುದು.

ಪ್ರಕೃತಿಯೇ ನಮಗೊಂದು ಕಾಲೇಜ್. ಆಸಕ್ತಿಯಿಂದ ಪ್ರಾಮಾಣಿಕವಾಗಿ ದುಡಿಯುತ್ತಾ ಹೋದರೆ ಎಲ್ಲಾ ಅನುಭವವೂ ಇಲ್ಲಿ ದೊರೆಯುತ್ತದೆ.

ನಮ್ಮಲ್ಲಿ ಸಮಯ ಸಾಧಕ ಯಂತ್ರ, ಪೂರಕ ಮತ್ತು ಸಂಹಾರಕ  ಎನ್ನುವ ಮೂರು ಯಂತ್ರಗಳಿವೆ. ಇದನ್ನು ಬೇಕಾದಷ್ಟೇ ಉಪಯೋಗ ಮಾಡಿಕೊಳ್ಳಬೇಕು. ಆಧುನಿಕತೆಯ ಮೇಲೆ ನಾವು ಸವಾರಿ ಮಾಡಬೇಕೇ ಹೊರತು ನಮ್ಮ ಮೇಲೆ ಅದು ಸವಾರಿ ಮಾಡಬಾರದು. ಇದು ವರೆಗೆ ನನಗೆ ಆಧುನಿಕತೆಯ ಯಾವ ಅವಶ್ಯಕತೆಯೂ ಬೀಳಲಿಲ್ಲ. ಮುಂದೆಯೂ ಬೀಳಲಿಕ್ಕಿಲ್ಲ. ಇದು ಕೇವಲ ಭ್ರಮೆ ಅಷ್ಟೇ.

ಈಗ ನೋಡಿ ಕೃಷಿ ಕೇಂದ್ರಕ್ಕೆಲ್ಲಾ ಹೋದರೆ ಉಳಲು, ಕಟಾವು ಮಾಡಲು … ಹೀಗೆ ಎಂತೆಂತಹ ಯಂತ್ರಗಳನ್ನು ತಯಾರು ಮಾಡಿದ್ದಾರೆ. ಆದರೆ ಇಷ್ಟೆಲ್ಲಾ ತಯಾರಾದರೂ ಕೂಡಾ ನಮ್ಮ ರಾಷ್ಟ್ರದ 40% ಮಂದಿ ಇನ್ನೂ ಕಷ್ಟದಲ್ಲಿ ಇದ್ದಾರಲ್ಲ. ಅದು ಹೇಗೆ? ಅವೆಲ್ಲಾ ಇವರಿಗೆ ಮುಟ್ಟಲೇ ಇಲ್ಲವೆ? ಅದಕ್ಕಾಗಿ ನಾನು ಹೇಳುವುದು ಈ ಯಂತ್ರಗಳೆಲ್ಲಾ ಕೇಂದ್ರೀಕೃತವಾಗಿವೆ ವಿನಃ ವಿಕೇಂದ್ರೀಕರಣ ಆಗಿಲ್ಲ. ಎಲ್ಲರಿಗೆ ಮುಟ್ಟಲಿಕ್ಕೆ ಸಾಧ್ಯವೂ ಇಲ್ಲ. ಗಾಂಧೀಜಿಯವರು ಹೇಳಿದಂತೆ ಗ್ರಾಮೀಣಾಭಿವೃದ್ಧಿ ಆಗಬೇಕು. ಅಂದರೆ ಪ್ರತಿಯೊಬ್ಬರಿಗೂ ಅವಕಾಶ, ಮಣ್ಣು, ಸಂಪನ್ಮೂಲ ಸಿಗಬೇಕು. ಇದನ್ನು ಎಲ್ಲರೂ ಪಾಲು ಹಂಚಿಕೊಳ್ಳಬೇಕು. ಇತಿಹಾಸದಿಂದ ನಾವು ಏನು ನೋಡ್ತಾ ಇದ್ದೇವೆ ಎಂದರೆ ರಾಜರುಗಳು ಕೊಳ್ಳೆ ಹೊಡೆದು ಕಪ್ಪ ಕಾಣಿಕೆ ತಂದು ದೊಡ್ಡ ದೊಡ್ಡ ಅರಮನೆಗಳನ್ನು ಕಟ್ಟಿಕೊಂಡರೆ ಹೊರತು 40% ಬಡವರ ಬಗ್ಗೆ ಯೋಚಿಸಲೇ ಇಲ್ಲ. ಇವತ್ತಿನ ರಾಜಕಾರಣಿಗಳದ್ದೂ ಇದೇ ವ್ಯಾಪಾರ.

ಮೋಸ ಮಾಡುವುದು ಗಿಡಗಳಿಗೆ ಗೊತ್ತೇ ಇಲ್ಲ. ಮಾನವನಿಂದಲೇ ಅವು ಮೋಸ ಹೋಗುವುದುಂಟು.

ಕೃಷಿಕನಾದವ ತೋಟದಲ್ಲೇ ಇರಬೇಕು, ಆತನಿಗೆ ತಿರುಗಾಟ ಸಲ್ಲದು. ತಿರುಗಾಟ ಅನಿಯವಾರ್ಯವಾದರೆ ಹಿಡಿತದಲ್ಲಿರಲಿ.

ನಮ್ಮ ಯುವಕರು ಕೃಷಿಯು ಕಲಿಕೆಗೆ ತಕ್ಕ ಉದ್ಯೋಗವಲ್ಲ ಅಂತ ಭಾವನೆ ಬೆಳೆಸಿಕೊಂಡಿದ್ದಾರೆ. ಇಂದಿನ ಪರಿಸ್ಥಿತಿ ಏನಾಗಿದೆಯೆಂದರೆ ಕೃಷಿಯಲ್ಲಿ ಸಂಶೋಧನೆ ಮಾಡುವವರು ಶ್ರೀಮಂತರಾಗಿದ್ದಾರೆ. ದುಡಿಯುವವರು ಬಡವರಾಗಿದ್ದಾರೆ. ಇವರ ಮಧ್ಯೆ ಹೊಂದಾಣಿಕೆಯೇ ಇಲ್ಲ. ಕೃಷಿ ವಿಜ್ಞಾನಿಗಳು ಭೂಮಿಗಿಳಿದು ದುಡಿಯಲಿ,

ಒಂದು ಮಗುವಿನ ಕುತೂಹಲ, ವಿಜ್ಞಾನಿಯ ಪ್ರಯೋಗ ಶೀಲತೆ, ಕೆಲಸಗಾರನ ಶ್ರಮ, ಹಾಗೂ ತಾಯಿಯ ತಾಳ್ಮೆ ಇದ್ದಾಗ ಮಾತ್ರ ನಾವು ಉತ್ತಮ ಕೃಷಿಕರಾಗಬಹುದು.

ನಾವು ಹತ್ತು ಪೈಸೆ ದುಡಿದರೆ, ಭೂಮಿತಾಯಿ ಉಳಿದ ತೊಂಬತ್ತು ಪೈಸೆ ನೀಡುತ್ತಾಳೆ.

ಇಂದಿನ ಪರಿಸ್ಥಿತಿ ಏನಾಗಿದೆಯೆಂದರೆ, ಕೃಷಿಯಲ್ಲಿ ಸಂಶೋಧನೆ ಮಾಡುವವರು ಶ್ರೀಮಂತರಾಗಿದ್ದಾರೆ, ಬೆವರು ಸುರಿಸಿ ಕೃಷಿಯಲ್ಲಿ ತೊಡಗಿಸಿಕೊಂಡವರು ಬಡವರಾಗಿದ್ದಾರೆ.

**ಅಳಿದ ಮೇಲೆ**

91 ವರ್ಷಗಳ ಸುದೀರ್ಘ, ಸಾರ್ಥಕ ಜೀವನ ನಡೆಸಿದ ಚೇರ್ಕಾಡಿ ರಾಮಚಂದ್ರ ರಾಯರು ಸಹಜವಾಗಿ ವೃದ್ಧಾಪ್ಯದಿಂದ ಇಹಲೋಕವನ್ನು 21-0-2010 ರಂದು ತ್ಯಜಿಸಿದರು. ತನ್ನ ಸಮಾಜಮುಖಿ ಚಿಂತನೆಗಳಿಂದೊಡಗೂಡಿದ ಸೋಮಾರಿ ರಹಿತ ಜೀವನ ನಡೆಸಿ ಕೊನೆತನಕ ಮಾನಸಿಕವಾಗಿಯೂ, ದೈಹಿಕವಾಗಿಯೂ ಆರೋಗ್ಯದಿಂದಿದ್ದರು. ಸಮಾಜಕ್ಕೆ ಹೊರೆಯಾಗದೆ, ಮಾರ್ಗದರ್ಶಕರಾಗಿ, ಗಾಂಧೀಜಿಯವರ ತತ್ವ, ಸಿದ್ಧಾಂತಗಳಲ್ಲಿ ಸತ್ಯವನ್ನು ಕಂಡು ಅದರಂತೆ ನಡೆದವರು. ಸಮಾಜದಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನ ಕಲ್ಪಿಸಿಕೊಂಡಿದ್ದರು. ದೇಶ ವಿದೇಶಗಳ ಸಾವಿರಾರು ಜನರು ಅವರ ಕರ್ಮಭೂಮಿಯ ದರ್ಶನ ಮಾಡಿದ್ದಾರೆ, ಪ್ರೇರಿತರಾಗಿದ್ದಾರೆ.

ಬದುಕಿರುವಾಗ ಎಷ್ಟು ಉತ್ತಮ ಕೆಲಸ ಮಾಡಿದರೂ, ಸಮಾಜಕ್ಕೆ ಒಳಿತನ್ನು ಮಾಡಿದರೂ, ಪ್ರಪಂಚದಿಂದ ನಿರ್ಗಮಿಸಿದ ನಂತರ ನೆನಪಿಸಿಕೊಳ್ಳದಿರುವುದು ಈ ಜೀವಜಗತ್ತಿನ ನಿಯಮ. ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವಲ್ಲಿ ಮುಂಚೂಣಿಯಲ್ಲಿದ್ದ ಮಾನವ ಕುಲದ ಸಮಾನತೆಗಾಗಿ ಚಿಂತನೆ ನಡೆಸಿದ ಮಹಾತ್ಮ ಗಾಂಧೀಜಿಯವರನ್ನು ಅವರಿರುವಾಗಲೇ ತಿರಸ್ಕರಿಸಿ, ಗುಂಡಿಟ್ಟು ಸಾಯಿಸಿರುವುದು

ಇದಕ್ಕೆ ಜ್ವಲಂತ ಉದಾಹರಣೆ. ಇನ್ನು ಉಳಿದವರು ಯಾವ ಲೆಕ್ಕ? ಅವರವರ ಕುಟುಂಬಸ್ಥರಿಗೆ ಮಾತ್ರ ನೆನಪಿಸುವ ಹಕ್ಕೆಂದು ಸಮಾಜದ ಜನ ನಿರ್ಧರಿಸಿಕೊಂಡಿದ್ದಾರೆ.

ಚೇರ್ಕಾಡಿಯವರ ವಿಷಯದಲ್ಲಿಯೂ ಬದಲಾವಣೆಯೇನು ಆಗಿಲ್ಲ. ಅವರ ಅಭಿಮಾನಿಗಳು ರಾಜ್ಯದಾದ್ಯಂತ ಇದ್ದರು. ಕೊನೆಯ ಕೆಲವು ದಿನಗಳು ಅವರ ಆರೋಗ್ಯ ಸರಿಯಿಲ್ಲದಾಗ, ಅಂತ್ಯಕಾಲ ಸಮೀಪಿಸಿದಾಗ ಹಲವಾರು ಜನರು ವಿಚಾರಿಸಿಕೊಂಡಿದ್ದಾರೆ. ಅವರು ತೀರಿಹೋದ ವಿಷಯ ಮರುದಿನ ಕನ್ನಡ, ಇಂಗ್ಲೀಷ್ ದಿನಪತ್ರಿಕೆಗಳಲ್ಲಿ ಪ್ರಕಟವಾಗಿ ಅದೇ ದಿನ ಅಂತ್ಯಕ್ರಿಯೆ ಎಂದು ಸೂಚಿಸಲಾಗಿತ್ತು. ಅವರ ಯೋಗ್ಯತೆ ಹಾಗೂ ಹತ್ತಿರದ ಜನ ಸಂಖ್ಯೆ ಗಮನಿಸಿ ಸುಮಾರು 300 ಜನರಾದರೂ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬಹುದೆಂದು ಊಹಿಸಿಕೊಳ್ಳಲಾಗಿತ್ತು. ಆದರೆ ಹಾಜರಾಗಿದ್ದು 50ಕ್ಕಿಂತಲೂ ಕಡಿಮೆ ಜನ. ಕೃಷಿಕನಿಗೆ ನೀಡುವ ಗೌರವದ ಪ್ರತೀಕವಾದ ಕೃಷಿಕರ ಪ್ರತಿಷ್ಠೆಯ ಕೃಷಿ ಪಂಡಿತ ಪ್ರಶಸ್ತಿಯನ್ನು ದಯಪಾಲಿಸಿದ ಸರಕಾರ, ಕೃಷಿ ಇಲಾಖೆಗಳಿಗೆ, ಸಮಾಜದ ಕೃಷಿಕರನ್ನು ತನ್ನ ಕಾಯಕದಿಂದಲೇ ಹುರಿದುಂಬಿಸುತ್ತಿದ್ದ ರಾಯರ ಅಂತ್ಯ ಕಾಲದಲ್ಲಿ ಭಾಗಿಯಾಗುವ ಇಲ್ಲವೆ ಸಂದೇಶವನ್ನು ಕಳಿಸುವ ಸೌಜನ್ಯವೂ ಇಲ್ಲದಿರುವುದು, ಬಹುಶಃ ಕೃಷಿ ಪಂಡಿತ ಪ್ರಶಸ್ತಿಗೆ ಅಗೌರವ ಎನಿಸುತ್ತದೆ.

ಆದರೆ ಕರ್ನಾಟಕದ ಎಲ್ಲಾ ಪ್ರಮುಖ ದಿನ ಹಾಗೂ ನಿಯತಕಾಲಿಕಗಳು, ಆಕಾಶವಾಣಿ ಕೇಂದ್ರಗಳು ರಾಯರ ನಿಧನಕ್ಕೆ ಸಂತಾಪ ಸೂಚಿಸಿ, ಅವರ ಸಾಧನೆಗಳನ್ನು ಮತ್ತೊಮ್ಮೆ ನೆನಪಿಸಿಕೊಂಡು ಸಮಾಜಕ್ಕೆ ಪರಿಚಯಿಸಿವೆ. ಮುದ್ರಣ ಮಾಧ್ಯಮದವರು ಸಾಕಷ್ಟು ಪ್ರಚಾರ ನೀಡಿ ಕೃಷಿ ಋಷಿಗೆ ನಮನ, ಗೌರವ ಸಲ್ಲಿಸಿರುವುದು ಅತಿ ಸಂತಸದ ವಿಚಾರ.

ಏನೇ ಇರಲಿ, ಸರಳ ಜೀವನ ನಡೆಸಿ, ಪ್ರಾಮಾಣಿಕರಾಗಿ ಬದುಕಿ, ಆಧುನಿಕ ಸಮಾಜದ ಯಾವ ಆಮಿಷಕ್ಕೂ ಒಳಗಾಗದೆ, ನಿಸರ್ಗ/ ಪ್ರಕೃತಿಯನ್ನೇ ದೇವರೆಂದು ಪೂಜಿಸಿ ಜೀವನ ಸಾರ್ಥಕ್ಯವನ್ನು ಕಂಡುಕೊಂಡರು. ಅನಾಥರಾದರೂ, ಸಮಾಜದ ಅತ್ಯಂತ ಕಡೆಯ ವ್ಯಕ್ತಿಯೂ ಕೂಡಾ ಸ್ವಂತ ಪರಿಶ್ರಮದ ಮೂಲಕ ಗೌರವದಿಂದ ಬಾಳಲು ಸಾಧ್ಯವೆನ್ನುವುದನ್ನು ತನ್ನ ಎರಡೆಕರೆ ಜಮೀನಿನಲ್ಲಿ ಬರೆದಿಟ್ಟು ಹೋದ ಚೇರ್ಕಾಡಿ ಗಾಂಧಿಗೆ ಗೌರವದ ಪ್ರಣಾಮಗಳು.

ಸರ್ವೇ ಜನಾಃ ಸುಖಿನೋ ಭವಂತು

**ಮುಗಿಸುವ ಮೊದಲು**

ಚೇರ್ಕಾಡಿಯವರು ಆವಿಷ್ಕರಿಸಿದ ಭತ್ತ ಬೆಳೆಯುವ ಕ್ರಮ ಎಲ್ಲಾ ಜಮೀನಿನಲ್ಲೂ, ಎಲ್ಲಾ ಕಾಲದಲ್ಲಿಯೂ ಪ್ರಸ್ತುತ. ಕೆಲವು ಮಾರ್ಪಾಡುಗಳು ಬೇಕಾಗಬಹುದು. ಕೇವಲ ತಮ್ಮ ದೈಹಿಕ ಶ್ರಮದಿಂದ ತಮ್ಮ ಅನ್ನವನ್ನು ಉತ್ಪಾದಿಸಿಕೊಳ್ಳಲು ಸಾಧ್ಯವಿರುವ ಈ ಪದ್ಧತಿ ಸಾರ್ವತ್ರಿಕವಾದರೆ ಬಡತನ ನಿವಾರಣೆಯೂ ಸಾಧ್ಯ. ಇದು ಚೇರ್ಕಾಡಿಯವರೊಂದಿಗೆ ನಶಿಸಿಹೋಗಬಾರದು, ಮುಂದಿನ ತಲೆಮಾರಿಗೆ ಹರಿಯಲಿ ಎಂಬ ಸದುದ್ದೇಶದಿಂದ, ಅವರು ಸ್ವತಃ ಬರೆದಿಟ್ಟ ಕ್ರಮವನ್ನು ಕೆಳಗೆ ಕೊಡಲಾಗಿದೆ.

**ಸರ್ವೋದಯ ಚೇರ್ಕಾಡಿ ಭತ್ತದ ಕೃಷಿ – ಬೆಳೆಯುವ ವಿಧಾನ**

ಭೂಮಿಯ ಲಕ್ಷಣ: ಸಾಮಾನ್ಯವಾಗಿ ನೀರಾಶ್ರಯವಿಲ್ಲದ ಎತ್ತರದ ಗುಡ್ಡ ಪ್ರದೇಶಗಳಲ್ಲೂ ಭತ್ತ ಬೆಳೆಯುವುದು ಸಾಧ್ಯ. ಫಲವತ್ತಾದ ಮೆಕ್ಕಲು ಮಣ್ಣೇ ಬೇಕೆಂದಿಲ್ಲ. ಕ್ರಮೇಣ ಗಟ್ಟಿ ನೆಲ ಮೆದು ಮಣ್ಣಾಗಿ ಪರಿವರ್ತಿತವಾಗುತ್ತದೆ. ಮಣ್ಣಿನಲ್ಲಿ ಕನಿಷ್ಟ ತೇವಾಂಶ ಇದ್ದರೆ ಸಾಕು. ನೀರು ನಿಲ್ಲಿಸುವ ಅಗತ್ಯವಿಲ್ಲದುದರಿಂದ ನೆಲ ಸಮತಟ್ಟಾಗಿರಬೇಕಾಗಿಲ್ಲ. ಮುಂಗಾರು ಮಳೆಯ ಲಯಕ್ಕನುಗುಣವಾಗಿ ಬೇಸಾಯದಲ್ಲಿ ತೊಡಗಿಸಿಕೊಳ್ಳಬೇಕು. ಬೆಟ್ಟು ಗದ್ದೆ, ಮಕ್ಕಿ, ಮಜಲು, ಬೋಳು ಗುಡ್ಡ ಪ್ರದೇಶ 0ಾವುದಾದರು ಕೂಡಾ ಉತ್ಕೃಷ್ಟ ಇಳುವರಿಗೆ ಮೋಸವಿಲ್ಲ. ಹತ್ತಿರ ಮರ ಮಟ್ಟುಗಳು ಇಲ್ಲದ ಬಯಲು ಜಾಗದಲ್ಲಿ ಫಲಿತಾಂಶ ಹೆಚ್ಚು.

**ಸಾಧನ ಸಲಕರಣೆಗಳು: ಹಾರೆ, ಗುದ್ದಲಿ, ಕತ್ತಿ ಮುಂತಾದ ಸರಳ ಉಪಕರಣಗಳು**

ಬೀಜ: ರಾಜಕಾಯೆಮೆ, ಕೊತ್ತಂಬರಿ, ಕುಟ್ಟಿಕಾಯೆಮೆ, ರಾಜಮಣಿ ಮುಂತಾದ ಹೆಸರುಗಳಿಂದ ಪರಿಚಿತವಿರುವ ಸ್ಥಳೀಯ ಭತ್ತದ ತಳಿ ಈ ಪದ್ಧತಿಗೆ ಹೆಚ್ಚು ಸೂಕ್ತ. ಗಿಡ್ಡ ಜಾತಿ0ು ಬೇರೆ ತಳಿಗಳು ಕೂಡಾ ಆಗುತ್ತವೆ. ಒಂದು ಎಕರೆ ಪ್ರದೇಶದಲ್ಲಿ ನಾಟಿ ಮಾಡಲು ಒಂದು ಕಿಲೊ ಬೀಜ ಸಾಕು.

ಬೇಸಾಯ ಕ್ರಮದ ವಿವಿಧ ಹಂತಗಳು: ನೆಲವನ್ನು ಹಾರೆ ಗುದ್ದಲಿಗಳ ಸಹಾಯದಿಂದ ಸ್ವಚ್ಛಗೊಳಿಸಿ ಹದ ಬರಿಸುವುದರ ಹೊರತು ಎತ್ತು, ನೇಗಿಲು ಬಳಸಿದ ಉಳುಮೆ ಬೇಕಾಗಿಲ್ಲ. ಮೊದಲನೇ ಸಲ ಮಣ್ಣು ಗಟ್ಟಿಯಾಗಿದ್ದರೆ ನೇಗಿಲನಲ್ಲಿ ಉಳುಮೆ ಮಾಡಬಹುದು. ಆ ನಂತರದ ವರ್ಷಗಳಲ್ಲಿ ಉಳುಮೆಯ ಅಗತ್ಯವಿರುವುದಿಲ್ಲ. ಒಟ್ಟಿನಲ್ಲಿ ಭೂಮಿಯ ಮೇಲ್ಪದರ ನಾಲ್ಕು ಇಂಚು ಮಾತ್ರ ಹದ ಮಾಡಿದರೆ ಸಾಕು. ಅನಗತ್ಯದ ಕಸ, ಬೇರು, ಕಡ್ಡಿಗಳನ್ನು ತೆಗೆದು ಮಣ್ಣನ್ನು ಶುಚಿಗೊಳಿಸಿ, ಎರಡು ಇಂಚು ಆಳವುಳ್ಳ ಸಾಲುಗಳನ್ನು ರಚಿಸುವುದು. ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ಇಪ್ಪತ್ತೆರಡು ಇಂಚು ಅಂತರ ಸಾಕು. ಒಂದು ಸೆಂಟ್ ಜಾಗೆಯಲ್ಲಿ ಹದಿನೈದು ಅಡಿ ಉದ್ದದ ಹದಿನಾರು ಸಾಲುಗಳು ಬರುತ್ತವೆ. ಸಾಲಿನ ಹೊಂಡದಲ್ಲಿ ಸಿದ್ಧ ಮಾಡಿಕೊಂಡ ಹುಡಿಗೊಬ್ಬರ, ಬೂದಿ ಹಾಕಿ ಸಾಧಾರಣ ಏಳೆಂಟು ಇಂಚು ಆಳ ಕೊಚ್ಚಿ ಇರಿಸಿಕೊಳ್ಳಬೇಕು. ಒಂದು ಎಕರೆಗೆ 10 ಗಾಡಿ ಹಟ್ಟಿ ಗೊಬ್ಬರಹುಡಿ ಮತ್ತು 30 ಚೀಲ ಕರಿ/ಬಿಳಿ ಬೂದಿ ಬಳಸುವುದು.

ಸಸಿ ಮಾಡುವಿಕೆ: ನೆಡಲು ಯೋಗ್ಯವಾದ ಸಸಿಗಳನ್ನು ಪ್ರತ್ಯೇಕವಾಗಿ ಪಾತಿಗಳಲ್ಲಿ ಬೆಳೆಸಬೇಕು. ಮೇ ತಿಂಗಳ ಎರಡನೇ ಯಾ ಮೂರನೇ ವಾರದಲ್ಲಿ ಸಣ್ಣ ಸಣ್ಣ ಹದಿನಾರು ಅಡಿ ಉದ್ದ ನಾಲ್ಕು ಆಡಿ ಅಗಲದ ಪಾತಿ ಮಾಡಿ ಹುಡಿ ಗೊಬ್ಬರ ಸೇರಿಸಿ ನೀರು ಹಾಕಿದ ಪಸೆ ಮಣ್ಣಿನಲ್ಲಿ ಬೀಜ ಬಿತ್ತಿ ಸಸಿ ಬೆಳೆಸಬೇಕು. ಸುಲಭವಾಗಿ ಕೀಳಬಹುದಾದ ರೀತಿಯಲ್ಲಿ ಪಾತಿಗಳನ್ನು ರಚಿಸಿಕೊಂಡಿರುವುದರಿಂದ ಬೇರುಗಳಿಗೆ ಪೆಟ್ಟಾಗುವುದಿಲ್ಲ.

ಒಂದು ಎಕರೆ ಸ್ಥಳಕ್ಕೆ ಬೇಕಾದ ನೇಜಿಗೆ, 4 ಅಡಿ ಅಗಲ ಮತ್ತು 16 ಅಡಿ ಉದ್ದದ 10 ಮಡಿಗಳ ಅಗತ್ಯವಿದೆ. ಹಾರೆಯಿಂದ ಮಣ್ಣು ಮಗುಚಿ ಪುಡಿ ಮಾಡಿಕೊಳ್ಳಬೇಕು. ಇದಕ್ಕೆ ಉತ್ತಮವಾದ 1 ಗಾಡಿ25 ಬುಟ್ಟಿ ಪುಡಿ ಗೊಬ್ಬರ ಮಡಿಗಳಿಗೆ ಚೆಲ್ಲಿ ಮಣ್ಣಿನೊಂದಿಗೆ ಬೆರೆಸಿ ಸಮತಟ್ಟು ಮಾಡಿಕೊಳ್ಳಬೇಕು. 1 ಮಡಿಗೆ ಸುಮಾರು ಮುಕ್ಕಾಲು ಪಾವು ಬೀಜವನ್ನು ತೆಳ್ಳಗೆ ಹರಡಬೇಕು. ಆ ಮೇಲೆ ಮಡಿಯೊಂದಕ್ಕೆ 1 ಯಾ 2 ಬುಟ್ಟಿ ಒಣ ಬೂದಿ ಮತ್ತು ಅದರ ಮೇಲೆ ಎರಡು ಬುಟ್ಟಿ ಭತ್ತದ ಹೊಟ್ಟನ್ನು ಸಮವಾಗಿ ಹರಡಬೇಕು. ನಂತರ ಮಡಿಯ ಸುತ್ತಲಿನ ಹುಡಿ ಮಣ್ಣನ್ನು ಸುಮಾರು ಅರ್ಧ ಇಂಚಿನಷ್ಟು ದಪ್ಪನಾಗಿ ಹರಡಬೇಕು. ದಿನಕ್ಕೆ ಒಂದು ಸಲ ಮಣ್ಣು ಒದ್ದೆಯಾಗುವಷ್ಟು ನೀರನ್ನು ಚಿಮುಕಿಸಬೇಕು. ಮಡಿಗಳಲ್ಲಿ ನೀರು ನಿಲ್ಲಬಾರದು. ಹೀಗೆ ಮಾಡಿದರೆ ಎಲ್ಲಾ ಬೀಜಗಳು ಕ್ರಮವಾಗಿ ಮೊಳಕೆ ಬರುತ್ತವೆ. 10 ದಿನಗಳ ನಂತರ ಮಡಿಯಲ್ಲಿ ಬೆಳೆದ ಕಳೆ ಗಿಡಗಳನ್ನು ಕಿತ್ತು ಬಿಸಾಡುವುದು ಅವಶ್ಯ. ಈ ನೇಜಿಯನ್ನು 20 ರಿಂದ 30 ದಿನಗಳ ಒಳಗೆ ಅಂದರೆ ಮಳೆಗಾಲ ಪ್ರಾರಂಭವಾದೊಡನೆ ನಾಟಿ ಶುರು ಮಾಡಬಹುದು.

ನಾಟಿ ಮತ್ತು ನಿರ್ವಹಣೆ: ಪಶ್ಚಿಮ ಕರಾವಳಿಯಲ್ಲಿ ಸಾಧಾರಣ ಜೂನ್ ತಿಂಗಳ ಮೊದಲ ವಾರದಲ್ಲಿ ಮಳೆ ಪ್ರಾರಂಭವಾಗುವುದು. ಈ ಸಮಯದಲ್ಲಿ ಮೊದಲೇ ತಯಾರು ಮಾಡಿಕೊಂಡ ಸಾಲುಗಳಲ್ಲಿ ಎಂಟು ಇಂಚು ಅಂತರದಲ್ಲಿ ನಾಟಿ ಮಾಡಬೇಕು. ಕವಲೊಡೆದ ಸಸಿಯಾದರೆ 1 ಇಲ್ಲವಾದರೆ 2 ಸಸಿಗಳನ್ನು ನೆಡಬಹುದು. ಮಳೆ ಬರುತ್ತಿದ್ದರೆ ಬೆಳಿಗ್ಗೆ, ಇಲ್ಲವಾದರೆ ಸಂಜೆ ಹೊತ್ತು ನಾಟಿ ಕೆಲಸ ಮುಗಿಸುವುದು ಸೂಕ್ತ. ಏರಿಯ ಮಣ್ಣನ್ನು ಮುಟ್ಟಬಾರದು. ಒಣ ನೆಲದಲ್ಲಿ ಮೊಳೆತ ಸಸಿಗಳಿಗೆ ಹೆಚ್ಚಿನ ನೀರು ಗೊಬ್ಬರ ಅವಕಾಶ ದೊರೆಯುವುದರಿಂದ ಹುಲುಸಾಗಿ ಮೇಲೇಳುತ್ತವೆ.

ಹದಿನೈದು ದಿನಗಳ ಬಳಿಕ ಬೇಗ ಕೊಳೆಯುವ ಹಸಿ ಸೊಪ್ಪುಗಳು, ಸಸಿ0ು ಎರಡೂ ಬದಿಗಳಲ್ಲಿ ಇಟ್ಟು, ಎರಡು ದಿನ ಕೊಳೆತ ಸೆಗಣಿ ನೀರು, ನೆಲಕಡಲೆ ಹಿಂಡಿ ನೀರು ಕೊಡುವುದು.

ಇದಾದ ಒಂದು ತಿಂಗಳಲ್ಲಿ ಸಾಮಾನ್ಯ ಎಂಟರಿಂದ ಹತ್ತು ಹಿಲ್ಲೆ ಬರುತ್ತವೆ. ಆಗ ಮತ್ತೊಮ್ಮೆ ಹುಡಿಗೊಬ್ಬರ, ಕೊಳೆತ ಸೆಗಣಿನೀರು, ನೆಲಗಡಲೆ ನೀರು ಕೊಟ್ಟು ಮೊದಲು ಎತ್ತರವಿದ್ದ ಜಾಗದ ಮಣ್ಣನ್ನು ಕೀಸಿ ಗಿಡದ ಬುಡಕ್ಕೆ ಹಾಕಬೇಕು. ಆಗ ನೆಲ ಸಮತಟ್ಟಾಗುತ್ತದೆ. ಈ ರೀತಿಯ ಗೊಬ್ಬರ ಬಳಸಿ ನಂತರ ಮಣ್ಣು ಮುಚ್ಚುವುದು ಬಲಿತ ಸಸಿಗಳ ಬುಡ ಭದ್ರವಾಗಲು ಸಹಾಯಕವಾಗುತ್ತದೆ. ಅಂತೆಯೇ ಹಸಿರು ಗೊಬ್ಬರ ಕೊಳೆತು ಬೇರು ಪಸರಿಸಲು ಸಹಕಾರಿಯಾಗುತ್ತದೆ.

ಗಿಡ ನೆಟ್ಟ ಸುಮಾರು ಅರವತ್ತು ಎಪ್ಪತ್ತು ದಿನಗಳಲ್ಲಿ ಬೂದಿ, ನೆಲಗಡಲೆ, ಸೆಗಣಿ ನೀರಿನ ಮಿಶ್ರ ಮಾಡಿ ಬುಡಕ್ಕೆ ಕೊಟ್ಟು ಮಧ್ಯ ಭಾಗದ ಮಣ್ಣನ್ನು ಕೀಸಿ ಬುಡಕ್ಕೆ ಹಾಕುವುದು. ಇದರಿಂದ ಬುಡ ಇನ್ನಷ್ಟು ಗಟ್ಟಿಯಾಗುವುದರ ಜೊತೆಗೆ, ಸಸಿಗಳು ಆಹಾರ ಹುಡುಕಲು ದೂರ ಹೋಗಬೇಕಾಗಿಲ್ಲ. ಹುಲುಸಾಗಿ ಬೆಳೆಯಲು ಸಾಧ್ಯ. ಎರಡು ಭತ್ತದ ಸಸಿ ಇಪ್ಪತ್ತಕ್ಕೂ ಹೆಚ್ಚು ಸಸಿಗಳಾಗುತ್ತವೆ. ಈಗ ಏರಿ ಇದ್ದ ಜಾಗ ಕಣಿಯಾಗುತ್ತದೆ. ಮುಂದಿನ ವರ್ಷ, ಸುಮಾರು ನಾಲ್ಕು ಇಂಚು ಆಳದ ಈ ಕಣಿಯಲ್ಲಿ ನಾಟಿ ಮಾಡಬಹುದು. ಪುನಃ ಸಾಲು ತೆಗೆಯುವ ಅವಶ್ಯಕತೆಯಿಲ್ಲ. ಸಾಮಾನ್ಯವಾಗಿ ಎರಡು ಸಲ ಮಣ್ಣನ್ನು ಸರಿಸುವುದರಿಂದ ಕಳೆಯ ಬಾಧೆ ಇರುವುದಿಲ್ಲ. ಹಾಗೇನಾದರೂ ಇದ್ದರೆ ಅದನ್ನು ಏರಿಯಲ್ಲಿ ಹೋಗಿ ಗಿಡಕ್ಕೆ ಪೆಟ್ಟಾಗದಂತೆ ಕೀಳುವುದು ಸುಲಭ. ಸಾಧಾರಣ ನೂರಿಪ್ಪತ್ತು ದಿವಸಗಳಲ್ಲಿ ಭತ್ತ ಕಟಾವಿಗೆ ಸಿದ್ಧವಾಗುತ್ತದೆ. ಈ ರೀತಿ ಮಾಡಿದ ಕೃಷಿಗೆ ರೋಗ ಬಾಧೆ ಇರುವುದಿಲ್ಲ. ಕದಿರೊಡೆಯುವ ಸಂದರ್ಭದಲ್ಲಿ ಗಂಟು ಬಾಧೆ ಕಾಣಿಸಿಕೊಂಡಲ್ಲಿ ಐವತ್ತು ಗ್ರಾಂ ಮೆಣಸಿನ ಪುಡಿ, ಎರಡು ಸೇರು ಬೂದಿ ಮತ್ತು ಸುಣ್ಣದ ಹುಡಿಯೊಂದಿಗೆ ಮಿಶ್ರ ಮಾಡಿ ಗಿಡಗಳಿಗೆ ಬೀಸಿ ಹಾರಿಸಿದರೆ ಈ ಬಾಧೆ ನಿವಾರಣೆಯಾಗುತ್ತದೆ. ಎಕರೆಗೆ ನಲವತ್ತೈದರಿಂದ ಅರವತ್ತು ಮುಡಿ ಇಳುವರಿ ಬರುತ್ತದೆ.

ಈ ಸರ್ವೋದಯ ಕೃಷಿ ವಿಧಾನಕ್ಕೆ ಮಳೆಯ ನೀರು ಸಾಕಾಗುತ್ತದೆ. ಮಳೆಗಾಲದಲ್ಲಿ ಗಾಳಿ ಪಶ್ಚಿಮ ದಿಕ್ಕಿನಿಂದ ಬೀಸುವುದರಿಂದ, ಸಾಲುಗಳನ್ನು ಪೂರ್ವ ಪಶ್ಚಿಮವಾಗಿ ತೆಗೆದರೆ ಗಾಳಿ ಏರಿಗಳ ಮಧ್ಯದಲ್ಲಿ ಸಾಗಿ ಗಿಡಗಳನ್ನು ಬೀಳಿಸುವುದಿಲ್ಲ. ನಾಟಿ ಮಾಡುವಾಗ ಇದ್ದ ಒಂದು ಸಸಿಯು ಬೆಳೆದು ಫಸಲು ಬರುವ ಹೊತ್ತಿಗೆ 30ರಿಂದ 40 ಗಿಡಗಳಾಗಿ ಇಡೀ ಗದ್ದೆ ಹಸಿರು ಸೀರೆ ಉಟ್ಟಂತೆ ಕಂಗೊಳಿಸುತ್ತಿರುತ್ತದೆ.

ಇದೇ ಮಾದರಿಯಲ್ಲಿ ರಾಗಿ ಬೆಳೆದು ಎಕರೆಗೆ 12 ಕ್ವಿಂಟಲ್ ಫಸಲು ತೆಗೆಯಬಹುದು. ನೀರಿನ ಅನುಕೂಲವಿದ್ದಲ್ಲಿ, ಕಟಾವಿನ ನಂತರ ಒಂದಿಲ್ಲೊಂದು ತರಕಾರಿ ಬೆಳೆದು ಆದಾಯ ಹೆಚ್ಚಿಸಿಕೊಳ್ಳಬಹುದು. ದ್ವಿದಳ ಧಾನ್ಯಗಳನ್ನೂ ಬೆಳೆಸಬಹುದು.

ಆಹಾರ ಬೆಳೆಗಳ ನಂತರ ವಿಶ್ರಾಂತಿ ದಿನಗಳಲ್ಲಿ ಸಣ್ಣ ಪ್ರಮಾಣದ ಗುಡಿಕೈಗಾರಿಕೆ, ಸೇವಾ ಕ್ಷೇತ್ರ ಯಾ ಉಪಕಸುಬುಗಳಲ್ಲಿ ತೊಡಗಿಸಿಕೊಂಡು ಜೀವನದ ಸಾರ್ಥಕ್ಯವನ್ನು ಕಂಡುಕೊಳ್ಳಬಹುದು.

ಈ ಪದ್ಧತಿಯಲ್ಲಿ ರಾಯರು 1965 ರಿಂದ ಇಪ್ಪತ್ತು ವರ್ಷಗಳ ಕಾಲ ಅವರ ಎರಡು ಎಕ್ರೆ ಜಾಗದಲ್ಲಿ ಕಡಿಮೆ ಉತ್ಪಾದನಾ ಖರ್ಚಿನಲ್ಲಿ ಹೆಚ್ಚಿನ ಉತ್ಪತ್ತಿ ತೆಗೆದು ಎಲ್ಲರನ್ನು ಬೆರಗುಗೊಳಿಸಿದ್ದಾರೆ.

# ಅನುಬಂಧ

**ಅನುಬಂಧ 1**

**ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ರಾಯರ ವಿಚಾರಗಳು**

**ಚೇರ್ಕಾಡಿ ಟೆಕ್ನಿಕ್ ಮತ್ತು ರಾಮಚಂದ್ರರಾಯರು**

**(ಕೋ.ಮ.ಕಾರಂತ-ಕಸ್ತೂರಿ ಮಾಸಪತ್ರಿಕೆ – ಫೆಬ್ರವರಿ 1996)**

ರಾಮಚಂದ್ರರಾಯರು ಬ್ರಹ್ಮಾವರದಿಂದ ಐದು ಮೈಲು ಪೂರ್ವಕ್ಕಿರುವ ಆರೂರು ಗ್ರಾಮದವರು. ಅವರ ವ್ಯವಸಾಯ ವಿಧಾನಕ್ಕೆ ಚೇರ್ಕಾಡಿ ಪದ್ಧತಿ ಎಂದು ಹೆಸರು ಬಂದಿರುವುದು ಕೇವಲ ಆಕಸ್ಮಿಕ. ಚೇರ್ಕಾಡಿ ಮತ್ತು ಆರೂರು ಗ್ರಾಮಗಳ ಗಡಿಯಲ್ಲಿ ಅವರ ಮನೆ. ಚೇರ್ಕಾಡಿ ಪೇಟೆಗೆ ಹತ್ತಿರ ಅವರ ಇರವು. ಒಬ್ಬರು ಚೇರ್ಕಾಡಿ ಪದ್ಧತಿ ಎಂದು ಕರೆದರು. ಆಮೇಲೆ ಅದು ಹಾಗೆ ಉಳಿಯಿತು. ಲಾಲ್ ಬಹಾದ್ದೂರ್ ಶಾಸ್ತ್ರಿಯವರಿಗಿಂತ ಒಂದೂವರೆ ಇಂಚು ಹೆಚ್ಚು ಎತ್ತರ, ಸುಮಾರು 120 ಪೌಂಡು ತೂಗುವ ನಲವತ್ತೆಂಟು ವರ್ಷ ಪ್ರಾಯದ ರಾಮಚಂದ್ರರಾಯರಿಗೆ ಇಬ್ಬರು ಹೆಂಡಿರು, ಜೊತೆಗಾತಿಯಾದ ಲಕ್ಷ್ಮಿ ಮತ್ತು ಅನ್ನ ಕೊಡುವ ಒಂದು ಎಕರೆ ಭೂಮಿ. ನಾಲ್ಕು ಜನ ಮಕ್ಕಳು- ಸುಮತಿ, ಮಂಜುನಾಥ, ಆನಂದ ಮತ್ತು ಕುಟ್ಟಿಕಾಯಮೆ. ನಾಲ್ಕನೆಯದು ಒಂದು ಭತ್ತದ ಜಾತಿ. ಸೊಂಟದ ಸುತ್ತ ಒಂದು ಖಾದಿ ಪಂಚೆ, ಅವರೇ ಕೈಯಿಂದ ತಯಾರಿಸಿದ್ದು. ಎದೆಯ ಮೇಲೊಂದು ಜನಿವಾರ. ಕಣ್ಣಿನ ಸುತ್ತ ಅನುಭವದ ಕಪ್ಪುಚಕ್ರ. ಬಾಯಿ ತುಂಬಾ ಮಾತು. ತುಟಿಯ ತುದಿಯಲ್ಲಿ ನಗು. ಹಿಂದಕ್ಕೆಳೆದು ಬಾಚಿದ ತಲೆಕೂದಲು. ಕಣ್ಣಿನಲ್ಲಿ ಆತ್ಮವಿಶ್ವಾಸದ ಹೊಳಪು.

ಅರ್ಧ ಹಂಚು, ಅರ್ಧ ಹುಲ್ಲಿನ ಮನೆಯ ಮಣ್ಣಿನ ಜಗಲಿಯ ಮೇಲೆ ಕುಳಿತು ನಾನು ಅವರೊಡನೆ ಮಾತನಾಡುತ್ತಿದ್ದೇನೆ. ನನ್ನ ಬೆನ್ನ ಹಿಂದೆ ಹಟ್ಟಿ. ಮೂರು ದನಗಳು ಹುಲ್ಲು ಜಗಿಯುವ ಶಬ್ದ. ಮನೆಯ ಒಳಗಿನಿಂದ ಕೈಮಗ್ಗದ ಖಟ್ ಖಟ್ ಶಬ್ದ, ಅವರ ಹೆಂಡತಿ ಅದರ ಮೇಲೆ ಕೆಲಸ ಮಾಡುತ್ತಿರಬೇಕು. ಶಬ್ದದ ಹಿನ್ನೆಲೆ ಸಂಗೀತ. ಸುತ್ತಮುತ್ತ ಮೂಲೆ ಮೂಲೆಗಳಲ್ಲಿ ಮತ್ತು ಹೊರಗೆ ಗೋಡೆಗೆ ಒರಗಿ ನಿಂತ ಹಾರೆ, ಪಿಕ್ಕಾಸು, ಗುದ್ದಲಿ, ಖಾದಿ ಕೇಂದ್ರ ಬೋರ್ಡಿನ ಬಳಿ, ಎದುರು ಕಿಟಕಿಯ ದಳಿಗಳಿಗೆ ಒರಗಿ ನಿಂತ ಭತ್ತದ ಗೊಂಚಲನ್ನು ಹೊತ್ತ ಮೂರು ಮಾದರಿಯ ಸಸಿಗಳು. ಹಸುವಿನ ಹಾಲನ್ನು ತುಂಬಿಕೊಂಡ ಲೋಟ ನನ್ನೆದುರು ಕುಳಿತಿದೆ. ರಾಮಚಂದ್ರರಾಯರು ಮಾತನಾಡುತ್ತಲೇ ಇದ್ದಾರೆ. ತಮ್ಮ ಕಿರಿಯ ಹೆಂಡತಿ-ಒಂದು ಎಕರೆ ಭೂಮಿ-ಬಗೆಗೆ ಮಾತನಾಡಲು ಅವರ ತವಕ ಹೇಳತೀರದು.

ನೋಡಿ ನಾನು ಬರುವಾಗ ಇದು ಕಾಡು. ಬೆಟ್ಟಗುಡ್ಡ. ಬೆಟ್ಟು ಎಂದರೆ ಹೇಗಿರಬೇಕು ನೀವೇ ಯೋಚನೆ ಮಾಡಿ. ಒಂದು ಬಾವಿ ಬಿಟ್ಟರೆ ಬೇರೆ ನೀರಿನ ತಾವೇ ಇಲ್ಲ. ಆದರೆ ಸ್ವಾವಲಂಬನೆಯ ಆಸೆ ನನ್ನನ್ನು ಧೈರ್ಯಗೆಡಲು ಬಿಡಲಿಲ್ಲ. ಬಂದೆ, ಮನೆ ಕಟ್ಟಿದೆ. ಗಿಡಗಂಟಿ, ಕಲ್ಲು ಮುಳ್ಳು ಸವರಿದೆ. ಸಾಧನೆ ಮಾಡಿದೆ. ಎತ್ತು ತಂದು ಉತ್ತು ಬಿತ್ತು ನೋಡಿದೆ. ನೆಲ ಒಲಿಯಲಿಲ್ಲ. ಹತ್ತು ವರ್ಷ ಕಾಲ ಹೋರಾಡಿದೆ. ನಾನು ಸೋತು ಹೋದೆನೇ ಎಂದು ಅನೇಕ ಬಾರಿ ಅನ್ನಿಸಿತು. ಆದರೆ, ಪ್ರಯೋಗ ಮಾಡಿ, ಮಾಡಿ ಕೊನೆಗೊಮ್ಮೆ ನೆಲ ನಕ್ಕಿತು. ಗಿಡ ಹಸುರಾಯ್ತು. ಭತ್ತ ಮನೆ ತುಂಬಿತ್ತು. ಈಗ ನನಗೆ ಹೆದರಿಕೆ ಇಲ್ಲ. ಮಳೆರಾಯ ಸಿಟ್ಟು ಮಾಡಲಿ, ನಗಲಿ, ಅಳಲಿ, ಚಿಂತೆ ಇಲ್ಲ. ನೋಡಿ ಈ ವರ್ಷದಂತೆ ಎಂದೂ ಆಗಿಲ್ಲ. ಮಳೆ ಕೈ ಕೊಟ್ಟಿತು. ಎಷ್ಟೋ ಕಡೆ ಬೆಳೆ ಹಾಳಾಯಿತು. ನೀರಿನಾಶ್ರಯವಿದ್ದ ಬೆಟ್ಟ ಗದ್ದೆಗಳಲ್ಲೂ ಭತ್ತ ಹೊಟ್ಟಾಯಿತು. ಆದರೆ ನನಗೆ ಈ ಬೆಟ್ಟು ಗದ್ದೆ ಕೈ ಕೊಡಲಿಲ್ಲ. ಏಕೆ? ರಾಮಚಂದ್ರರಾಯರು ಮಾಟ ಮಂತ್ರ ಮಾಡಿದ್ದಾರೆಯೇ? ಮನೆಯ ಮುಂದಿನ ಗದ್ದೆ ನೋಡಿದರೆ ಇಲ್ಲೇನು ಮೆಣಸು, ಗೆಣಸು ಬೆಳೆಸುತ್ತಿದ್ದಾರೆಯೇ ಎಂದು ಅನ್ನಿಸುತ್ತದೆ. ಪೂರ್ವ ಪಶ್ಚಿಮಕ್ಕೆ ಮಲಗಿರುವ ಸಾಲಾದ ಏರಿಗಳು. ಈ ಏರಿಗಳ ಮೇಲೆ ಹದವಾದ ದೂರದಲ್ಲಿ ನೆಡಲ್ಪಟ್ಟ ಭತ್ತದ ಸಸಿಗಳು. ಅವಶ್ಯಕತೆಯೇ ಆವಿಷ್ಕಾರದ ತಾಯಿ ಎಂಬ ಗಾದೆ ರಾಮಚಂದ್ರ ರಾಯರಂಥವರನ್ನು ಕಂಡೇ ಹುಟ್ಟಿರಬೇಕು. ಇಲ್ಲದೇ ಇದ್ದರೆ ನಾಲ್ಕು ಪೌಂಡು ಕುಟ್ಟಿಕಾಯಮ ಬೀಜ ಹಾಕಿ ಒಂದು ಎಕರೆ ಬೆಟ್ಟು ಭೂಮಿಯಲ್ಲಿ 70 ಮುಡಿ, ಸುಮಾರು 20 ಕ್ವಿಂಟಲ್, ಭತ್ತವನ್ನು ಈ ಮನುಷ್ಯ ಬೆಳೆಸುತ್ತಾನೆಂದರೆ ಯಾರಿಗೆ ಆಶ್ಚರ್ಯ ಆಗಿರಲಿಕ್ಕಿಲ್ಲ? ನೀರಿನಾಶ್ರಯವಿದ್ದು ಹಾಗೂ ಮಳೆ ಚೆನ್ನಾಗಿ ಸಹಕರಿಸಿದರೆ, ಸಾಮಾನ್ಯವಾಗಿ ಬಯಲು ಗದ್ದೆಯಲ್ಲಿ ಉತ್ತಮ ಫಸಲೆಂದು ಐವತ್ತು-ಅರುವತ್ತು ಮುಡಿ ಭತ್ತ ಬೆಳೆಯಬಹುದು. ಆದರೆ ಮಳೆಯ ವಿಶೇಷ ಹಂಗಿಲ್ಲದೇ ಇಳಿಜಾರು ಬೆಟ್ಟು ಗದ್ದೆಯ ಏರಿಗಳಲ್ಲಿ ಇವರು ಅದಕ್ಕಿಂತಲೂ ಹೆಚ್ಚು ಫಸಲು ತೆಗೆದಿದ್ದಾರಲ್ಲ?

ಅಕ್ಕಿಮುಡಿಗೆ ಎರಡು ರೂಪಾಯಿ ಇದ್ದ ಕಾಲದಲ್ಲಿ ಗಾಂಧೀಜಿ ಆಹಾರ ಸಮಸ್ಯೆ ಬಗ್ಗೆ ಎಚ್ಚರಿಕೆ ಕೊಟ್ಟಿದ್ದರು. ಆಗ ಯಾರೂ ಗಾಂಧಿಯನ್ನು ನಂಬಲಿಲ್ಲ. ಆಗ ತಿಂದು ತೇಗುವಷ್ಟು ಆಹಾರವಿತ್ತು. ಅಕ್ಕಿ ಕೊಳ್ಳಲು ತವಕ ಪಡುವವರೇ ಇರಲಿಲ್ಲ. ಆಗ ಜನ ನಕ್ಕಿದ್ದರು. ಈಗ?

ಅಳುತ್ತಿದ್ದಾರೆ. ನೀವು ಏನೇ ಹೇಳಿ, ಇವರೇ, ನಮ್ಮ ಅನ್ನ ನಾವು ಮಾಡಿಕೊಳ್ಳಬೇಕು. ಪ್ರತಿಯೊಂದು ಸಂಸಾರ ನಮ್ಮ ಹಾಗೆ ಸ್ವಾವಲಂಬಿತವಾದರೆ, ಆಹಾರ ಸಮಸ್ಯೆ ಇದೆಯೇ? ಹೇಳಿ. ನಾವು ಮಾರುವುದು ಬೇಡ. ಹೊಟ್ಟೆಯ ಬೆಂಕಿಯನ್ನು ತಣ್ಣಗಾಗಿಸುವಷ್ಟು ಆಹಾರವಾದರೂ ಬೇಡವೇ? ಮನೆಯಲ್ಲಿ ಎರಡು ಮೂರು ಹಸು ಇದ್ದರೆ, ಒಂದು ಎಕರೆ ಭೂಮಿಗೆ ಗೊಬ್ಬರ ಆಯಿತು. ಮನೆಯೊಳಗೆ ಹಾಲು ಮೊಸರು ಆಯಿತು. ಪೇಟೆಯಲ್ಲಿ ಎಷ್ಟೋ ಮನೆಗಳಲ್ಲಿ ಗೊಬ್ಬರ ಇಟ್ಟುಕೊಳ್ಳಲು ಬೇಡವಾಗಿ ಹೊರಗೆ ಕೊಡುತ್ತಾರೆ. ಅದನ್ನೇ ಇಟ್ಟುಕೊಂಡು ನಾನು ಹೇಳಿದ ವಿಧಾನ ಅನುಸರಿಸಿದರೆ ನಮಗೆ ಅಸಹ್ಯವಾಗಿ ಕಾಣುವ ವಸ್ತು, ನಮ್ಮ ಆಹಾರದ ಉತ್ಪತ್ತಿಗೆ ಅನಿವಾರ್ಯವಾಗಿರುತ್ತದೆ.

ರಾಮಚಂದ್ರರಾಯರು ಈ ವಿಧಾನದಲ್ಲಿ ಬರಿಯ ಭತ್ತವಲ್ಲ-ರಾಗಿಯನ್ನೂ ಬೆಳೆದಿದ್ದಾರೆ. ಇಪ್ಪತ್ತು ಸೆಂಟ್ಸ್ ಜಾಗದಲ್ಲಿ ನಾಲ್ಕು ಮುಡಿ ರಾಗಿ ಬೆಳೆದಿದ್ದಾರೆ. ಅವರ ದೃಷ್ಟಿಯಲ್ಲಿ ಇದೇ ಸರ್ವೋದಯ. ಅವರು ಸರ್ವೋದಯ ಚಳವಳಕ್ಕೆ ಸೇರಿದವರಲ್ಲ. ಆದರೆ ಅಕ್ಷರಶಃ ಆ ತತ್ವವನ್ನು ಸಾಕ್ಷಾತ್ಕರಿಸಿಕೊಂಡರು. ಈ ಸರ್ವೋದಯ ಪದ್ಧತಿಯನ್ನು-ಹಾಗೆಂದು ರಾಮಚಂದ್ರರಾಯರು ಕರೆಯುತ್ತಾರೆ, ಮಳೆ ಕೈಕೊಟ್ಟರೂ ಹಾನಿಯಿಲ್ಲ. (ನೋಡಿ ಸಸಿ ಒಂಬತ್ತು ಇಂಚು ಆಳದಲ್ಲಿ ಇರುವುದರಿಂದ, ಭೂಮಿಯೊಳಗಿನ ತಂಪು ಅದಕ್ಕೆ ಸಿಗುತ್ತದೆ. ಬಿಸಿಲು ಬಿದ್ದರೂ ಗಿಡ ಕರಟಿ ಹೋಗುವುದಿಲ್ಲ). ಎತ್ತು ಇಲ್ಲದಿದ್ದರೂ ನಡೆಯುತ್ತದೆ. ಇಳಿಜಾರು ಬೆಟ್ಟುಗದ್ದೆಯಾದರೂ ಪರವಾಯಿಲ್ಲ.

ಈ ಒಕ್ಕೈ ಸಾಧಕನನ್ನು ಕಂಡು ನಕ್ಕವರು, ಈಗ ತಲೆದೂಗುತ್ತಿದ್ದಾರೆ. ತಮ್ಮ ಆಲಸ್ಯವನ್ನು ಮುಚ್ಚಿಕೊಳ್ಳಲು ಇದು ರಾಮಚಂದ್ರರಾಯರಿಗೆ ಸರಿ ಎಂದು ಹೇಳುವವರು ಇದ್ದಾರೆ. ಆದರೆ ಅವರಿಗೆ ಯಾವುದರ ಪರಿವೆಯೂ ಇಲ್ಲ. ಈಗ ಎರಡನೇ ಬೆಳೆ ತೆಗೆಯುವುದು ಸಾಧ್ಯವೇ? ಎಂದು ಪ್ರಯೋಗ ನಡೆಸಿದ್ದಾರೆ. ಬೆಳೆದ ಸಸಿಯನ್ನು ನಾನು ನೋಡಿದ್ದೇನೆ. ಇದು ಯಶಸ್ವಿಯಾದರೆ, ವ್ಯವಸಾಯದ ಚರಿತ್ರೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗುತ್ತದೆ. ಖಾಲಿ ಲೋಟ ಎದುರು ಕೂತಿದೆ. ಹಾಲು ಕುಡಿದುದು ಮರೆತೇ ಹೋಗಿದೆ. ಹಸು ಹುಲ್ಲು ಜಗಿಯುವ ಶಬ್ದ, ಕೈಮಗ್ಗದ ಜೋಗುಳ, ಹೊಟ್ಟೆಯ ಬೆಂಕಿಯಿಂದ ಎದ್ದು ಬಂದ ಫಿನಿಕ್ಸ್ ಪಕ್ಷಿ-ಕದಿರು ಹೊತ್ತ ಮಾದರಿ ಸಸಿಗಳು-

ನಮಸ್ಕಾರ ಬರುತ್ತೇನೆ. ಇಲ್ಲ, ನಿಮ್ಮನ್ನು ಅಲ್ಲಿಯವರೆಗೆ ಬಿಟ್ಟು ಬರುತ್ತೇನೆ.

**ಹಸಿರು ಉಸಿರಿನ ಚೇರ್ಕಾಡಿ ರಾಮಚಂದ್ರ ರಾಯರು**
**(ಉದಯವಾಣಿ ದಿನಪತ್ರಿಕೆ 29-08-1971 – ವಿಶುಕುಮಾರ್)**

ನಮ್ಮ ದೇಶದಲ್ಲಿ ಎಂಥೆಂಥ ಜನರಿದ್ದಾರೆಂದರೆ ಕೆಲಸ ಕೊಡಿ, ಕೆಲಸ ಕೊಡಿ ಎಂದು ಪೇಟೆ ಪಟ್ಟಣಗಳಲ್ಲಿ ಬೀದಿ ಬೀದಿ ಅಲೆದು ಕ್ಯೂ ನಿಲ್ಲುವವರಿದ್ದಾರೆ. ನಿರುದ್ಯೋಗ ನಿರುದ್ಯೋಗ ಎಂದು ಭಾಷಣ ಬಿಗಿಯುವವರಿದ್ದಾರೆ. ಜನಸಂಖ್ಯೆ ಹೆಚ್ಚಾಗುತ್ತಿದೆ, ಆಹಾರದ ಅಭಾವ, ಕುಟುಂಬ ಯೋಜನೆ ಮಾಡಿ ಎಂದು ಹೇಳುವ ಮಂತ್ರಿಗಳಿದ್ದಾರೆ. ನಮಗೆ ಭೂಮಿ ಇಲ್ಲ, ಸಾಲ ಕೊಡಿ ಎನ್ನುವ ರೈತರಿದ್ದಾರೆ. ಗೇಣಿದಾರರು ಭೂಮಿಯನ್ನು ಕೊಡುವುದಿಲ್ಲ, ಸಾಲವನ್ನು ಹಿಂತಿರುಗಿಸುವುದಿಲ್ಲ ಎಂದು ಕೋರ್ಟಿಗೆ ಅಲೆದು ನೆತ್ತಿಗೆ ಕೈ ಇಡುವವರಿದ್ದಾರೆ.

ಇದು ಯಾವ ರಗಳೆಯೂ ಇಲ್ಲದೆ ಪ್ರಕೃತಿಯೊಂದಿಗೆ ಹೋರಾಡಿದ ಒಬ್ಬ ರೈತರು ಇಲ್ಲಿದ್ದಾರೆ. ಅವರೊಬ್ಬ ವಿಚಿತ್ರ ಅಲ್ಲ, ಅದ್ಭುತ ವ್ಯಕ್ತಿ ಎಂದು ಅವರನ್ನು ಕಂಡವರಿಗೆ ಮನದಟ್ಟಾಗುತ್ತದೆ. ಬ್ರಹ್ಮಾವರದಿಂದ ಐದಾರು ಮೈಲು ದೂರ ಚೇರ್ಕಾಡಿಯ ರಸ್ತೆ ತಾಗಿ ಹಲವು ಮುಳ್ಳು ಬೆಳೆಯುವ ಕುಮೇರಿ ಜಾಗವಿದೆ. ಎಲ್ಲಿ ತಲೆ ಎತ್ತಿ ನೋಡಿದರೂ ಕಾಣುವುದು ಮುಳ್ಳು, ಪಾಪಸ್‌ಕಲ್ಲಿ ಬೇಲಿಗಳು. ಇಂಥ ಅಲಕ್ಷಿತ ಭೂಮಿಯ ಮಧ್ಯೆ ಸುಮಾರು ಒಂದೂವರೆ ಎಕರೆ ಸ್ಥಳದಲ್ಲಿ ಒಂದು ಖಾದಿ ಧಾಮ. ಖಾದಿ ಧಾಮ ಎಂದರೆ ಖಾದಿ ಬಟ್ಟೆಯನ್ನು ತಯಾರಿಸುವುದೇ ಎಂದು ನಿರೀಕ್ಷಿಸಿದರೆ ತಪ್ಪಾದೀತು. ಈ ಖಾದಿ ಧಾಮದಲ್ಲಿ ಉತ್ಪಾದನೆಯಾಗುವುದು ಭತ್ತ, ರಾಗಿ, ಹಲಸು, ಗೇರು, ಕಬ್ಬು, ಬದನೆ, ಬಾಳೆ, ವೀಳ್ಯದೆಲೆ, ಮಾವು, ಕಾಳುಮೆಣಸು, ಮರಗೆಣಸು ಇತ್ಯಾದಿ, ಇತ್ಯಾದಿ.

ಮುಳ್ಳು ಬೇಲಿಗೆ ಹಾಕಿದ ತಡಮೆಯ ಮೇಲೆ ಹೈಜಂಪ್ ಮಾಡಿ, ಯಾರದೋ ಗದ್ದೆಯ ಒಳಗೆ ಕಾಲಿಟ್ಟಿದ್ದೇನೆ ಎಂದು ಅನುಭವಿಸುತ್ತಾ ಹುಲುಸಾಗಿ ಬೆಳೆದ ಹುಲ್ಲುಗಳ ಮೇಲೆ ಹಸನಾಗಿ ನಡೆಯುತ್ತಾ ಹೋಗುವಾಗಲೇ ಹಸಿರು ಪೈರುಗಳ ನಡುವೆ ಒಬ್ಬ ಬ್ರಾಹ್ಮಣ ರೈತ ಹಾಗೂ ಅವರ ಹೆಂಡತಿ ದುಡಿಯುವುದು ಕಾಣುತ್ತದೆ. ಯಾರೋ ಬಂದಿದ್ದಾರೆ ಎಂದುಕೊಂಡು ರೈತ ಬೇಗ ಬೇಗನೆ ಕೆಲಸವನ್ನು ಅರ್ಧದಲ್ಲಿ ಬಿಟ್ಟು,

ಬತ್ತಲೆ ಇರುವ ದೇಹದ ನಡುವಿಗೆ ಒಂದು ಬೈರಾಸನ್ನು ಸುತ್ತಿ ಅಂಗಿ ಬಟ್ಟೆ ಧರಿಸಲೆಂದು ಒಳಗೆ ಓಡುತ್ತಾರೆ. ರಾಯರೇ, ಸ್ವಲ್ಪ ಹಾಗೆ ಇರಿ, ಓಡಬೇಡಿ ಎನ್ನಬೇಕು. ಅಂಗಿ ಹಾಕಿಕೊಂಡು ಬರುತ್ತೇನೆ ಎನ್ನುತ್ತಾರೆ. ಅಂಗಿ ಬೇಡ, ಈ ವೇಷದಲ್ಲೆ ಫೋಟೋ ತೆಗೆಯಬೇಕು ಎನ್ನಬೇಕು. ಅದಕ್ಕೆ ಅವರು ತನ್ನ ಫೋಟೋದ ವಿಷಯ ಬಿಟ್ಟು, ನೋಡಿ ಈ ಪೈರಿನ ಬೆಳೆ ಎಷ್ಟು ಚೆನ್ನಾಗಿದೆ. ಇದರ ಫೋಟೋ ಹೊಡೆಯಿರಿ. ಇಲ್ಲಿ ಮಾವಿನ ಮರಕ್ಕೆ ಸುತ್ತಿದ ಕಾಳುಮೆಣಸಿನ ಬಳ್ಳಿ ಹಬ್ಬಿದ್ದು ನೋಡಿ, ಇದರ ಫೋಟೋ ಚೆನ್ನಾಗಿ ಬರುತ್ತದೆ ಎನ್ನುತ್ತಾರೆ.

ಇವರನ್ನೇ ಹೇಳಿದ್ದು ಅದ್ಭುತ ಮನುಷ್ಯ ಎಂದು! ಮುಳ್ಳು ಕಂಟೆಗಳ ಕಾಡಿನ ನಡುವೆ ಪಚ್ಚೆ ಹಸಿರುಗಳಿಂದ ತಲೆದೂಗುತ್ತಾ ಸ್ವಾಗತಿಸುವ ಬೆಳೆಗಳು, ನಗು ನಗುತ್ತಾ ಸ್ವಾಗತಿಸುವ ಬೆತ್ತಲೆಯ ರೈತ, ಚಾಮರ ಬೀಸುತ್ತಾ ಸ್ವಾಗತಿಸುವ ನಾಯಿಮರಿ ಇವರೆಲ್ಲದರ ಆದರಕ್ಕೆ ಪಾತ್ರರಾಗಿ ಮನೆಯೊಳಗೆ ಕಾಲಿಟ್ಟರೆ, ವರಾಂಡದಲ್ಲಿ ಕಟ್ಟಿ ಹಾಕಿದ ಮುಗ್ಧ ಕರು. ಇವರ ನಡುವಿನಲ್ಲಿರುವ ಈ ರೈತ ಏನಂಥ ಅದ್ಭುತ ಎಂದು ವಾಚಕರು ಊಹಿಸಬಹುದು. ನಮ್ಮಲ್ಲಿ ನೂರಾರು, ನೂರಾರು ಮತ್ತು ನೂರಾರು ರೈತರೂ ಬೇಸಾಯಗಾರರೂ ಇದ್ದಾರೆ. ಚೇರ್ಕಾಡಿಯ ರಾಮಚಂದ್ರ ರಾಯರು ಅವರೆಲ್ಲರಿಗಿಂತಲೂ ಅದ್ಭುತ ಸಾಧನೆಯನ್ನು ಮಾಡಿದ ರೈತ. ಇಂಥ ರೈತ ನಾಡಿನಲ್ಲೇಕೆ, ದೇಶದಲ್ಲೇ ಸಿಗಲಾರರು ಎಂದರೆ ಅತಿಶಯೋಕ್ತಿಯಲ್ಲ.

ಕುಮೇರಿ ಜಾಗದ ಪೊದೆಗಳನ್ನು, ಗಿಡಗಳನ್ನು ಕಡಿದರು. ನೆಲವನ್ನು ಸಮತಟ್ಟು ಮಾಡಿದರು. ಎತ್ತುಗಳನ್ನು ತಂದು ಉತ್ತರು, ಬಿತ್ತಿದರು, ನೇಯ್ಗೆಯಲ್ಲಿ ಸಂಪಾದಿಸಿದ ಹಣವನ್ನೆಲ್ಲಾ ಗುಡ್ಡೆಗೆ ಹಾಕಿದರು. ಹತ್ತು ವರ್ಷಗಳ ಕಾಲ ಶ್ರಮ ವಹಿಸಿ ಸಾಧಿಸಿದರೂ ಗುಡ್ಡದಲ್ಲಿ ಪೈರು ಬೆಳೆಯಲಿಲ್ಲ. ಕಾಯಿಪಲ್ಯಗಳು ಆಗೊಮ್ಮೆ ಈಗೊಮ್ಮೆ ಬೆಳೆದರೂ ನಿರೀಕ್ಷಿಸಿದ ಫಲ ದೊರೆಯಲಿಲ್ಲ. ಒಮ್ಮೆ ಆಕಸ್ಮಿಕವಾಗಿ ಭೂಮಿಯ ಮೇಲೆ ಬಿದ್ದ ಭತ್ತದಲ್ಲಿ ಅರ್ಧ ಪಾವಿನಷ್ಟು ಭತ್ತ ಸಿಕ್ಕಿತು. ಎತ್ತು ತಂದು ಉತ್ತರೂ ಬೆಳೆಯದ ಭತ್ತ ಅದರಷ್ಟಕ್ಕೆ ಸರ್ವ ಸ್ವತಂತ್ರವಾಗಿ ಏಕೆ ಬೆಳೆಯಿತು ಎಂದು ಕುತೂಹಲಪಟ್ಟು ಪ್ರಯೋಗಕ್ಕಾಗಿ ಐವತ್ತು ಸೆಂಟ್ಸ್ ಜಾಗದಲ್ಲಿ ನೆಲವನ್ನು ಹಾರೆ ಪಿಕ್ಕಾಸುಗಳಿಂದಲೇ ಉತ್ತು ಭತ್ತ ಬಿತ್ತಿದರು. ಗುಡ್ಡೆ ನೆಲ್ಲು ತಳಿ ಬೆಳೆಯುವುದಕ್ಕೆ ಇದೇ ಪ್ರಯೋಗ ನಾಂದಿಯಾಯಿತು. ಇದಕ್ಕೆ ಸರ್ವೋದಯ ಪದ್ಧತಿ ಎಂದು ಹೆಸರಿಟ್ಟು ರಾಮಚಂದ್ರ ರಾಯರು ಈಗ ಐವತ್ತು ಸೆಂಟ್ಸ್ ಜಾಗದಲ್ಲಿ ಮೂವತ್ತು ಮುಡಿ ಅಕ್ಕಿ ಗಳಿಸುತ್ತಾರೆ.

ಮನೆಯ ಪಕ್ಕದಲ್ಲಿ ಒಂದು ಬಾವಿ ಇದೆ. ಅದಕ್ಕೆ ಪಂಪುಸೆಟ್ಟ್ ಇಲ್ಲ. ಅವರೇ ತಯಾರಿಸಿದ ಒಂದು ಕೈರಾಟೆ ಇದೆ. ರಾಟೆಗೆ ಎರಡು ತಟ್ಟೆಗಳನ್ನು ಸಿಕ್ಕಿಸಿ ಅದನ್ನು ಗಂಡ ಹೆಂಡತಿ ತಿರುಗಿಸಿದಾಗ ಸ್ವಯಂಚಾಲಿತ ನೀರು ಹೊಯ್ಯುತ್ತಾ ಇರುತ್ತವೆ. ಐವತ್ತು ಸೆಂಟ್ಸ್ ಜಾಗದಲ್ಲಿ ರಾಗಿ ಬಿತ್ತಿದ್ದಾರೆ. ಅದು ಕೂಡ ಹಸಿರು ಹಸಿರಾಗಿ ಬೆಳೆದು ಭತ್ತ ಪೈರಿನೊಂದಿಗೆ ಪೈಪೋಟಿಗೆ ನಿಂತಿದೆ. ಸ್ವಲ್ಪ  ಜಾಗದಲ್ಲಿ ಮರಗೆಣಸು ಬೆಳೆಸಿದ್ದಾರೆ. ಇದರಿಂದ ಕಾಫಿಗೆ ಬೇಕಾದ ತಿಂಡಿಗಳನ್ನು ತಯಾರಿಸುತ್ತಾರೆ. ಈ ಗೆಣಸಿಗೆ ಬರಗಾಲ ಗಡ್ಡೆ ಎಂದೂ ಹೆಸರಿದೆ. ಇದು ಮಳೆ ಇಲ್ಲದಿದ್ದಾಗ ಬೆಳೆಯುತ್ತದೆ. ಮುಂದೆ ಒಂದು ಹಲಸಿನ ಮರವಿದೆ. ಅದು ಕೊಡುವ ಹಲಸಿನ ಕಾಯಿಯಿಂದ ಹಪ್ಪಳ ತಯಾರಿಸಿ ಊಟಕ್ಕೆ ಉಪಯೋಗಿಸಿ ಉಳಿದುದನ್ನು ಮಾರಾಟ ಮಾಡುತ್ತಾರೆ. ಅದೇ ಹಲಸಿನ ಮರಕ್ಕೆ ಮೆಣಸಿನ ಬಳ್ಳಿ ಸುಂದರವಾಗಿ ಹಬ್ಬಿ ನಗುತ್ತಿರುತ್ತದೆ. ನೋಡಲಿಕ್ಕೆ ಚಂದವೂ ಆಯ್ತು. ಮಾರಾಟಕ್ಕೆ ಕಾಳು ಮೆಣಸು ಸಿಗುತ್ತದೆ. ಮಾವಿನ ಮರದಿಂದ ಸಿಗುವ ಮಾವುಗಳಿಂದ ಜೀವನಕ್ಕೆ ಬೇಕಾದುದೆಲ್ಲವನ್ನು ಉಪಯೋಗಿಸಿ ಹೆಚ್ಚಿಗೆ ಉಳಿದುದರಲ್ಲಿ ಸಿಹಿತಿಂಡಿ ಮಾಡಿ ಮಾರುತ್ತಾರೆ. ಅದರಿಂದಲೂ ನೂರಿನ್ನೂರು ರೂಪಾಯಿ ಸಂಪಾದನೆ. ಅದೇ ಮಾವಿನ ಮರಕ್ಕೆ ವೀಳ್ಯದೆಲೆ ಬಳ್ಳಿ ಹಬ್ಬಿದೆ. ಅದರಿಂದ ಎಲೆ ಮಾರಾಟ ಮಾಡಿ ನೂರೈವತ್ತು ರೂಪಾಯಿ ಗಳಿಸುತ್ತಾರೆ. ಐದಾರು ಗೇರುಮರಗಳಿವೆ. ಅದಕ್ಕೆ ನೀರು ಹೊಯ್ಯಬೇಕಾಗಿಲ್ಲ. ಅದರಷ್ಟಕ್ಕೆ ಅವು ಫಲ ಕೊಡುತ್ತವೆ. ಅದರಿಂದ ಸಿಕ್ಕಿದ ಗೇರುಬೀಜಗಳನ್ನು ಹುರಿದು ಅವರೇ ಪ್ಯಾಕು ಮಾಡಿ ಮಾರಾಟ ಮಾಡಿ ಇನ್ನೂರು ರೂಪಾಯಿ ಸಂಪಾದನೆ.

ಕೃತಿಯಲ್ಲಿ ಮಾತ್ರವಲ್ಲದೆ ಮಾತಿನಲ್ಲಿಯೂ ಉಪದೇಶ ಕೊಡುವುದರಲ್ಲಿ ರಾಮಚಂದ್ರ ರಾಯರು ಮೊದಲಿಗರು. ಎಪ್ಪತ್ತು ಕೋಟಿ ಜನಸಂಖ್ಯೆಗೆ ಆಹಾರ ಕೊಡುವಷ್ಟು ಬೆಳೆ ಬೆಳೆಯುವುದಿಲ್ಲ. ಆಹಾರ ಸಾಕಾಗುವುದಿಲ್ಲ. ಅದಕ್ಕಾಗಿ ಕುಟುಂಬ ಯೋಜನೆ ಮಾಡಿ ಎಂದು ಸರಕಾರ ಲಕ್ಷೋಪಲಕ್ಷ ಹಣವನ್ನು ವ್ಯಯಿಸುತ್ತದೆ. ಎಪ್ಪತ್ತು ಅಲ್ಲ, ಇನ್ನೂರು ಕೋಟಿ ಜನ ಹುಟ್ಟಿದರೂ ಈ ದೇಶದಲ್ಲಿ ಬೇಕಾಗುವಷ್ಟು ಭೂಮಿ ಇದೆ. ಬಡಬಗ್ಗರಿಗೆ ಭೂಮಿಯನ್ನು ಹಂಚಿಕೊಡಲಿ. ಕುಟುಂಬ ಯೋಜನೆಗೆ ಮಾಡುವ ಖರ್ಚನ್ನು ಗುಡ್ಡಗಳಲ್ಲಿ ಪೈರು ಬೆಳೆಸುವುದಕ್ಕೆ ಖರ್ಚು ಮಾಡಲಿ. ನಾನು ಸಾಧಿಸಿ ಕೊಡುತ್ತೇನೆ. ನೂರು ನೂರೈವತ್ತು ರೂಪಾಯಿ ಸಂಬಳಕ್ಕೆ ಹುಡುಗಿಯರು ಹುಡುಗರು ಮಾನ ಮರ್ಯಾದೆ

ಕಳೆದುಕೊಂಡು ಪೇಟೆ ಪಟ್ಟಣಗಳಲ್ಲಿ ಕೆಲಸ ಮಾಡುವುದು ಯಾಕೆ ಸ್ವಾಮಿ? ಸಂಬಳ ಹೆಚ್ಚಿಗೆ ಸಿಕ್ಕಿದರೆ ಆ ಮಾತು ಬೇರೆ. ಪ್ರಕೃತಿ ನಮಗೆಷ್ಟು ಅನುಕೂಲ ಒದಗಿಸಿಕೊಟ್ಟಿದೆ ನೋಡಿ. ಇದನ್ನು ಉಪಯೋಗಿಸುವ ನಾವು ಇನ್ನೊಬ್ಬರ ಕೂಲಿ ಚಾಕರಿಗೆ ಏಕೆ ಹೋಗಬೇಕು? ನಮ್ಮಷ್ಟಕ್ಕೆ ನಾವು ದೊಡ್ಡವರಾಗಬೇಕು. ಜನ ಇವತ್ತು ಯಾವುದಕ್ಕೂ ಸೀಟಿಲ್ಲ ಎನ್ನುತ್ತಾರೆ. ನೌಕರಿಗೂ ಸೀಟಿಲ್ಲ. ಮಂತ್ರಿ ಪದವಿಗೂ ಸೀಟಿಲ್ಲ. ಇಲ್ಲದಿದ್ದರೆ ಹೋಗಲಿ. ಇಲ್ಲಿ, ಈ ಗುಡ್ಡದಲ್ಲಿ, ಈ ಕಾಡಿನಲ್ಲಿ ಬೇಕಾದಷ್ಟು ಸೀಟುಗಳುಂಟು. ಕೋಟಿ ಜನ ಬಂದರೂ ಸೀಟು ಉಂಟು. ಬ್ಯಾಂಕಿನವರು ಹಣ ಸಾಲ ತೆಗೆದುಕೊಳ್ಳಿ ಎನ್ನುತ್ತಾರೆ. ನಾನು ಹೇಳುವುದಾದರೆ ಬಡವರಿಗೆ ಸಾಲ ಕೊಡಬೇಡಿ. ನೀವು ಕೊಡುವ ಸಾಲದಿಂದ ಆತ ಪಂಪುಸೆಟ್ಟು, ಮೈಕುಸೆಟ್ಟು, ರೇಡಿಯೋ ಸೆಟ್ಟು ತಂದು ಹಣ ಖರ್ಚು ಮಾಡುತ್ತಾನೆ. ಪಸಲಿನಿಂದ ಸಿಗುವ ಹಣ ಬಡ್ಡಿ ತೀರಿಸಲಿಕ್ಕೂ ಸಾಕಾಗುವುದಿಲ್ಲ. ಒಂದು ದಿನ ಸಾಲ ತೀರಿಸಲಾರದೆ ಎಲ್ಲಾ ಅಡವಿಟ್ಟು ದಿಕ್ಕಾಪಾಲಾಗುತ್ತಾನೆ. ಸಾಲ ಕೊಡಬೇಡಿ, ಬಡವರನ್ನು ಲಗಾಡಿ ತೆಗೆಯಬೇಡಿ.

ಇವೆಲ್ಲಾ ರಾಮಚಂದ್ರ ರಾಯರ ಅನುಭವದಿಂದ ಹೊರಟ ಮುತ್ತಿನ ಮಣಿಗಳು. ಮುನ್ನೂರ ಅರುವತ್ತೈದು ದಿನವೂ ಅವರಿಗೆ ಮನೆಯಲ್ಲಿ ಕೆಲಸ ಇದ್ದೇ ಇರುತ್ತದೆ. ಕೆಲಸ ಮಾಡಿದವರಿಗೆ ಬಡತನವೆಂಬುದಿಲ್ಲ. ಅನಾರೋಗ್ಯ ಎಂಬುದಿಲ್ಲ. ಆಲಸ್ಯ, ಉದಾಸೀನ ಇಲ್ಲವೇ ಇಲ್ಲ. ಎಮ್ಮೆಯ ಹಾಗೆ ಹೊಟ್ಟೆ ಬೆಳೆಯುವುದಿಲ್ಲ, ಪರಾವಲಂಬನೆ ಬೇಡ. ಸ್ವಾವಲಂಬನೆ. ಇದು ರಾಮಚಂದ್ರ ರಾಯರ ಯಶಸ್ಸಿನ ಮಂತ್ರ. ಎಲ್ಲಿಯವರೆಗೆ ಸ್ವಾವಲಂಬನೆ ಎಂದರೆ ಮಾರಾಟ ಮಾಡಿಯೇ ಗೊತ್ತು ವಿನಾ ಕಾಸಿಗೆ ಪಡಕೊಂಡದದು ಇಲ್ಲ. ಅವರ ಮೈಮೇಲೆ ಹಾಕಿಕೊಂಡ ಅಂಗಿ ಕೂಡಾ ಅವರೇ ನೇಯ್ದುದ್ದು. ವ್ಯಕ್ತಿಯ ಹಿರಿಮೆಗೆ ಅದ್ಭುತಕ್ಕೆ ಇದಕ್ಕಿಂತ ಹೆಚ್ಚಿನ ಕಾರಣ ಬೇಕೆ? ರಾಮಚಂದ್ರ ರಾಯರನ್ನು ದೃಷ್ಟಾಂತವಾಗಿ ಇಟ್ಟುಕೊಂಡಿದ್ದರೆ ಒಕ್ಕಲು ಹಿತ ಮಸೂದೆಯ ಕಾನೂನು ಇವತ್ತಿಗೆ ಅಗತ್ಯವೇ ಇರಲಿಲ್ಲ.

ರಾಮಚಂದ್ರ ರಾಯರ ಸಾಧನೆಯನ್ನು ಗುರುತಿಸಿ ಉಡುಪಿ ನಗರಸಭೆಯವರು ಒಂದು ಪ್ರಜಾಪ್ರಭುತ್ವ ದಿನಾಚರಣೆಯ ಸಂದರ್ಭದಲ್ಲಿ ಅವರಿಗೆ ಹಾರೆ ಪಿಕ್ಕಾಸು ಗುದ್ದಲಿಯನ್ನು ಕೊಟ್ಟು ಸನ್ಮಾನ ಮಾಡಿದ್ದಾರೆ. ನಿಜಕ್ಕೂ ಪ್ರಶಂಸನೀಯ ಕಾರ್ಯ. ಉಡುಪಿಯ ಬಸ್‌ನಿಲ್ದಾಣದ ಹತ್ತಿರದಲ್ಲಿ ಒಂದು ಗಾಂಧಿ ಮಂಟಪವಿದೆ. ಗಾಂಧಿ ಶತಾಬ್ದಿಯ ದಿನದಂದು ಪ್ರತಿಮೆಯನ್ನು ಅನಾವರಣ ಮಾಡಲು ಯೋಗ್ಯ ಪ್ರಜೆ ಒಬ್ಬ ಬೇಕಾಗಿದ್ದ. ಗಾಂಧೀಜಿಯ ಬಗ್ಗೆ ಭಾಷಣವನ್ನು ಬಿಗಿಯುತ್ತಾರೆಯೇ ವಿನಾ ಅವರ ತತ್ವಗಳನ್ನು ಪಾಲಿಸಿದವರು ಯಾರಿದ್ದಾರೆ? ಇದ್ದರೆ ರಾಮಚಂದ್ರ ರಾಯರು ಒಬ್ಬರೇ! ಕೊನೆಗೆ ಅವರ ಕೈಯಿಂದಲೇ ಅನಾವರಣ ಮಾಡಿಸಲಾಗಿತ್ತು.

**ಸಾಧಕರಿವರು : ಅಲ್ಲಿ ಪುಕುವೋಕಾ, ಇಲ್ಲಿ ಚೇರ್ಕಾಡಿ**
**(ಅಡಿಕೆ ಪತ್ರಿಕೆ – ಮೇ 1995 – ಶ್ರೀಪಡ್ರೆ)**

ನಾಲ್ಕು ದಶಕಗಳ ಹಿಂದೊಂದು ದಿನ ಬಹುವರ್ಷಗಳಿಂದ ಉಳದೆ, ಕೃಷಿ ಮಾಡದೆ, ಹಡಿಲು ಬಿಟ್ಟ ಗದ್ದೆಯಲ್ಲಿ ಹುಲ್ಲು ಕಳೆಗಳ ರಾಶಿಯ ನಡುವಿನಿಂದೆದ್ದು ಬೆಳೆದ ಭತ್ತದ ಗಿಡಗಳು ಜಪಾನಿನ ಯುವಕನೊಬ್ಬನ ಕಣ್ಣಿಗೆ ಬಿತ್ತು. ಅದು ಒಂದು ಹುಲ್ಲಿನ ಕ್ರಾಂತಿಯ ಉಗಮ. ನೀರು ನಿಲ್ಲಿಸದೆ, ಉಳದೆ, ರಸಗೊಬ್ಬರವಿಲ್ಲದೆ, ಕೃಷಿಯೋಗ್ಯವಲ್ಲವೆಂದೆಣಿಸಿದ ಭೂಮಿಯಲ್ಲೂ ಕೃಷಿ ಮಾಡುವ ಪುಕುವೋಕ ವಿಧಾನದ ಆವಿಷ್ಕಾರವಾಯಿತು. ಜಗತ್ತಿನಲ್ಲಿ ಪರ್ಯಾಯ ಕೃಷಿಯ ಹರಿಕಾರನೆಂದು ಹೆಸರಾದ ಮಸನೋಬ ಪುಕುವೋಕಾ ಬದುಕಿಗೆ ತಿರುವು ನೀಡಿದ ಈ ಘಟನೆ ಈಗ ಚರಿತ್ರೆ.

ಹೆಚ್ಚು ಕಮ್ಮಿ ಇದೇ ಕಾಲಘಟ್ಟದಲ್ಲಿ, ಗಾಂಧೀಜಿಯ ಅನ್ನ, ವಸ್ತ್ರ ಸ್ವಾವಲಂಬನೆಯ ಕರೆಗೆ ಓಗೊಟ್ಟು ದಕ್ಷಿಣ ಕನ್ನಡದ ತರುಣರೊಬ್ಬರಿಗೆ ಇಂತಹುದೇ ಸನ್ನಿವೇಶದಲ್ಲಿ ಜ್ಞಾನೋದಯವಾಯಿತು. ಮಣಸಿನ ಏರಿಯಲ್ಲಿ ದಷ್ಟಪುಷ್ಟವಾಗಿ ಬೆಳೆದ ತೆನೆ ತುಂಬಿದ ಭತ್ತದ ಗಿಡ ಕಂಡು ಹುಟ್ಟಿತೊಂದು ಹೊಸ ಕುಮೇರಿ ಭತ್ತದ ಕೃಷಿ ಕ್ರಮ. ಚೇರ್ಕಾಡಿ ಪದ್ಧತಿ. ಉಳುಮೆ, ಎತ್ತು, ಹೆಚ್ಚು ನೀರು ಬೇಡದ, ಗುಡ್ಡ ತುದಿಯ ಬಡ ಜನರೂ ಬೆಳೆಸಿ ಹೊಟ್ಟೆ ತುಂಬಿಸಿಕೊಳ್ಳಬಲ್ಲ ಕೃಷಿ. ಹಸಿರು ಕ್ರಾಂತಿಯ ಹೆಸರಿನಲ್ಲಿ, ರಸ ಕೃಷಿಯ ಅಲೆ ಬಂದು ಆಗಷ್ಟೇ ಬೇರು ಬಿಡತೊಡಗಿದ ಚೇರ್ಕಾಡಿ ಪದ್ಧತಿ ಮತ್ತು ಅದರ ಹಿಂದಿನ ಉದಾತ್ತ ತತ್ವದ ಪ್ರಭಾವವನ್ನು ಕೊಚ್ಚಿಕೊಂಡು ಹೋಗದಿದ್ದರೆ ಬಹುಶಃ ಈ ಸಾಧನೆ ತಿಳಿಯಲು ಚರಿತ್ರೆಯನ್ನು ಕೆದಕಬೇಕಾಗುತ್ತಿರಲಿಲ್ಲ.

ಜಪಾನಿನ ಪುಕುವೋಕಾ ಮತ್ತು ಚೇರ್ಕಾಡಿ ರಾಮಚಂದ್ರ ರಾಯರು ಇಬ್ಬರ ತತ್ವಗಳಲ್ಲೂ ಸಾಮ್ಯವಿದೆ. ಎರಡೂ ಸ್ವಾವಲಂಬನೆಗೆ ಒತ್ತು ಕೊಡುವ, ಕೃಷಿಯನ್ನು ನೆಮ್ಮದಿಯ ನೆಲೆವೀಡಾಗಿಸುವ, ಮಾನವನ ಬೇಕುಗಳಿಗೆ ಕಡಿವಾಣ ಹಾಕುವ, ಬಾಹ್ಯ ಒಳಸುರಿಗಳಿಲ್ಲದ ಸ್ವಯಂಪೂರ್ಣ ಸಹಜ ಕೃಷಿ ಪದ್ಧತಿಗಳು. ರಸ ಕೃಷಿಯಿಂದ ಬೇಸತ್ತ ರೈತರಿಗೆ ಪುಕುವೋಕಾ ತತ್ವಗಳು ಅಪ್ಯಾಯವೆನಿಸಿದರೆ, ಅದೇಕೋ ಹಿತ್ತಲ ಗಿಡ ಚೇರ್ಕಾಡಿಯವರ ತತ್ವಗಳಿಗೆ ಮರಳಿ ಜನಾದರ ಸಿಕ್ಕಿಲ್ಲ. ಆದರೆ ಅವರ ತತ್ವಗಳು ಇಂದಿಗೂ ಪ್ರಸ್ತುತ.

ಚೇರ್ಕಾಡಿಯವರ ಸಂದರ್ಶಕರ ಪುಸ್ತಕದಲ್ಲೊಬ್ಬ ತರುಣ ಬರೆದ ಈ ಮಾತು ಓದಿ : ಪುಕುವೋಕಾ ಬಗ್ಗೆ ಓದಿದಾಗ, ಹೀಗಿರಲು ಸಾಧ್ಯವೇ ಅನಿಸಿತ್ತು. ಚೇರ್ಕಾಡಿ ಪದ್ಧತಿಯ ಬ್ರಹ್ಮ ರಾಮಚಂದ್ರ ರಾಯರ ಶ್ರಮದ ಫಲ ನೋಡಿದ ಮೇಲೆ ನಮ್ಮೊಳಗಣ ಪುಕುವೋಕನಿಗೆ ಹೊರೆಗಲ್ಲಾ ಹುಡುಕುವುದರಲ್ಲಿ ಅರ್ಥವಿಲ್ಲ ಎನಿಸಿತು. ನಿಮ್ಮ ಉದಾಹರಣೆ ಕೃಷಿಯನ್ನು ತುಳಿದು ಯಂತ್ರ ಸಂಸ್ಕೃತಿಯ ಬೀಜ ಬಿತ್ತುವವರ ಮನ ಪರಿವರ್ತಿಸುವ ಮಾದರಿಯಾಗಲಿ.

ಬ್ರಹ್ಮಾವರದಿಂದ ಹೆಬ್ರಿಗೆ ಹೋಗುವ ರಸ್ತೆಯಲ್ಲಿ ಎಂಟು ಕಿ.ಮೀ. ದೂರದ ಚೇರ್ಕಾಡಿಯಲ್ಲಿ ರಾಮಚಂದ್ರ ರಾಯರದ್ದು ಒಂದು ಹೆಕ್ಟೇರು ಜಮೀನು. ಮಾವು, ತೆಂಗು, ಕರಿಮೆಣಸು, ಅನಾನಾಸು, ಗೇರುಬೀಜ, ಹತ್ತಿ ಎಲ್ಲವೂ ಹೇಳಿಕೊಳ್ಳುವಂತಹ ನೀರಾವರಿ ಇಲ್ಲದ ಒಣ ಕೃಷಿ. ಪುಟ್ಟ ಮನೆ. ಕರೆಂಟಿಲ್ಲ. ಬೆಳಕಿಗೆ ಚಿಮಿಣಿ ಎಣ್ಣೆ. ಒಂದು ಬಾವಿ, ಪಂಪು ಸೆಟ್ಟಿಲ್ಲ. ಗಿಡಗಳಿಗೆ ನೀರು ಹಾಕಲು ನಾನು ಒಂದು ಪಾಲು ಇಟ್ಟುಕೊಂಡಿದ್ದೇನೆ ಎನ್ನುವ ರಾಯರು ದಿನನಿತ್ಯ ಗಿಡಮರಗಳಿಗೆ ಬಾವಿಯ ನೀರು ಉಣಿಸುತ್ತಾರೆ. ಇನ್ನೊಂದು ಪಾಲು ಕೆಲಸ ಚಿಕ್ಕಮಗ ಆನಂದ ರಾವ ಅವರಿಗೆ. ಇಬ್ಬರು ಮಕ್ಕಳು. ದೊಡ್ಡ ಮಗ ಬ್ಯಾಂಕ್ ಅಧಿಕಾರಿ. ಆನಂದ ರಾವ್ ಅಪ್ಪನ ಜೊತೆ ನೆಮ್ಮದಿಯಲ್ಲಿದ್ದಾರೆ. ಎಸ್‌ಎಸ್‌ಎಲ್‌ಸಿ ನಪಾಸಾದ ನಂತರ ಕೃಷಿಗೆ ಕೈಗೂಡಿಸಿದ ಅವರೂ ಅಪ್ಪನ ಸ್ವಾವಲಂಬನೆಯ ತತ್ವಕ್ಕೆ ದನಿಗೂಡಿಸುತ್ತಿದ್ದಾರೆ.

ಅಲ್ಫಾನ್ಸೋ, ಹೊನ್ನೆಬೆಟ್ಟು, ಕಸಿ ಅಂತೆಲ್ಲಾ 8-10 ಸಮೃದ್ಧ ಫಸಲಿನ ಮಾವಿನ ಮರಗಳು. ಫಲ ಗುತ್ತಿಗೆಗೆ ಕೊಟ್ಟಿದ್ದರಿಂದ ನಾಲ್ಕು ಸಾವಿರ ರೂಪಾಯಿಗಳು ಬರುತ್ತವೆ. ಸಿಲ್ಕ್ ಕಾಟನ್ ಮರಗಳಿಂದ ಮಗ ಕೊಯ್ದ ಕೋಡುಗಳನ್ನು ರಾಯರು ಬಿಡಿಸಿ ಹತ್ತಿಯನ್ನು ಮಾರುತ್ತಾರೆ. ಬಹುವಾರ್ಷಿಕ ಮರಗಳಿಗೆ ಹಬ್ಬಿಸಿದ ಕರಿಮೆಣಸು ಬಳ್ಳಿಗಳಿಂದ ವರ್ಷಕ್ಕೆ 200-250 ಕಿಲೋ ಬೆಳೆ ಸಿಗುತ್ತದೆ. ನೆಟ್ಟುಬಿಟ್ಟ ಬಾಳೆ ಮಳೆಗಾಲದಲ್ಲಿ ನೀರು ಕುಡಿದು ವರ್ಷಕ್ಕೆ 1000 ರೂಪಾಯಿ ತಂದರೆ, ತೆಂಗಿನ ಮರದ ಕೊತ್ತಳಿಗೆ 1000 ರೂಪಾಯಿ ಕೊಡಿಸುತ್ತದೆ. 4-5 ಕ್ವಿಂಟಾಲ್ ಗೇರುಬೀಜ, 2000 ತೆಂಗಿನಕಾಯಿ.

ತಾರುಣ್ಯದಲ್ಲಿ ನೀರು ಸೇದಿ ಸುಸ್ತಾಗಿ ರಾಯರು ಸರ್ವೋದಯ ರಾಟೆ ಆವಿಷ್ಕರಿಸಿ ಬಳಸುತ್ತಿದ್ದಾರೆ. ಎರಡು ಜನ ಬೇಕು. ಎರಡು ಬಾಲ್ದಿ. ಒಂದು ಬಾಲ್ದಿ ಮೇಲೆ. ರಾಟೆಯನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸಬೇಕು. ಹೀಗೆ ಕಡಿಮೆ ಶ್ರಮದಲ್ಲಿ ಬಂದ ಬಾಲ್ದಿಯನ್ನು ಕೈಯಿಂದ ಮುಟ್ಟಬೇಕಿಲ್ಲ. ಬಿದ್ದ ನೀರು ಸಂಗ್ರಹವಾಗಿ ಹರಿದು ಗಿಡಗಳಿಗೆ ಹೋಗುವ ವ್ಯವಸ್ಥೆಯಿದೆ.

ರಾಸಾಯನಿಕ ಕೃಷಿಯ ಹಾನಿಯ ಅರಿವಿಗಿಂತಲೂ ಸ್ವಾವಲಂಬನೆಗಾಗಿ ಸಹಜ ಕೃಷಿ ನೆಚ್ಚಿಕೊಂಡ ರಾಯರ ಕಷ್ಟ ಕಂಡು ದಿ ಟಿ.ಎ.ಪೈ ಒಂದು ಪಂಪ್‌ಸೆಟ್ ಮಫತ್ತಾಗಿ ಕೊಡಲು ಮುಂದೆ ಬಂದರಂತೆ. ನಾನೇ ಬೇಡವೆಂದು ನಿರಾಕರಿಸಿದೆ. ಈಗ ನೋಡಿ ಮೇ ತಿಂಗಳವರೆಗೂ ಬಾವಿಯಲ್ಲಿ ನೀರಿದೆ. ಪಂಪು ಹಾಕಿದ್ದರೆ ಮೂರೇ ತಿಂಗಳಲ್ಲಿ ಆರಿ ಹೋಗುತ್ತಿತ್ತು. ಬಾವಿ ನೀರು ಸಾಕಾಗುವ ಕಾರಣ ಇನ್ನೊಂದು ಕೊಳವನ್ನು ಅವರು ಬಳಸುತ್ತಿಲ್ಲ. ಮರದ ಬುಡಕ್ಕೆಲ್ಲಾ ಸುತ್ತಲಿನ ತರಗೆಲೆ, ಮುಳಿಹುಲ್ಲುಗಳ ಮುಚ್ಚಿಗೆ. ನೋಡಿ, ಈಗಲೂ ಎಷ್ಟು ಪಸೆ ಇದೆ ಎಂದು ತೋರಿಸುತ್ತಾರೆ.

ಮೊದಲಿನಿಂದಲೂ ಅಡಿಕೆ, ಮಲ್ಲಿಗೆಗೆ ಆಸಕ್ತಿ ತೋರಿಸಲಿಲ್ಲ. ಹೊಟ್ಟೆ ತುಂಬಿಸುವ ಸಾಹಿತ್ಯಕ್ಕೆ ಮಾತ್ರ ಒತ್ತು. ಒಂದು ಸಿಲೋನ ಹಲಸು ನವೆಂಬರನಲ್ಲಿ ಗುಜ್ಜೆ ಬಿಡುತ್ತದೆ. ಒಂದು ಗುಜ್ಜೆ ಮೂರು ಯಾ ನಾಲ್ಕು ರೂಪಾಯಿಗೆ ಧಾರಾಳ ಹೋಗುತ್ತದೆ. ಈ ದಶಂಬರದಲ್ಲಿ 200-300 ಗುಜ್ಜೆ ಮಾರಿದ್ದೇನೆ. ಪುಕುವೋಕಾ ಹೇಳುವುದು ಸುಳ್ಳಲ್ಲ ಸ್ವಾಮಿ. ಪ್ರಕೃತಿಯಲ್ಲಿ ಅಷ್ಟು ಶಕ್ತಿ ಇದೆ. ಒಂದಷ್ಟು ಅನುಕೂಲ ಒದಗಿಸಿದರೆ ಸಾಕು, ಈ ಗಿಡ ಮರ ಫಸಲು ಕೊಡುತ್ತವೆ.

ಒಮ್ಮೆ ವಿಮೆ ಇಳಿಸಿದ್ದ ಚೇರ್ಕಾಡಿಯವರಿಗೆ ಕಂತು ಕಟ್ಟಲಾಗಲಿಲ್ಲವಂತೆ. ಅನಂತರ ನನಗೆ ಅರ್ಥವಾಯಿತು. ಜಮೀನಿರುವವರಿಗೆ ವಿಮೆ ಈ ಬಹುವಾರ್ಷಿಕ ಮರಗಳದ್ದೇ ಸಾಕು ಅಂತ. ಹಾಗೆ ಹಲಸು, ಮಾವು ನೆಟ್ಟೆ. ಒಂದಷ್ಟು ಕಸ ಮಸ ಬುಡಕ್ಕೆ ಸೇರಿಸಿ, ಸ್ವಲ್ಪ ಬೂದಿ ಮಾಡಿ ಹಾಕಿದರೆ ಸಾಕು, ಅವು ಚೆನ್ನಾಗಿ ಫಲ ಕೊಡುತ್ತವೆ. ದಾರಿಯಲ್ಲಿ ಹೋಗುತ್ತಿದ್ದಾಗ 2-3 ಜಾಪೆಯ ಜಾಗಕ್ಕೆ ತೆಂಗಿನ ಮಡಲು ಮುಚ್ಚಿತ್ತು. ಹಾ! ಇದು ನೋಡಿ ನನ್ನ ಫಿಕ್ಸೆಡ್ ಡೆಪಾಸಿಟ್, ಶುಂಠಿ ಬೆಳೆ. ಬೆಳೆದಾಗ ಬೆಲೆ ಚೆನ್ನಾಗಿಲ್ಲದಿದ್ದರೆ ಹೀಗೆ ಮುಚ್ಚಿಟ್ಟರೆ ಬೆಲೆ ಬಂದಾಗ ಮಾರಬಹುದು. ಅಥವಾ ಪುನಃ ಕೃಷಿ ಮಾಡಬಹುದು. ದುಡ್ಡು ಹುಗಿದಿಟ್ಟ ಹಾಗೆ.

ಅನಾನಾಸು ಹಣ್ಣು ಮಾರುವಾಗ, ಅದರ ತಲೆಯನ್ನೆಲ್ಲಾ ನೀರು ಬೀಳುವ ತೆಂಗಿನ ಮರದ ಬುಡದಲ್ಲಿಡುತ್ತಾರೆ. ಮಳೆ ಬಂದಾಗ ಅದನ್ನು ಅಲ್ಲಲ್ಲಿ ನೆಡಲು ಸಾಧ್ಯ. ಕೃಷಿಯಲ್ಲಿ ಇಂತಾ ಸೂಕ್ಷ್ಮಗಳಿರಬೇಕು. ಇವರು ಕಂಡುಕೊಂಡ ಇನ್ನೊಂದು ಸ್ವಾರಸ್ಯಕರ ಸೂಕ್ಷ್ಮ, ಗಿಡಗಳನ್ನು ಹುತ್ತ ಇರುವಲ್ಲಿ ನೆಟ್ಟರೆ ದಷ್ಟಪುಷ್ಟವಾಗಿ ಬೆಳೆಯುತ್ತವೆ. ಕಳೆದ ವರ್ಷದಿಂದೀಚೆಗೆ ಇವರು ತಮ್ಮ ರಾಟೆಯನು ಪ್ರಯೋಗಾರ್ಥವಾಗಿ ಬಳಸುತ್ತಿಲ್ಲ. ಕೊಡದಲ್ಲೆತ್ತಿದ ನೀರೇ ಸಾಕಾದರೆ ಮತ್ತೆ ಯಾಕೆ ಉರುಡಬೇಕು? ರಾಟೆಗೆ ಇಬ್ಬರು ಬೇಕು ನೋಡಿ, ಈ ವರ್ಷದ ಪ್ರಯೋಗ ಸರಿಯಾಗದಿದ್ದರೆ ಮತ್ತೆ ರಾಟೆ ಬಳಸುತ್ತೇವೆ.

ಈ ಇಳಿಪ್ರಾಯದಲ್ಲೂ, ಬಡತನದಲ್ಲೂ ರಾಯರಲ್ಲಿ ಗೊಣಗಾಟ ಇಲ್ಲ. ನೆಮ್ಮದಿ ಎದ್ದು ಕಾಣುತ್ತದೆ. ಮರ ಇಂತಿಷ್ಟೇ ಬೆಳೆ ಕೊಡಬೇಕೆಂದು ಕಡ್ಡಾಯವಿಲ್ಲ. ಸ್ವಾಭಾವಿಕವಾಗಿ ಬರುವಷ್ಟು ಬರಲಿ. ನಾನು ತೃಪ್ತ. ಬಲಾತ್ಕಾರ ಸ್ಪ್ರೇ ಮಾಡಿ ಬೆಳೆ ತೆಗೆಯುವುದು ಸರಿಯಲ್ಲ. ಹಲವು ಮೂಲಗಳಿಂದ ಆದಾಯ ಬಂದಾಗ ಪೂರೈಸುತ್ತದೆ. ಅತ್ಯಲ್ಪ ನೀರಿನ ಕೃಷಿಯಲ್ಲಿ, ರಾಯರು ಏನಿಲ್ಲವೆಂದರೂ 20000 ರೂಪಾಯಿ ಉಳಿಸಿ ಕಾಪಿಡುತ್ತಾರೆ. ಹೆಚ್ಚು ನೀರಿಲ್ಲದೆ ಬದುಕಲು, ಕೃಷಿ ಮಾಡಲು ಕಲಿಯಬೇಕೆನ್ನುವುದು ನನ್ನ ಧೋರಣೆ. ಸಾಲ ಮಾಡಬಾರದು. ಮೊನ್ನೆ ಮೊನ್ನೆ ಒಬ್ಬರು ಬ್ಯಾಂಕ್ ಅಧಿಕಾರಿ ಸುಲಭ ಬೆಲೆಯಲ್ಲಿ ಸೌರದೀಪ ಹಾಕಿಸಲು ಸಲಹೆ ಮಾಡಿದರು. ಸಾಲ ಕೊಡಲೂ ಬಂದರು. ಲೆಕ್ಕ ಹಾಕಿದ ಇವರು, ಇದರ ಬಡ್ಡಿಯ ಹಣದಲ್ಲಿ ನಾನು ಚಿಮಿಣಿ ದೀಪ ಉರಿಸಿಯೇನು ಎಂದರಂತೆ.

ಸಿಂಡಿಕೇಟ್ ಪ್ರತಿಷ್ಠಾನ ಚೇರ್ಕಾಡಿಯವರ ಸಾಧನೆಗೆ ಒಳ್ಳೆಯ ಪ್ರಚಾರ ನೀಡಿತ್ತು. ಈಗ ಬಸ್ರೂರಿನ ಸ್ವಯಂಸೇವಾ ಸಂಸ್ಥೆ, ನಂದನಾ ರೆಡ್ಡಿಯವರ ಗ್ರಾಮಾಶ್ರಮ ಇವರ ಕೃಷಿ ಕ್ರಮದಲ್ಲಿ ಆಸಕ್ತಿ ವಹಿಸಿ ಪ್ರಚಾರ ನೀಡತೊಡಗಿದೆ. ಇದು ಬಿಟ್ಟರೆ ಸರಕಾರಿ ಕೃಪಾಪೋಷಿತ ಏಕಮುಖ ಕೃಷಿ ವಿಸ್ತರಣಾ ವ್ಯವಸ್ಥೆಗೆ ಇವರ ಸಾಧನೆಗೆ ಕನ್ನಡಿ ಹಿಡಿಯಬೇಕೆಂದು ಅನ್ನಿಸಿಲ್ಲ.

ರಾಗಿ ಕುಡಿಯುವವನಿಗೆ ಮೀಸೆ ಹಿಡಿಯಲು ಹದಿನೈದು ಜನ ಎಂಬ ಗಾದೆಯಿದೆ. ಕೃಷಿಗೆ ಪಂಪ್‌ಸೆಟ್ಟ್, ಮಶಿನರಿ ಅಂತ ತೀರಾ ಬೇಕಾದಕ್ಕೆ ಬೇಕೇ ಹೊರತು, ಈ ಯಂತ್ರಗಳು ನಮ್ಮ ಮೇಲೆ ಸವಾರಿ ಮಾಡಲು ಬಿಡಬಾರದು. ನಾವು ಅವುಗಳ ಮೇಲೆ ಸವಾರಿ ಮಾಡಬೇಕು. ನಾವು ರಾಷ್ಟ್ರಕ್ಕೆ, ಸಮಾಜಕ್ಕೆ, ಮಕ್ಕಳಿಗೆ ಭಾರವಾಗಬಾರದು ಎನ್ನುವ ರಾಯರು ಮೂರು ತತ್ತ್ವಗಳನ್ನು ಹೇಳುತ್ತಾರೆ. ಮುಕ್ಕಾಲಂಶ ಆದರೂ ಸ್ವಾವಲಂಬಿ ಆಗಬೇಕು. ಬಿಸಿಲು ಕುದುರೆ ಹಿಡಿಯಲು, ಆಕಾಶಕ್ಕೆ ಏಣಿ ಹಾಕಲು ಹೋಗಬಾರದು. ಕೃಷಿಯಲ್ಲಿ ಅನಿರೀಕ್ಷಿತ ಬಂದರೆ ಅದಕ್ಕೆ ಶರಣಾಗುವುದೇ ಒಳ್ಳೆಯದು. ಈ ಮಣ್ಣಿನಲ್ಲಿ ಹಲವು ಪ್ರಯೋಗ ಮಾಡಿದ್ದೇನೆ. ಹರಿವೆ ಬಿತ್ತಿದರೆ 21 ದಿನದಲ್ಲಿ, ಬಸಳೆ ನೆಟ್ಟು 45 ದಿನದಲ್ಲಿ ಮಾರಾಟ ಮಾಡಬಹುದು. ಮಳೆಗಾಲದಲ್ಲಿ ಕುಂಬಳ, ಬೆಂಡೆ, ಅಲಸಂಡೆ-ಹಲವು ತರಕಾರಿ ಮಾಡಿ ಮಿಕ್ಕಿದ್ದನ್ನು ಮಾರುತ್ತೇವೆ. ನಿಮಗೆ ಇಲ್ಲೇ ಪೇಟೆ ಹತ್ತಿರದಲ್ಲಿದೆ, ಹಳ್ಳಿಯಲ್ಲಿ ಇಷ್ಟು ಪ್ರತಿಫಲ ಸಿಗದಲ್ಲಾ ಎಂದರೆ, ಹಳ್ಳಿಯವರು ಮುಕ್ಕಾಲಂಶ ಸ್ವಾವಲಂಬಿ ಆದರೆ ಮತ್ತೆ ಚಿಂತೆ ಇಲ್ಲ. ನಮಗೆ ಬೇಕಾದ್ದನ್ನ ನಾವೇ ಬೆಳೆಸಬೇಕು. ಶುಂಠಿ, ಗೇರು, ಕರಿಮೆಣಸು-ಹೀಗೆ ಸ್ವಲ್ಪ ಕಾಲ ಇರಿಸಿ ಮಾರಬಹುದಾದ ಬೆಳೆ ತೆಗೆಯಬೇಕು. ಅವಸರದಲ್ಲಿ ಮಾರುಕಟ್ಟೆ ಹುಡುಕುವಂತಹ ಬೆಳೆ ಬೇಡ.

ತಮ್ಮ ಕೃಷಿ ಕ್ರಮಗಳೆಲ್ಲಾ ನಾಲ್ಕು ತಿಂಗಳು ಮಳೆ ಬರುವ ಎಲ್ಲೆಡೆಯಲ್ಲೂ ನಡೆಯುವಂತಾದ್ದು. ಈ ಕಾರಣಕ್ಕಾಗಿ ಈ ವಿಚಾರಕ್ಕೆ ಬೆಳಕು ಬೀಳಬೇಕು ಎನ್ನುತ್ತಾರೆ. ಒಂದು ಸಲ ಇಲ್ಲಿಗೆ ಭೇಟಿ ನೀಡಿದ ಹಿರಿಯ ಬ್ಯಾಂಕ್ ಅಧಿಕಾರಿಗಳು ಐಆರ್‌ಡಿಪಿ, ಅದು ಇದು ಅಂತ ಬಡ ಶ್ರಮಿಕ ವರ್ಗದವರಿಗೆ ಸಾಲ ಕೊಡುವ ಬದಲು ಇಂತಹ ಒಣಭೂಮಿಯ ಕೃಷಿಯ ಯಶೋಗಾಥೆ ತೋರಿಸಿ ಅದರ ಮರ್ಮ ತಿಳಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರಂತೆ.

ಕಾಂಕ್ರಿಟ್ ಗೋಡೆಗಳ ಒಳಗೆ ಮಕ್ಕಳನ್ನು ಕೂರಿಸಿ ನೀಡುವ ಇಂದಿನ ಶಿಕ್ಷಣದಲ್ಲಿ ಅವರಿಗೆ ಪ್ರಕೃತಿಯ ಮಹತ್ವ ಅರ್ಥವಾಗುವುದಿಲ್ಲ. ಪ್ರಕೃತಿಯೇ ದೇವರು. ಇದನ್ನು ಅರ್ಥ ಮಾಡಿಕೊಳ್ಳದೆ ಹೊರಗೆ ದೇವರ ಶೋಧ ವ್ಯರ್ಥ. ದನದ ಕೆಚ್ಚಲಿನಿಂದ ರಕ್ತ ಹೀರುವ ಇಂಬಳವಾಗದೆ, ನೊರೆ ಹಾಲು ಕುಡಿದ ಮಕ್ಕಳಾದರೆ ಯಾವುದಕ್ಕೂ ಕೊರತೆಯಿಲ್ಲ ಎನ್ನುವುದು ಚೇರ್ಕಾಡಿಯವರ ಸಂದೇಶ.

ಒಂದಿಷ್ಟು ಸೀಮೆಎಣ್ಣೆ, ಗಾಂಧೀಜಿ ಜನ್ಮದಿನದಂದು ಸಬ್ಸಿಡಿ ಬಟ್ಟೆ, ಕೃಷಿಗೆ ಅತ್ಯಲ್ಪ ನೆಲಗಡಲೆ ಹಿಂಡಿ ಬಿಟ್ಟರೆ ರಾಯರು ಕೊಂಡು ತರುವ ವಸ್ತುಗಳು ಅತ್ಯಲ್ಪ. ಯಾರಿಗಾದರೂ ಸರಕು ಸಂಸ್ಕೃತಿಯಲ್ಲಿ, ಒತ್ತುಗುಂಡಿ ತಂತ್ರಜ್ಞಾನದ ಸುಳಿಯಲ್ಲಿ ನಾವು ಎಷ್ಟು ಪರಾಧೀನವಾಗಿದ್ದೇವೆ ಎಂಬುದರ ಖಚಿತ ಚಿತ್ರ ಸಿಗಬೇಕಾದರೆ ಒಮ್ಮೆ ಚೇರ್ಕಾಡಿಯವರ ಆಶ್ರಮಕ್ಕೆ ಭೇಟಿ ನೀಡಬೇಕು. ಮಳೆಯಾಶ್ರಯದ ತುಂಬ ಅಪಾಯಗಳಿರುವ ಕೃಷಿ ಬಗ್ಗೆ ಸಂಶೋಧನೆ ಸಾಕಷ್ಟು ಆಗಿಲ್ಲ ಎಂಬ ದೂರು ಹೇಳುವವರು, ವಿಶೇಷವಾಗಿ ದುಡಿಯುವ ಚಲ, ತಿಳಿದುಕೊಳ್ಳುವ ಮುಕ್ತ ಮನಸ್ಸು ಇರುವ ನಮ್ಮ ದರ್ಕಾಸ್ತು ಮತ್ತಿತರ ಚಿಕ್ಕ ಒಣ ಭೂಮಿಗಳ ಒಡೆಯರು, ಪಾಲಿಸಿ ನಿರ್ಮಾತೃಗಳು ಮತ್ತು ವಿಸ್ತರಣಾ ಅಧಿಕಾರಿಗಳು ಇವರ ಕೃಷಿ ಕ್ರಮವನ್ನು ಅಭ್ಯಸಿಸಬೇಕು.

ಅಲ್ಲಿ ಫುಕುವೋಕಾ, ಇಲ್ಲಿ ಚೇರ್ಕಾಡಿ. ಒಂದೊಮ್ಮೆ ಫುಕುವೋಕಾನನ್ನು ನಂಬದವರೂ, ಚೇರ್ಕಾಡಿಯವರ ಸಾಧನೆ ಕಂಡರೆ ತಮ್ಮ ಅಭಿಪ್ರಾಯ ಬದಲಿಸಬಹುದು. ಮಾಹಿತಿ ತಿಳಿಯಬಯಸುವವರಿಗೆಲ್ಲಾ ರಾಯರದು ಮುಕ್ತ ಸ್ವಾಗತ.

**ಚೇರ್ಕಾಡಿ ಕೃಷಿ-ಒಂದು ಹುಲ್ಲಿನ ಕ್ರಾಂತಿ!**
**ಚೇರ್ಕಾಡಿ ರಾಮಚಂದ್ರ ರಾಯರು  ನಮಗೇಕೆ ಪ್ರಸ್ತುತ**
**(ತರಂಗ-ಆಗಸ್ಟ್ 18, 1996-ನರೇಂದ್ರ ರೈ ದೇರ್ಲ)**

ಚೇರ್ಕಾಡಿ ರಾಮಚಂದ್ರ ರಾಯರ ಕೃಷಿ ಸಾಹಸ-ಸಂದೇಶವನ್ನು ನೋಡುವಾಗ, ಕೇಳುವಾಗ ಪರ್ಯಾಯ ಕೃಷಿಯ ಹರಿಕಾರ ಜಪಾನಿನ ಮಸನೋಬ ಫುಕುವೋಕಾ ನೆನಪಿಗೆ ಬರುತ್ತಾರೆ. ಫುಕುವೋಕಾ ಭಾರತದವರೇ ಆಗಿದ್ದರೆ ಅವರನ್ನೇ ರಾಯರು ಕದ್ದದ್ದು ಎನ್ನಬಹುದಿತ್ತು ಅಥವಾ ಇವರಿಬ್ಬರೂ ಒಂದೇ ತಾಯಿಯ ಮಕ್ಕಳು ಎನ್ನಬಹುದಿತ್ತು. ಯಾಕೆಂದರೆ ಕೃಷಿಯಲ್ಲಿ ಇವರಿಬ್ಬರ ಐಡಿಯಾ-ಆವಿಷ್ಕಾರ ಒಂದೇ. ಅದು ಪೂರ್ಣ ಸಾವಯವದ ಒಂದು ಹುಲ್ಲಿನ ಕ್ರಾಂತಿ.

ಒಂದು ಹುಲ್ಲಿನ ಕ್ರಾಂತಿಯ ಜನಕ ಫುಕುವೋಕಾ ಅವರ ಕೃಷಿ ಚಿಂತನೆಗೂ ರಾಮಚಂದ್ರ ರಾಯರ ಸಾಗುವಳಿ ತಂತ್ರಕ್ಕೂ ಬಹಳ ಸಾಮ್ಯವಿದೆ. ಕೃಷಿಯ ನೆಪದಲ್ಲಿ ಭೂಮಿಯನ್ನು ಉಳುವುದು, ಕಡಿಯುವುದು, ತೋಡುವುದು ಇದಾವುದೂ ಫುಕುವೋಕ ಅವರಿಗೆ ಇಷ್ಟವಿರಲಿಲ್ಲ. ಮೊಳಕೆ-ಚಿಗುರು ಕ್ರಿಯೆ ಈ ನೆಲದಲ್ಲಿ ಅತ್ಯಂತ ಸಹಜಕ್ರಿಯೆ ಎಂಬುದನ್ನು ತಿಳಿದ ಅವರು ಬರಡು ನೆಲದಲ್ಲಿ ನೀರು ನಿಲ್ಲಿಸದೆ, ಉಳದೆ, ರಸಗೊಬ್ಬರ ಸುರಿಯದೆ ಕೃಷಿ ಮಾಡಿದರು. ಮಣ್ಣಿಗೆ ಸಹಜ ಸಾರವಿದೆ. ರಸಗೊಬ್ಬರದ ವಿಷವುಣಿಸಿ ಮಾಡುವ ಕೃಷಿ ಹೆದ್ದಧೂಮದ ಕೃಷಿ ಸಾಧನೆ ಎನ್ನುವ ಅವರು ಉತ್ತಮ ಜಾತಿಯ ಭತ್ತ, ಬಾರ್ಲಿಯನ್ನು ನೆಲದ ಮೇಲೆ ಬೇಕಾಬಿಟ್ಟಿ ಉತ್ತಿದರು. ಅದರ ಮೇಲೆ ಭತ್ತದ ಹುಲ್ಲನ್ನು ಚೆಲ್ಲಿದರು. ಮಳೆನೀರಿಗೆ ಈ ಮೇಲು ಹಾಸು ಕೊಳೆಯಿತು. ಅತ್ಯಂತ ಸಹಜವೆಂಬಂತೆ ಕೊಳೆತ ಬೈಹುಲ್ಲಿನ ಎಡೆಯಿಂದ ಭತ್ತ ಚಿಗುರತೊಡಗಿತು. ತನ್ನಿಂದ ತಾನೆ ಹುಟ್ಟಿ ಬೆಳೆದು ಸಮೃದ್ಧ ಪ್ರತಿಫಲ ನೀಡುವ ಪ್ರಕೃತಿಯ ಬದುಕು ಬಗೆ ಫುಕುವೋಕಾ ಅವರನ್ನು ನಿರಂತರ ಗಹನ ಸೂಕ್ಷ್ಮಗಳಿಗೆ ತಳ್ಳಿತು. ಮೂವತ್ತು ವರ್ಷಗಳ ಕಾಲ ರಂಗಿನ ಲೋಕದಿಂದ ದೂರವುಳಿದು, ಉದ್ಯೋಗಕ್ಕೆ ರಾಜೀನಾಮೆ ನೀಡಿ ಹೊರಜಗತ್ತಿಗೆ ಅಜ್ಞಾತವಾಗಿ ಮಣ್ಣಿನ ಸಾಧ್ಯತೆಗಳನ್ನು ಅವರು ಬೆರಗುಗಣ್ಣಿನಿಂದ ನೋಡಿದರು.

ಚೇರ್ಕಾಡಿಯವರು ಮಾಡಿದ್ದು ಇದನ್ನೇ. ಒಂದೇ ಒಂದು ವ್ಯತ್ಯಾಸವೆಂದರೆ ಫುಕುವೋಕಾ ವಿಜ್ಞಾನ ವಿದ್ಯಾರ್ಥಿ. ನಿರಂತರ ಬೆನ್ನು ಬಿಡದಂತಹ ಹೊರ ಜಗತ್ತಿನ ಸಂಬಂಧ ಸಂವೇದನೆ ಅವರೊಂದಿಗೆ ಇತ್ತು. ಚೇರ್ಕಾಡಿಯವರಿಗೆ ತನ್ನ ತೋಟವೇ ಜಗತ್ತು. ಹೊರ ಜಗತ್ತನ್ನು ಅವರು ನಂಬುವುದು ಕಡಿಮೆ. ಪ್ರತಿಯೊಂದನ್ನು ತಾತ್ವಿಕವಾಗಿ ವಿವೇಚಿಸಿ ರಂಗಿನ ಬದುಕಿಗೆ ಸವಾಲಾಗುತ್ತಾರೆ. ಫುಕುವೋಕಾ-ಚೇರ್ಕಾಡಿ ಇವರಿಬ್ಬರೂ ಮಾಡಿರುವುದು ಕೇವಲ ಮಾನವಶಕ್ತಿಯನ್ನಷ್ಟೇ ಆಧರಿಸಿದ ಸ್ವಾವಲಂಬನೆಯ ಕೃಷಿಯನ್ನು. ಬಾಹ್ಯ ಒಳಸುರಿಗಳ ಪ್ರವೇಶವಿಲ್ಲದೆ, ಕಂಪ್ಯೂಟ ಲೆಕ್ಕಾಚಾರಗಳ ಕಿರಿಕಿರಿಯಿಲ್ಲದ ಸ್ವಯಂಪೂರ್ಣ ಸಹಜ ಕೃಷಿಯನ್ನು. ಆದರೆ ಫುಕುವೋಕಾ ಪಡೆದಷ್ಟು

ಜನಾದರ ಚೇರ್ಕಾಡಿಯವರಿಗೆ ದೊರೆಯಲಿಲ್ಲ. ಅವರು ರೂಪಿಸಿದ ಸರ್ವೋದಯ ಕೃಷಿ ಪದ್ಧತಿ ಇಂದು ಪೂರ್ಣ ಎಂಬಂತೆ ಸ್ಥಗಿತಗೊಂಡಿದೆ. ಈಗ ಅವರಲ್ಲಿ ಉಳಿದಿರುವುದು ಕೃಷಿಕರ ಇಂದಿನ ಬದುಕಿಗೆ ತೀರ ಅಪ್ಯಾಯಮಾನವಾದ ಸಂದೇಶಗಳು.

ಕರ್ನಾಟಕದ ಅನೇಕ ಕಡೆಗಳಲ್ಲಿರುವ ಗುಡ್ಡೆ, ಕುಮೇರಿ, ಇಳಿಜಾರು ಮತ್ತು ಬಯಲು ಪ್ರದೇಶಗಳಲ್ಲಿ ಕಡಿಮೆ ಖರ್ಚಿನಿಂದ, ಕೇವಲ ಮಾನವ ಶ್ರಮದಿಂದಷ್ಟೇ ಹೆಚ್ಚು ಉತ್ಪನ್ನ ಪಡೆಯಲು ಚೇರ್ಕಾಡಿ ಪದ್ಧತಿಯನ್ನು ಉಪಯೋಗಿಸಬಹುದು. ಮುಖ್ಯವಾಗಿ ಪಶ್ಚಿಮ ಕರಾವಳಿಯ ಉದ್ದಕ್ಕೂ ಸಾಕಷ್ಟು ಮಳೆ ಬೀಳುವ ಗುಡ್ಡಗಳಲ್ಲಿ, ಕೃಷಿ ಜಮೀನುಗಳಲ್ಲಿ ಮನೆಗೆ ಆವರಿಸಿದ ವಳಚ್ಚಿಲ್‌ಗಳಲ್ಲಿ ಈ ಪದ್ಧತಿ ಅತ್ಯಂತ ಪರಿಣಾಮಕಾರಿ.

ರಾಮಚಂದ್ರ ರಾಯರ ಸಾಧನೆಯ ಮೂಲ ಇರುವುದು ಗಾಂಧೀ ತತ್ವಗಳ ಆಚರಣೆಯಲ್ಲಿ. ಯಾರೋ ಬೆಳೆಸಿದ್ದನ್ನು ನಾವು ತಿಂದರೆ ಅದು ಕಳ್ಳತನ-ಗಾಂಧಿಯ ಈ ಮಾತು ನನ್ನ ಸ್ವಾವಲಂಬನೆಗೆ ಮೂಲ. ಪರಾವಲಂಬಿಯಾಗಿ ನಾನು ಎಂದೂ ಬದುಕಲಾರೆ ಎನ್ನುತ್ತಾರೆ. ಮಣ್ಣಿನಲ್ಲಿ ಹಲವು ಪ್ರಯೋಗ ಮಾಡಿದ ರಾಯರು ಪ್ರಕೃತಿಯ ಚಕ್ರವನ್ನು ಪೂರ್ಣಗೊಳಿಸಿದ್ದಾರೆ ಅನ್ನಿಸುತ್ತದೆ. ಕೃಷಿಯಿಂದ ಪೂರ್ಣ ಸ್ವಾವಲಂಬಿ ಯಾಗಬೇಕು. ಬಿಸಿಲು ಕುದುರೆ ಹಿಡಿದು ನುಗ್ಗುವುದಲ್ಲ. ಅನಿರೀಕ್ಷಿತ ಆವಾಂತರಗಳಿಗೆ ಶರಣಾಗುವ ಮನಸ್ಸು ಬೇಕು-ಇದು ರಾಯರ ಕೃಷಿ ಸಂದೇಶ. ಕೃಷಿಯ ನಿಜವಾದ ಖುಷಿ ರಾಯರ ತೋಟವನ್ನು ನೋಡುವುದರಿಂದಲ್ಲ. ಹಾಗೆ ಮಾಡಿ ಅನುಭವಿಸುವುದರಿಂದ.

**ಅನುಬಂಧ 2**

**ಸಂದರ್ಶಕರ ಅಭಿಪ್ರಾಯಗಳು**
**ಎಂ. ಯಮುನಾಚಾರ್ಯ,** ಗಾಂಧೀ ವಿಚಾರ ಪರಿಷತ್, ಮೈಸೂರು (04.10.1965)

ಒಂದು ಎಕರೆ ಮತ್ತು ಸ್ವಾತಂತ್ರ್ಯ ಎಂಬ ಅಮೇರಿಕದ ಪುಸ್ತಕ ಒಂದಿದೆ. ಅದು ಓದಿದಾಗ ಸಾಧ್ಯವೇ ಎನಿಸುತ್ತದೆ. ಆದರೆ ಇಲ್ಲಿ ಶ್ರೀ ರಾಮಚಂದ್ರ ರಾಯರ ಸರ್ವೋದಯ ಪದ್ಧತಿಯ ವ್ಯವಸಾಯ ನೋಡಿದಾಗ ಒಂದು ಎಕರೆ ಭೂಮಿಯನ್ನು ಶ್ರದ್ಧೆ, ನಿಷ್ಠೆ, ಆಸಕ್ತಿ ಇಟ್ಟು ಶ್ರಮಿಸಿದರೆ, ಸ್ವಾತಂತ್ರ್ಯ ಸಾಧ್ಯವೆಂಬುದು ಅರ್ಥವಾಗುತ್ತದೆ. ವ್ಯವಸಾಯ ಈ ಕ್ರಮ ಹಿಡಿದರೆ ನಮ್ಮ ದೇಶದಲ್ಲಿ ಆಹಾರದ ಅಭಾವವೆಂಬುದು ಹಾರಿ ಹೋಗುವುದರಲ್ಲಿ ಸಂಶಯವಿಲ್ಲ. ಇಂತಹ ವ್ಯವಸಾಯ ಕ್ರಮ ನಾಡಿನಲ್ಲೆಲ್ಲಾ ಸಿದ್ಧಿಸುವಂತೆ ಮತ್ತು ವೃದ್ಧಿಯಾಗುವಂತೆ ಇಲಾಖೆಯವರು ವ್ಯವಸ್ಥೆ ಇಡಬೇಕಾದುದು ಅಗತ್ಯ. ನಾವು ಇಲ್ಲಿಗೆ ಬಂದು ಈ ಸತ್ಕಾರ್ಯ ವ್ಯವಸಾಯ ನೋಡಿ ಸಂತೋಷಗೊಂಡಿದ್ದೇವೆ.

**ಕೆ.ವಿ. ಬೆಳಿರಾಯ,** ಸಿಂಡಿಕೇಟ್ ಬ್ಯಾಂಕ್, ಮಣಿಪಾಲ

ಶ್ರೀ ರಾಮಚಂದ್ರ ರಾಯರ ಹೊಸ ರೀತಿಯ ಸರ್ವೋದಯ ಕೃಷಿ ಪದ್ಧತಿ ಆದರ್ಶನೀಯ ಮತ್ತು ಅನುಕರಣೀಯ. ಸಾಧ್ಯತೆಯನ್ನು ಕಣ್ಣು ಕಟ್ಟುವಂತೆ ಮಾಡಿ ತೋರಿಸಿದ ದಿಟ್ಟ ವ್ಯಕ್ತಿ. ಈ ರೀತಿಯ ಕೃಷಿಯನ್ನು ಅನುಸರಿಸಿ ಪ್ರತಿಯೊಬ್ಬ ರೈತನು ತನ್ನ ಮನಪೂರ್ಣ ಪ್ರಯತ್ನ ಮಾಡಿದರೆ ನಮ್ಮ ಮುಂದಿನ ಆಹಾರ ಅಭಾವದ ಪ್ರಶ್ನೆಯನ್ನು ನೀಗಿಸುವುದು ಎಷ್ಟರ ಕೆಲಸ?

**ಡಾ ವಿ.ಎಸ್. ಆಚಾರ್ಯ,** ಅಧ್ಯಕ್ಷರು, ಉಡುಪಿ ನಗರಸಭೆ (17-09-1969)

ಶ್ರೀ ರಾಮಚಂದ್ರ ರಾಯರ ಕೃಷಿಪದ್ಧತಿ, ಅದಕ್ಕಾಗಿ ಅವರು ಪಡುತ್ತಿರುವ ಶ್ರಮ, ದುಡಿಮೆ ನಿಜವಾಗಿ ಆದರ್ಶ. ನಿರಾಶೆಯ ಮೋಡ ಎಲ್ಲೆಲ್ಲೂ ಕವಿದಿರುವಾಗ ಸರ್ವೋದಯ ಪದ್ಧತಿ ಮಾತ್ರ ನಮ್ಮನ್ನು ಕಾಪಾಡಬಲ್ಲದು ಎನ್ನುವುದು ಇಲ್ಲಿಯ ಕೃಷಿಯನ್ನು ನೋಡಿ ಮನವರಿಕೆಯಾಗಿದೆ.

**ಗೋಪಾಲಕೃಷ್ಣ ಎಮ್.ಆರ್.** ರಾಮನ ಸಂಶೋಧನ ಸಂಸ್ಥೆ, ಬೆಂಗಳೂರು (22.11.1997)

ಶ್ರೀ ರಾಮಚಂದ್ರ ರಾಯರ ಜೀವನ ಕೃಷಿ ವಿಧಾನಗಳು, ಸ್ವಾವಲಂಬನೆಯ ದಾರಿಯಲ್ಲೊಂದು ಮುಖ್ಯವಾದ ಮೈಲಿಗಲ್ಲು. ಇದರ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ. ಮೊಗೆದಷ್ಟು ಮುಗಿಯದ ಜಲರಾಶಿ. ನಮ್ಮ ಇಂದಿನ ಸಮಾಜದ ಹೆಚ್ಚಿನಂಶ ಜನರು ಅವರ ಸಮಯ, ಕರ್ತವ್ಯ ಪ್ರಜ್ಞೆಯ ಜೀವನ ವಿಧಾನವನ್ನು, ಕೃಷಿ ಹಾಗೂ ಇತರ ಎಲ್ಲಾ ಕ್ಷೇತ್ರಗಳಲ್ಲೂ ಅನುಸರಿಸಿದರೆ, ದೇಶವು ಸುಸ್ಥಿಗೆ ಮರಳುವಲ್ಲಿ ಸಹಾಯವಾಗುತ್ತದೆ. ಶ್ರೀಯುತರ ತಪೋಭೂಮಿಯನ್ನು ನೋಡಿ ಅತೀವ ಆನಂದವಾಯಿತು. ನಮ್ಮ ಜನರು ಆರ್ಥಿಕ ಸಹಾಯಕ್ಕಾಗಿ ಇನ್ನೊಬ್ಬರತ್ತ ಕೈಚಾಚುವುದನ್ನು ಮರೆತು, ತಾವೇ ಸ್ವತಃ ಕಷ್ಟಪಟ್ಟು ಕೆಲಸ ಮಾಡಿ ಬೇರೊಬ್ಬರಿಗೆ ಉಪದ್ರವವಾಗದಂತೆ ಸ್ವಂತ ಬುದ್ಧಿಯನ್ನು ಉಪಯೋಗಿಸಿ ಕೆಲಸ ಮಾಡಿದಲ್ಲಿ ಖಂಡಿತವಾಗಿ ಜೀವನದಲ್ಲಿ, ನೈತಿಕವಾದ ಹಾದಿಯಲ್ಲಿ ಮುಂದೆ ಬರಲು ಸಾಧ್ಯ ಎನಿಸಿತು. ಇದು ಹಗಲಿನ ಸೂರ್ಯನಷ್ಟೇ ಸತ್ಯ. ಮಹಾತ್ಮಾ ಗಾಂಧಿಯವರ ತತ್ವಗಳನ್ನು ಇಂದಿಗೂ ಪಾಲಿಸುತ್ತಿರುವ ಶ್ರೀ ರಾಯರು ನೂರ್ಕಾಲ ಆರೋಗ್ಯವಾಗಿ ಬಾಳಿ ಬದುಕಿ, ಸಮುದ್ರದಲ್ಲಿ ಚಲಿಸುವ ಹಡಗುಗಳಿಗೆ ದಾರಿ ತೋರುವ ದೀಪಸ್ತಂಭಗಳಂತೆ ಜನರಿಗೆ ಮಾರ್ಗದರ್ಶಿಗಳಾಗಿ ಇರಲೆಂದು ಆಶಿಸುವೆ.

# ಸನ್ಮಾನ, ಪ್ರಶಸ್ತಿಗಳು

ರಾಯರ ಚಿಂತನಶೀಲ ದುಡಿಮೆ ಮತ್ತು ಕೃಷಿಯನ್ನು ಬದುಕುವ ರೀತಿಯನ್ನಾಗಿ ಸ್ವೀಕರಿಸಿದ ಮನೋಭಾವ ಕೃಷಿಕರನ್ನೂ, ಕೃಷಿಕರಲ್ಲದವರನ್ನೂ ಆಕರ್ಷಿಸಿಸಿತ್ತು. ಕೃಷಿ ಲಾಭದಾಯಕವಲ್ಲ ಇದರಲ್ಲಿ ತೃಪ್ತಿಯ ಜೀವನ ಕಂಡುಕೊಳ್ಳಲು ಸಾಧ್ಯವಿಲ್ಲವೆಂದು ನಿರ್ಧರಿಸಿದವರ ಸಂಖ್ಯೆ ಅಧಿಕ. ಅದರ ಪರಿಣಾಮ, ಸ್ವಾತಂತ್ರ್ಯ ಪೂರ್ವದಲ್ಲಿ 80%ರಷ್ಟಿದ್ದ ಕೃಷಿಕರ ಸಂಖ್ಯೆ ಈಗ 60%ಗಿಂತಲೂ ಕಡಿಮೆಯಾಗಿದೆ. ನಗರದ ಆಕರ್ಷಣೆಗೆ ಒಳಗಾಗಿ ಹಳ್ಳಿಯ ಫಲವತ್ತಾದ ಭೂಮಿಯನ್ನು ಮಾರಾಟ ಮಾಡಿ ನಗರದ ಕಡೆಗೆ ವಲಸೆ ಹೋಗುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದರಲ್ಲಿ ಸರಕಾರದ ಕೊಡುಗೆಯೂ ಸಾಕಷ್ಟಿದೆ. ನಗರದ ಅಭಿವೃದ್ಧಿಯೇ ದೇಶದ ಅಭಿವೃದ್ಧಿಯೆಂದು ಪರಿಗಣಿಸಿ ನಗರಗಳನ್ನು ಬೆಳೆಯಲು ಬಿಟ್ಟದ್ದಲ್ಲದೆ, ಕೃಷಿಕರ ಉತ್ಪಾದನೆಗೆ ಸೂಕ್ತ ಬೆಲೆ ಸಿಗುವಂತೆ ನೋಡಿಕೊಳ್ಳುತ್ತಿಲ್ಲ. ರೈತರು ಗಲಾಟೆ ಮಾಡಿದಾಗ, ಸಾಲ ವಿನಾಯಿತಿ, ಬೆಂಬಲ ಬೆಲೆ ಮುಂತಾದ ತಾತ್ಕಾಲಿಕ ಕ್ರಮಗಳನ್ನು ಕೈಗೊಂಡು ಕಣ್ಣೊರೆಸುವ ಕೆಲಸ ಮಾಡಿ ಸಮಸ್ಯೆಗೆ ಪರಿಹಾರವಿಲ್ಲದಂತೆ ಮಾಡಲಾಗುತ್ತಿದೆ.

ರಾಯರಿಗೆ ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಯನ್ನು ಅವರ ಇಳಿ ವಯಸ್ಸಿನಲ್ಲಿ ಅರ್ಜಿ ಹಾಕಿದ ಮೇಲೆ ನೀಡಲು ನಿರ್ಧರಿಸಿಲಾಗಿತ್ತು. ಅದನ್ನು ಕೊಡಲು ಎರಡು ವರ್ಷ ಕಾಯಿಸಿ, ನಂತರ ಮನೆಗೆ ಸದ್ದಿಲ್ಲದೆ ಬಂದು ಕೊಡುವ ಶಾಸ್ತ್ರ ಮಾಡಲಾಯಿತು. ರಾಯರಿಗೆ ಪ್ರಶಸ್ತಿಗಳ ಮೇಲೆ ಆಸಕ್ತಿಯೂ ಇರಲಿಲ್ಲ. ಆದರೆ ದೇಶದ ಬಡಜನರ ಉದ್ಧಾರವನ್ನು ಕೃಷಿ ಮೂಲಕ ಮಾಡಲು ಸಾಧ್ಯವೆನ್ನುವುದನ್ನು ತನ್ನ ಕಾಯಕದ ಮೂಲಕ ಸಾಧಿಸಿ ತೋರಿಸಿದ ವ್ಯಕ್ತಿಯನ್ನು ಸರಕಾರ ಸರಿಯಾದ ರೀತಿಯಲ್ಲಿ ಗೌರವಿಸಿದ್ದರೆ, ಸರಕಾರದ ಗೌರವ ಹೆಚ್ಚುತ್ತಿತ್ತು. ಅರ್ಜಿ ಹಾಕಿ ಪ್ರಶಸ್ತಿ ನೀಡುವ ಪ್ರಕ್ರಿಯೆ ಅತ್ಯಂತ ಕಳಪೆ ಪದ್ಧತಿ. ಕೃಷಿ ಇಲಾಖೆಯಲ್ಲಿ ಗ್ರಾಮ ಮಟ್ಟದಿಂದ ಹಿಡಿದು, ರಾಜ್ಯದ ರಾಜಧಾನಿಯಲ್ಲಿರುವ ಕೇಂದ್ರ ಕಛೇರಿಯ ತನಕ ವಿವಿಧ ಹಂತದಲ್ಲಿ ಪಧವೀದರರು, ಕೃಷಿ ವಿಜ್ಞಾನಿಗಳು, ನಾಗರೀಕ ಸೇವೆಯಲ್ಲಿ ತೇರ್ಗಡೆಯಾದವರು ಇದ್ದಾರೆ. ಇವರಿಗೆಲ್ಲಾ ಪ್ರತಿ ತಿಂಗಳು ಸಂಬಳ ಮಾತ್ರವಲ್ಲ, ನಿವೃತ್ತಿಯಾದ ನಂತರ ಪಿಂಚಣಿ ಸಿಗುತ್ತದೆ. ಕೃಷಿಕರಿಂದಾಗಿ ಇಷ್ಟು ಸೌಲಭ್ಯ ಪಡೆಯುವವರಲ್ಲಿ ಅವರವರ ಕಾರ್ಯವ್ಯಾಪ್ತಿಯಲ್ಲಿರುವ ಕೃಷಿಕರ ಬಗ್ಗೆ ಎಲ್ಲಾ ಮಾಹಿತಿ ಇರುತ್ತದೆ / ಇರಬೇಕು. ಇವರಿಗೆ ಕೃಷಿ ಪ್ರಶಸ್ತಿಗೆ ಆಯ್ಕೆ ಮಾಡುವ ಜವಾಬ್ದಾರಿ ಹೊರಲು ಯಾವ ರೀತಿಯ ಸಮಸ್ಯೆ ಕಾಡುತ್ತದೆ ಎಂಬುದು ಗೊತ್ತಾಗುವುದಿಲ್ಲ. ಪ್ರಶಸ್ತಿ ಪ್ರಕಟಿಸಿದ ಮೇಲೆ ಕೂಡಲೇ ಪ್ರದಾನ ಮಾಡಿದರೆ ಅದಕ್ಕೊಂದು ಗೌರವ. ಸಮಾಜದ ಅನ್ನದಾತನ ವಿಷಯದಲ್ಲಿ ಇಂತಹ ಅವಮಾನ, ಅವಹೇಳನ ಸರಕಾರಕ್ಕೆ / ಇಲಾಖೆಗೆ ಶೋಭೆ ತರುವಂಥದ್ದಲ್ಲ.

ಪ್ರತಿವರ್ಷ ಸಾವಿರಾರು ಜನ ರೈತರು ಇವರ ಕರ್ಮಭೂಮಿಯನ್ನು ಸಂದರ್ಶಿಸಿ ಮಾಹಿತಿ ಪಡೆದು ಹೊಸ ಚೈತನ್ಯದೊಂದಿಗೆ ಮರಳಿದ್ದಾರೆ. ಹಲವಾರು ಜನ ಅವರಿಂದ ಸ್ಫೂರ್ತಿ ಪಡೆದು ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ. ಇದು ರಾಯರಿಗೆ ಸಂದ ಅತ್ಯುನ್ನತ ಸನ್ಮಾನವಾಗಿತ್ತು. ಆಸಕ್ತರು ಇವರ ಕರ್ಮಭೂಮಿಯನ್ನು ಸಂದರ್ಶಿಸಲು ಬಂದಾಗ, ತನ್ನ ಇಳಿ ವಯಸ್ಸಿನಲ್ಲಿಯೂ ತರುಣರಾಗಿ, ತನ್ನೆಲ್ಲಾ

ಅನುಭವಗಳನ್ನು ಯಾವ ಅಪೇಕ್ಷೆಯಿಲ್ಲದೆ ವರ್ಗಾಯಿಸುತ್ತಿದ್ದರು. ಇವರ ಸಾಧನೆಯ ವಿವರಗಳು ಮುದ್ರಣ ಮಾಧ್ಯಮದಲ್ಲಿ ಅವಿರತವಾಗಿ ಬರುತ್ತಿತ್ತು. ರಾಯರನ್ನು ಭೇಟಿಯಾಗದೆಯೇ ಸಾವಿರಾರು ಜನರು ಪ್ರೇರಿತರಾಗಿದ್ದಾರೆ. ದೇಹದಲ್ಲಿ ಶಕ್ತಿಯಿರುವಾಗ ರಾಜ್ಯದ ವಿವಿಧೆಡೆಯಿಂದ ಕರೆ ಬಂದಾಗ ಅಲ್ಲಿಗೆ ಹೋಗಿ ಮಾಹಿತಿ ನೀಡಿದ್ದಾರೆ. ಅವರನ್ನು ಗೌರವಿಸಿ ಸನ್ಮಾನಿಸಿದವರ ಸಂಖ್ಯೆಯೂ ಬಹಳ. ಯಾವುದಕ್ಕೂ ರಾಯರು ಲೆಕ್ಕವಿಟ್ಟಿಲ್ಲ.

***

# ಶ್ರೀ ಮುದ್ರಾಡಿ ನಿಟ್ಟೆ:
# ನ್ಯಾಯ ನಿಷ್ಠುರದ ನ್ಯಾಯವಾದಿ ಕೌಡೂರು ಸದಾನಂದ ಹೆಗ್ಡೆ

ಸಮಕಾಲೀನ ಜನಜೀವನದ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ನುಡಿಯೊಂದಾಗಿ - ನಡೆ ಇನ್ನೊಂದಾಗಿ ಕಾಣುತ್ತದೆ. ಹೇಳುವ ಆದರ್ಶ ಒಂದು, ಬಾಳುವ ವಾಸ್ತವ ಇನ್ನೊಂದಾಗಿರುತ್ತದೆ. ಎಲ್ಲೋ, ಅಲ್ಲೊಮ್ಮೆ - ಇಲ್ಲೊಮ್ಮೆ ನುಡಿಯ ನೇರಕೆ ನಡೆದ ದೀಮಂತ ವ್ಯಕ್ತಿಗಳನ್ನು ನಾವು ಕಾಣುತ್ತೇವೆ. ನಮ್ಮ ಅಂತಃಕರಣ ಇಂಥವರ ಎದುರು ಬಾಗುತ್ತದೆ; ಸದಾಕಾಲ ಆ ವ್ಯಕ್ತಿಯನ್ನು, ವ್ಯಕ್ತಿಯ ಆದರ್ಶವನ್ನು ಸ್ಮರಿಸುತ್ತ ಅವರಂತಾಗಬೇಕೆಂದು ಬಯಸುತ್ತದೆ. ಆದರೆ ಇಂಥ ವ್ಯಕ್ತಿಗಳು ಅಪೂರ್ವಕ್ಕೆ ಕಾಣಸಿಗುತ್ತಾರಷ್ಟೇ. ಈ ಬಗೆಯ ವಿರಳ ಚೇತನರಲ್ಲಿ ಸದಾ ಸ್ಮರಣೀಯರಾದವರು - ನ್ಯಾಯಮೂರ್ತಿ ಕೌಡೂರು ಸದಾನಂದ ಹೆಗ್ಡೆಯವರು.

ಅಖಿಲ ಲೋಕ ಸಂಚಾರಿಗಳೂ, ವಿಚಾರಪರರೂ ಆದ ನಾರದ ರಲ್ಲಿ ಒಮ್ಮೆ ಮಹರ್ಷಿ ಬಾದರಾಯಣರು 'ಕೋನವಸ್ಮಿನ್ ಸಾಂಪ್ರತಂ ಲೋಕೋ ಗುಣವಾನ್ ಮಹಾಪುರುಷ' (ಈ ಲೋಕದಲ್ಲಿ ಮಹಾಪುರುಷನಾದವನು ಯಾರು?) – ಎಂಬುದಾಗಿ ಪ್ರಶ್ನಿಸಿದ್ದರಂತೆ. ಈ ಪ್ರಶ್ನೆಗೆ ಉತ್ತರಿಸುತ್ತ ನಾರದರು, "ಶ್ರೀರಾಮನೇ ಅಂಥ ಮಹಾಪುರುಷನೆಂದು, ಅವನಲ್ಲಿ ಮಹಾಪುರುಷನಿಗಿರಬೇಕಾದ ಸಕಲ ಗುಣ, ಯೋಗ್ಯತೆಗಳಿವೆ"ಯೆಂದು ಆ ಕಾಲಕ್ಕೇ ಅಂದಿದ್ದರಂತೆ. ಈ ಜಗದ ಪುಣ್ಯವಿಶೇಷದಿಂದ ಇಂಥ ಮಹಾಪುರುಷ ಎಲ್ಲೋ ಶತಮಾನ - ಶತಮಾನಗಳಿಗೊಮ್ಮೆ ಹುಟ್ಟಿಬರುತ್ತಾನೆ. ಇಡೀ ಮನುಕುಲಕ್ಕೇ ಮಾದರಿಯೆನ್ನಿಸುವಂತೆ ಬಾಳುತ್ತಾನೆ, ತನ್ನ ಅಸಾಧಾರಣವಾದ ವ್ಯಕ್ತಿತ್ವವನ್ನು ನಾಡಿನಾದ್ಯಂತ ಪಸರಿಸುತ್ತಾನೆ. ಪ್ರಾಯಶಃ ಇಪ್ಪತ್ತನೆಯ ಶತಮಾನದಲ್ಲಿ ಬಾಳಿ ಬದುಕಿದ್ದ ಕೌಡೂರು ಸದಾನಂದ ಹೆಗ್ಡೆಯವರು ಇಂಥ ಮಹಾಪುರುಷರಾಗಿದ್ದರು ಎಂಬ ನಂಬಿಕೆ ನನ್ನದು.

ಯಾವುದೇ ಒಂದು ಜನಾಂಗ ಬದುಕುವುದಕ್ಕೆ, ಬೆಳೆಯುವುದಕ್ಕೆ, ಪ್ರಬುದ್ಧತೆಯನ್ನು ಸಂಪಾದಿಸುವುದಕ್ಕೆ, ಸಾಧನೆಯ ಶಿಖರವನ್ನೇರುವುದಕ್ಕೆ - ಪ್ರಾಚೀನದ ನೆನಹು, ವರ್ತಮಾನದ ಅರಿವು ಹಾಗೂ ಭವಿಷ್ಯತ್ತಿನ ಕಲ್ಪನೆ - ಈ ಮೂರೂ ಬೇಕಾಗುತ್ತದೆ. ಹಳೆಯ ಸತ್ವವನ್ನು ಹೀರಿಕೊಂಡು, ಹೊಸ ಸತ್ವವನ್ನು ಬರಮಾಡಿಕೊಂಡು, ಗುರಿಯ ದೃಷ್ಟಿಯೊಂದಿಗೆ - ಅಚಲ ನಿರ್ಧಾರದಿಂದ ಯಾರು ಮುನ್ನಡೆಯುವರೋ ಅವರಿಗೆ ಹೊಸ ಕ್ಷಿತಿಜಗಳು ಕಾಣುತ್ತವೆ ಎಂಬ ಭರವಸೆ ನಮ್ಮಲ್ಲಿರುವುದರಿಂದಲೇ ದಿವಂಗತ ಕೆ.ಎಸ್. ಹೆಗ್ಡೆಯವರ ನೆನಪು ನಮಗೆ ನಿರಂತರ ಸ್ಫೂರ್ತಿ!

**ಬಾಲ್ಯ – ಶಿಕ್ಷಣ**

ಕಾರ್ಕಳ ತಾಲೂಕಿನ ಬೈಲೂರು ಸಮೀಪದ ಕೌಡೂರು ಎಂಬಲ್ಲಿ 1909 ಜೂನ್ 16ರಂದು ಸದಾನಂದ ಹೆಗ್ಡೆಯವರು ಕೌಡೂರು ನಾಯರ್‌ಬೆಟ್ಟು ಸುಬ್ಬಯ್ಯ ಹೆಗ್ಡೆ ಹಾಗೂ ಇರ್ಮಾಡಿ ಲಿಂಗಮ್ಮ ಶೆಡ್ತಿ ದಂಪತಿಯ ಏಳು ಜನ ಮಕ್ಕಳಲ್ಲಿ ಕಿರಿಯ ಮಗನಾಗಿ ಜನಿಸಿದರು.

ಇಡೀ ಊರಿಗೆ ಗೌರವದ ವ್ಯಕ್ತಿಯಾಗಿದ್ದ ಸುಬ್ಬಯ್ಯ ಹೆಗ್ಡೆಯವರು ತನ್ನ ಸುತ್ತಲಿನ ಸಮಾಜದ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಸ್ಪಂದಿಸಿ, ಜನರಿಗೆ ನ್ಯಾಯ ದೊರಕಿಸಿಕೊಡುತ್ತಿದ್ದರು. ಎಳವೆಯಲ್ಲಿಯೇ ತನ್ನ ತಂದೆಯವರ ನ್ಯಾಯ ತೀರ್ಮಾನದ ವೈಖರಿಯಿಂದ ಆಸಕ್ತರಾಗಿದ್ದ ಕೆ.ಎಸ್. ಹೆಗ್ಡೆಯವರು ಆ ದಿನಗಳಲ್ಲೇ ಮುಂದೆ ತಾನೊಬ್ಬ ನ್ಯಾಯಾಧೀಶನಾಗಿ ನ್ಯಾಯ ನೀಡಬೇಕು ಎಂದು ನಿರ್ಧರಿಸಿರಬೇಕು! 'ಇಡೀ ಊರಿನ ಜನರೆಲ್ಲರೂ ನಮ್ಮವರು' ಎಂದು ತಿಳಿದುಕೊಂಡು, ಅವರನ್ನು ತಮ್ಮ ಕುಟುಂಬದ ಸದಸ್ಯರಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ತನ್ನ ತಾಯ್ತಂದೆಯರ ಜೀವನಾದರ್ಶ ಮಗನ ಮೇಲೆ ಅದಾಗಲೇ ಪಡಿಯಚ್ಚು ಮೂಡಿಸಿತ್ತು. ಸಮಾಜದ ಋಣ ತೀರಿಸಲು 'ಸಮಾಜಸೇವೆ' ಉತ್ತಮ ಮಾರ್ಗ ಎಂದರಿತ ಕೆ.ಎಸ್. ಹೆಗ್ಡೆಯವರು ಚಿಕ್ಕ ಬಾಲಕನಾಗಿದ್ದಾಗಲೇ ಗ್ರಾಮ ಸ್ವರಾಜ್ಯದ ಕನಸನ್ನು ಕಂಡಿದ್ದರು.

ಕಾರ್ಕಳ ತಾಲೂಕಿನ ಬೈಲೂರು ಸಮೀಪದ ಕೌಡೂರು ಅಂದು ಯಾವುದೇ ಸೌಲಭ್ಯಗಳಿಲ್ಲದ ಕುಗ್ರಾಮವಾಗಿತ್ತು. ಹೀಗಾಗಿ, ಕೌಡೂರಿನಿಂದ ಸುಮಾರು 15 ಕಿ.ಮೀ. ದೂರದ ಕಾರ್ಕಳದಲ್ಲಿ ಶಿಕ್ಷಣ ಪಡೆಯುವುದು ಕೆ.ಎಸ್. ಹೆಗ್ಡೆಯವರಿಗೆ ಆಗ ಅನಿವಾರ್ಯವಾಗಿತ್ತು. ಕಾರ್ಕಳದ ಬೋರ್ಡ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಅವರು, ಮಂಗಳೂರಿನ ಕೆನರಾ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿವರೆಗೆ ಓದಿದರು. ಗುರುವಿನ ಉಪದೇಶದಿಂದಲ್ಲದೆ ವಿದ್ಯೆಯು ಪಕ್ವವಾಗದು, ಫಲಿಸಲಾರದು. "ಉತ್ತಮ ಗುರುವಿನ ಉಪದೇಶವಿಲ್ಲದ ಶಿಷ್ಯರು ಬಳ್ಳಿ ಕುರುಡರಂತೆ ಹಳ್ಳಕ್ಕೆ ಬೀಳುವರು" ಎಂದು ನಂಬಿದ್ದವರು ಬಾಲಕ ಕೆ.ಎಸ್. ಹೆಗ್ಡೆಯವರು.

**ವಿದ್ಯೆ ಕಲಿತರೆ ಇಲ್ಲ, ಬುದ್ಧಿ ಕಲಿತರೆ ಇಲ್ಲ**
**ಉದ್ಯೋಗ ಮಾಡಿದರೆ ಇಲ್ಲ, ಗುರುಮುಖ**
**ಇದ್ದಲ್ಲದಿಲ್ಲ – ಸರ್ವಜ್ಞ**

**ಗುರುರಾಯನುಪದೇಶ ದೊರೆಕೊಂಡಿತಾದೆಡೆ**
**ಹರಿಯುವುದು ಪಾಪವೆಂತೆನಲು ವಜ್ರದಿಂ**
**ಗಿರಿಯ ಹೊಯ್ದಂತೆ – ಸರ್ವಜ್ಞ**

ಎಂಬ ಸರ್ವಜ್ಞನ ವಚನಗಳನ್ನು ಅದಾಗಲೇ ಮೈಗೂಡಿಸಿಕೊಂಡಿದ್ದ ಬಾಲಕ ಸದಾನಂದ ಗುರುಗಳಿಗೆ ತಕ್ಕ (ಬೇಕಾದ) ಶಿಷ್ಯನಾಗಿದ್ದರು. ತನ್ನ ಶಾಲಾ ದಿನಗಳಲ್ಲಿಯೇ ಅಸಾಮಾನ್ಯವಾದ ನಾಯಕತ್ವದಿಂದಾಗಿ ಗುರುಗಳೆಲ್ಲರ ಗಮನ ಸೆಳೆದರು. ಪಾಠದ ಜೊತೆಯಲ್ಲಿ ಪಾಠೇತರ ಚಟುವಟಿಕೆಗಳಲ್ಲಿಯೂ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದ ಇವರೊಬ್ಬ ಉತ್ತಮ ಮಾತುಗಾರನಾಗಿ ಆಗಲೇ ಮಿಂಚಿದವರು. ಪ್ರೌಢಶಾಲಾ ವಿದ್ಯಾಭ್ಯಾಸದ ಬಳಿಕ ಕೆ.ಎಸ್. ಹೆಗ್ಡೆಯವರು ಮಂಗಳೂರಿನ ಸಂತ ಅಲಾಶಿಯಸ್ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ ಪಡೆದರು. ಶಿಕ್ಷಣದ ಬಗೆಗಿನ ವಿಶೇಷ ಒಲವು, ಶ್ರದ್ಧೆ - ಪ್ರಯತ್ನಗಳಿಂದಾಗಿ ಮುಂದೆ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಆನರ್ಸ್‌ಪದವಿ ಗಳಿಸಿದರು. ಓದಿನ ಹಸಿವು ಇನ್ನೂ ಹೆಚ್ಚಾಗಿದ್ದರಿಂದ ಕೆ.ಎಸ್. ಹೆಗ್ಡೆಯವರು ಉನ್ನತ ವ್ಯಾಸಂಗಕ್ಕಾಗಿ ಕಾನೂನು ರಂಗ ಆರಿಸಿಕೊಂಡರು. ಬಳಿಕ ಮದರಾಸಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು.

### ನ್ಯಾಯವಾದಿಯಾಗಿ

ಉತ್ತಮವಾದ ಒಂದು ಕೆಲಸವನ್ನು ಆರಂಬಿಸುವ ಮುನ್ನ ನಮ್ಮ ಮೇಲೆ ನಾವೇ ಹೊರಿಸಿಕೊಳ್ಳುವ ಹೊಣೆಗಾರಿಕೆಯೇ ಸಂಕಲ್ಪ. ಅದೊಂದು ಮಾನಸಿಕ ಪ್ರತಿಜ್ಞೆ. ಅದೊಂದು ಶಪಥ, ಅದೊಂದು ನಿರ್ಧಾರ. ಸಂಕಲ್ಪವೆನ್ನುವುದು ನಿಶ್ಚಿತ ಗುರಿಯ ಕಡೆಗೆ ಸಾಗುವ ಸನ್ನಾಹದ ಮೊದಲ ಹೆಜ್ಜೆ. ಸಂಕಲ್ಪದಿಂದ ಮನಸ್ಸು ದೃಢವಾಗುತ್ತದೆ. ಆತ್ಮವಿಶ್ವಾಸ ಬೆಳೆಯುತ್ತದೆ. ಧೈರ್ಯದಿಂದ ಮುನ್ನುಗ್ಗಲು ಪ್ರಚೋದನೆ ಸಿಗುತ್ತದೆ. ಹುಮ್ಮಸ್ಸು ಬರುತ್ತದೆ. ಸಂಕಲ್ಪ ನಮ್ಮ ಮಾನಸಿಕ ಸಿದ್ಧತೆ. ಹೀಗಾಗಿಯೇ ಜೀವನದಲ್ಲಿ ಏನನ್ನಾದರೂ

ಸಾಧಿಸಿಯೇ ತೀರುತ್ತೇನೆ ಎಂಬ ದೃಢ ಸಂಕಲ್ಪದಿಂದಲೇ ಕೆ.ಎಸ್. ಹೆಗ್ಡೆಯವರು ತಮ್ಮ ಸಾಧನೆಯ ಸಿದ್ಧಿಗಾಗಿ ಕಾನೂನು ರಂಗವನ್ನು ಆಯ್ದುಕೊಂಡರು.

ಪ್ರಾಥಮಿಕ ಶಿಕ್ಷಣ ಪಡೆದ ಕಾರ್ಕಳದಲ್ಲಿಯೇ 1933ರಲ್ಲಿ ಕೆ.ಎಸ್. ಹೆಗ್ಡೆಯವರು ತಮ್ಮ ವೃತ್ತಿಜೀವನ ಪ್ರಾರಂಭಿಸಿದರು. ಆ ಕಾಲಕ್ಕೆ ಬಹಳಷ್ಟು ಹೆಸರು ಮಾಡಿದ್ದ ಖ್ಯಾತ ನ್ಯಾಯವಾದಿ ಶಿವ ಭಟ್ ಇವರ ಮಾರ್ಗದರ್ಶನದಲ್ಲಿ ಏಳು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. 'ವಾಣಿಜ್ಯ ನಗರಿ' ಎಂದು ಕರೆಸಿಕೊಂಡಿದ್ದ ಮಂಗಳೂರು ಅಂದು ನಾಡಿನ ಬೇರೆ ಬೇರೆ ಸ್ಥಳಗಳ ನ್ಯಾಯವಾದಿಗಳನ್ನು ತನ್ನತ್ತ ಸೆಳೆದಿತ್ತು. ಸದಾನಂದ ಹೆಗ್ಡೆಯವರೂ ಸಹಜವಾಗಿಯೇ ಮಂಗಳೂರಿನತ್ತ ಗಮನ ಹರಿಸಿದರು. 1940ರಲ್ಲಿ ತಮ್ಮ ವೃತ್ತಿಯನ್ನು ಮಂಗಳೂರಿನ ಜಿಲ್ಲಾ ಮುಖ್ಯ ಕಛೇರಿಗೆ ಸ್ಥಳಾಂತರಿಸಿದರು. ತನ್ನ ಅನುಭವದಿಂದಾಗಿ ಮಂಗಳೂರಿನಲ್ಲಿ ಕೆ.ಎಸ್. ಹೆಗ್ಡೆಯವರು ಸ್ವತಂತ್ರ ನ್ಯಾಯವಾದಿಯಾಗಿ ಕಾರ್ಯನಿರ್ವಹಿಸತೊಡಗಿದರು. ಕೃಷಿಕ ಕುಟುಂಬದಿಂದ ಬಂದಿದ್ದ ಹೆಗ್ಡೆಯವರು ಕೃಷಿಕ ಸಮುದಾಯದ ಬಗೆಗೆ ವಿಶೇಷ ಕಾಳಜಿ ಹೊಂದಿದ್ದರು. ತಮ್ಮ ಕೈಲಾದ ಮಟ್ಟಿಗೆ ರೈತರಿಗೆ ನ್ಯಾಯ ದೊರಕಿಸಿಕೊಡುವ ಪ್ರಯತ್ನ ನಡೆಸಿದ್ದರು. ಕನ್ನಡದ ಹಿರಿಯ ಸಾಹಿತಿ, ಕವಿ ಕಯ್ಯರ ಕಿಂಞಣ್ಣ ರೈಯವರು ತಮ್ಮ ಹೆಂಡತಿಯ ಹೆಸರಿನಲ್ಲಿದ್ದ ಜಾಗದ ವ್ಯಾಜ್ಯವನ್ನು ಪರಿಹರಿಸಿ ನ್ಯಾಯ ತಂದುಕೊಟ್ಟ ಕೆ.ಎಸ್. ಹೆಗ್ಡೆಯವರನ್ನು ಈಗಲೂ ನೆನೆಸಿಕೊಳ್ಳುತ್ತಿರುವುದು ಹೆಗ್ಡೆಯವರು ರೈತರ ಬಗೆಗೆ ಹೊಂದಿದ್ದ ಕಳಕಳಿಗೆ ಸ್ಪಷ್ಟ ನಿದರ್ಶನವಾಗಿದೆ.

'ಸತ್ಯಕ್ಕೆ ಸಾವಿಲ್ಲ' ಎನ್ನುವಂತೆ, ನ್ಯಾಯವಾದಿ ಕೆ. ಸದಾನಂದ ಹೆಗ್ಡೆಯವರ ಕಾರ್ಯವೈಖರಿ ಬಹುಬೇಗನೆ ಜನಮಾನ್ಯತೆ ಪಡೆಯಿತು. ಹೀಗಾಗಿಯೇ ಅವರು 1946ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ಪಿರ್ಯಾದಿದಾರ (ಪಬ್ಲಿಕ್ ಪ್ರಾಸಿಕ್ಯೂಟರ್) ಹಾಗೂ ಸರಕಾರಿ ನ್ಯಾಯವಾದಿಯಾಗಿ ನೇಮಕಗೊಂಡರು. ಈ ಹಿಂದೆ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ಎಂ.ಕೆ. ನಂಬಿಯಾರ್ ಅವರ ಸ್ಥಾನವನ್ನು ತುಂಬಿದ್ದ ಕೆ.ಎಸ್. ಹೆಗ್ಡೆಯವರು ರಾಜ್ಯಸಭೆಯ ಸದಸ್ಯರಾಗುವವರೆಗೂ (1952ರ ವರೆಗೂ) ತಮ್ಮ ಹುದ್ದೆಯಲ್ಲಿ ಮುಂದುವರಿದರು.

**ರಾಜಕೀಯ ಆಸಕ್ತಿ**

ಕಾನೂನು ರಂಗದಲ್ಲಿ ಅಸಾಮಾನ್ಯ ದೂರದೃಷ್ಟಿ ಹೊಂದಿದ್ದ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರಿಗೆ ರಾಜಕೀಯ ಕ್ಷೇತ್ರದಲ್ಲೂ ವಿಶೇಷ ಆಸಕ್ತಿಯಿತ್ತು. ಪ್ರಪ್ರಥಮ ರಾಜ್ಯಸಭೆಯ ಸದಸ್ಯರಾಗಿ ಚುನಾಯಿತರಾದ ಇವರು 1954ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಮಹಾದಿವೇಶನದಲ್ಲಿ ಭಾರತದ ಪ್ರತಿನಿದಿಯಾಗಿ ಪಾಲ್ಗೊಳ್ಳುವ ಅವಕಾಶವೂ ದೊರಕಿತ್ತು. ಕಾರ್ಕಳದ ಹಳ್ಳಿಯೊಂದರಲ್ಲಿ ಹುಟ್ಟಿದ ಹುಡುಗನೋರ್ವ ವಿದೇಶಕ್ಕೆ ಪ್ರಯಾಣ ಬೆಳೆಸಿದ್ದು, ಅದೂ ಕೂಡ ತನ್ನ ರಾಷ್ಟ್ರದ ಪ್ರತಿನಿದಿಯಾಗಿ! ಕಾರ್ಕಳದ ಜನತೆಯಷ್ಟೇ ಅಲ್ಲ; ಭಾರತೀಯರೆಲ್ಲರೂ ಈ ಹೆಮ್ಮೆಯ ಪುತ್ರನ ಬಗೆಗೆ ಅಭಿಮಾನದಿಂದ ಬೀಗಿದ್ದರು.

ರಾಜ್ಯಸಭೆಯ ಸದಸ್ಯರಾಗಿದ್ದ ಕೆ.ಎಸ್. ಹೆಗ್ಡೆಯವರು ಆಗಿನ ಮದರಾಸು ಸರಕಾರದ ಸಚಿವರಾಗಿದ್ದ ಎ.ಬಿ. ಶೆಟ್ಟಿ ಹಾಗೂ ವಿಧಾನಸಭೆಯ ಸದಸ್ಯರಾಗಿದ್ದ ಉಳ್ಳಾಲ ಶ್ರೀನಿವಾಸ ಮಲ್ಯರ ನಿಕಟವರ್ತಿಗಳಾಗಿ ಕೆಲಸ ಮಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಹೆಗ್ಡೆಯವರು ರಾಜಕೀಯ ರಂಗದಲ್ಲಿ ಪರಿಣತಿ ಹೊಂದಿದ್ದರು. ಹೀಗಾಗಿಯೇ ಇವರು ನ್ಯಾಯಾಂಗ ಪಕ್ಷದ ದಿವಾನ್ ಮಹಾಬಲ ಹೆಗ್ಡೆಯವರ ಪ್ರತಿಸ್ಪರ್ದಿಯಾಗಿ ಜಿಲ್ಲಾ ಮಂಡಳಿಯ ಚುನಾವಣಾ ಕಣಕ್ಕಿಳಿದಿದ್ದ ಎ.ಬಿ. ಶೆಟ್ಟಿಯವರ ಪರವಾಗಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಹೆಗ್ಡೆಯವರ ವಾಕ್ಚಾತುರ್ಯ ಎಂಥವರನ್ನೂ ಸೆಳೆಯುವಂಥದು! ರಾಜಕೀಯ ಪಕ್ಷಗಳಲ್ಲಿ ಸಕ್ರಿಯವಾಗಿ ದುಡಿದ ಹೆಗ್ಡೆಯವರು ಭಾರತೀಯ ರಾಷ್ಟ್ರೀಯ ಪಕ್ಷದ ನಾಯಕರಾಗಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬಹುದು.

2008ರ ಜೂನ್ 16ರಂದು ಮಂಗಳೂರಿನಲ್ಲಿ ನಡೆದ 'ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರ ಜನ್ಮಶತಾಬ್ದ ವರ್ಷಾಚರಣೆ'ಯ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಪ್ರಧಾನಿ ಎಲ್.ಕೆ. ಅಡ್ವಾಣಿಯವರು ಮಾತನಾಡುತ್ತ, "1977ರಲ್ಲಿಯೇ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರು ಭಾರತದ ಪ್ರಧಾನಿಯಾಗಬೇಕಿತ್ತು" ಎಂದು ಹೇಳಿದ್ದರು. ನುಡಿದಂತೆ ನಡೆವ - ನಡೆದಂತೆ ನುಡಿವ ಕೆ.ಎಸ್. ಹೆಗ್ಡೆಯವರ ರಾಜಕೀಯ ಒಲವು - ಪರಿಣತಿ ಹಾಗೂ ಸಮರ್ಥ ನಾಯಕತ್ವಕ್ಕೆ ಅಡ್ವಾಣಿಯವರೆಂದ ಮಾತು ಕನ್ನಡಿ ಹಿಡಿದಂತಿದೆ.

ರಾಜ್ಯಸಭಾ ಸದಸ್ಯರಾಗಿದ್ದ ಕೆ.ಎಸ್. ಹೆಗ್ಡೆಯವರು ಶ್ರೀನಿವಾಸ ಮಲ್ಯರ ಜೊತೆ ಸೇರಿಕೊಂಡು ಸರಕಾರದ ಸಹಾಯಧನದೊಂದಿಗೆ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಇದರ ಫಲವಾಗಿಯೇ ಜಿಲ್ಲೆಯಾದ್ಯಂತ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳು ನಿರ್ಮಾಣಗೊಂಡವು. ಈ ಕಾಲದಲ್ಲಿಯೇ ದಕ್ಷಿಣ ಕನ್ನಡದ ಆರ್ಥಿಕ ಪ್ರಗತಿಯ ಹೊಸ ಅಧ್ಯಾಯ ಆರಂಭಗೊಂಡಿತು.

**ಸಚಿವ ಸ್ಥಾನಕ್ಕೆ ಆಹ್ವಾನ**

1954ರಲ್ಲಿ ನ್ಯೂಯಾರ್ಕ್‌ನಿಂದ ಮರಳಿ ತಾಯ್ನಾಡಿಗೆ ಬಂದಿದ್ದ ಸದಾನಂದ ಹೆಗ್ಡೆಯವರಿಗೆ ಒಂದು ಅಚ್ಚರಿ ಕಾದಿತ್ತು. ಸಂಪುಟ ದರ್ಜೆಯ ರಾಜ್ಯ ಸಚಿವರಾಗುವುದಕ್ಕೆ ಅವರಿಗೆ ಆಹ್ವಾನವಿತ್ತು. ಯಾವತ್ತೂ ಅಧಿಕಾರಕ್ಕಾಗಿ ಹಾತೊರೆಯದೆ 'ಜನರ ಸೇವೆ ಮಾಡಲು ಅಧಿಕಾರಿಯೇ ಆಗಬೇಕೆಂದೇನೂ ಇಲ್ಲ' ಎಂಬುದನ್ನು ಬಲವಾಗಿ ನಂಬಿದ್ದ ಕೆ.ಎಸ್. ಹೆಗ್ಡೆಯವರು ನಯವಾಗಿಯೇ ಸಚಿವ ಸ್ಥಾನವನ್ನು ಒಲ್ಲೆನೆಂದಿದ್ದರು. ಮಂಗಳೂರು ಹಾಗೂ ಮದರಾಸಿನಲ್ಲಿದ್ದ ಎರಡು ಮನೆಗಳ ಜವಾಬ್ದಾರಿ ನಿರ್ವಹಣೆಯ ಜೊತೆಯಲ್ಲಿ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ವ್ಯಯಿಸಬೇಕು. ಆದ್ದರಿಂದ ಮಂತ್ರಿಯಾಗಿ ಹಣ ಖರ್ಚು ಮಾಡಲು ತನ್ನಿಂದ ಸಾಧ್ಯವಿಲ್ಲ ಎಂಬುದು ಹೆಗ್ಡೆಯವರಿಗೆ ಮನದಟ್ಟಾಗಿತ್ತು. 'ಮಂತ್ರಿಯಾಗುವುದೇ ದುಡ್ಡು ಮಾಡುವುದಕ್ಕೆ' ಎಂದು ತಿಳಿದಿರುವ ಇಂದಿನ ಮಂತ್ರಿಗಳ ಬದಲಾಗಿ, ಕೆ.ಎಸ್. ಹೆಗ್ಡೆಯವರಂತಹ ನಿಸ್ವಾರ್ಥ ಮನೋಭಾವದ ನಾಯಕರು ನಮಗಿಂದು ಬೇಕಾಗಿದ್ದಾರೆ ಎಂದು ನನಗನ್ನಿಸುತ್ತದೆ.

ರಾಜಕೀಯವಾಗಿ ಬಹಳಷ್ಟು ಆಸಕ್ತರಾಗಿದ್ದರೂ ಕೆಲಕಾಲದ ಬಳಿಕ ಕೆ.ಎಸ್. ಹೆಗ್ಡೆಯವರು ಮತ್ತೆ ಕಾನೂನು ರಂಗದಲ್ಲಿಯೇ ತಮ್ಮ ವೃತ್ತಿಯನ್ನು ಮುಂದುವರಿಸಲು ಬಯಸಿದರು. ಅವರ ಈ ನಿರ್ಧಾರ ಅವರ ನಿಕಟವರ್ತಿಯಾಗಿದ್ದ ಉಳ್ಳಾಲ ಶ್ರೀನಿವಾಸ ಮಲ್ಯರಿಗೆ ಸಮಾಧಾನವಾಗಲಿಲ್ಲ. ಆದರೂ ಕೆ.ಎಸ್. ಹೆಗ್ಡೆಯವರು 1957ರಲ್ಲಿ ಮೈಸೂರು ಹೈಕೋರ್ಟ್‌ನ (ಈಗಿನ ಕರ್ನಾಟಕ ಸರಕಾರ) ನ್ಯಾಯವಾದಿಯಾಗಿ ನೇಮಕಗೊಂಡಾಗ ರಾಜ್ಯಸಭಾ ಸದಸ್ಯನ ಸ್ಥಾನಕ್ಕೆ ರಾಜೀನಾಮೆಯಿತ್ತರು.

1977ರಲ್ಲಿ ಲೋಕಸಭೆಯ ಸ್ಪೀಕರ್ ಆಗಿ ಚುನಾಯಿತರಾಗಿ 1980ರ ವರೆಗೆ ರಾಜಕೀಯ ರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು. ಲೋಕನಾಯಕ ಜಯಪ್ರಕಾಶ ನಾರಾಯಣ್‌ರ ನೇತೃತ್ವದ ಲೋಕಸಂಘರ್ಷ ಸಮಿತಿಯಲ್ಲಿದ್ದುಕೊಂಡು ತುರ್ತು ಪರಿಸ್ಥಿತಿಯ ವಿರುದ್ಧ ಸಕ್ರಿಯ ಹೋರಾಟ ನಡೆಸಿದ್ದರು.

**ಕಾಸರಗೋಡು – ಕರ್ನಾಟಕಕ್ಕೆ ಹೋರಾಟ**

ನವೆಂಬರ್ 1, 1956ರಿಂದ ಅನ್ವಯವಾಗುವಂತೆ ಕಾಸರಗೋಡನ್ನು ಕರ್ನಾಟಕದ ಒಂದು ಜಿಲ್ಲೆಯಾಗಿ ಉಳಿಸಿಕೊಳ್ಳಬೇಕೆಂದು ಹೋರಾಟ ಮಾಡಿದ ಪ್ರಮುಖ ಕನ್ನಡಿಗರಲ್ಲಿ ಕೆ.ಎಸ್. ಹೆಗ್ಡೆಯವರೂ ಒಬ್ಬರು ಎಂಬುದು ಕನ್ನಡಿಗರಾದ ನಮಗೆಲ್ಲ ಹೆಮ್ಮೆಯ ಸಂಗತಿ. ಕೆ.ಆರ್. ಕಾರಂತ, ಕಳ್ಳಿಗೆ ಮಹಾಬಲ ಭಂಡಾರಿ, ಯು.ಪಿ. ಕುಣಿಕುಳ್ಳಾಯ, ಎಂ. ಉಮೇಶ ರಾವ್, ಬಿ.ಎಸ್. ಕಕ್ಕಿಲ್ಲಾಯ, ಕಯ್ಯರ ಕಿಂಞಣ್ಣ ರೈ ಮೊದಲಾದವರ ಹೋರಾಟವನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಲೇಬೇಕು. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂಬ ಕುರಿತಾಗಿ ಕಾಸರಗೋಡು ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ನಡೆದ ಅನೇಕ ಪ್ರತಿಭಟನಾ ಮೇಳಗಳಲ್ಲಿ, ಸಭೆಗಳಲ್ಲಿ ಕೆ.ಎಸ್. ಹೆಗ್ಡೆಯವರು ಸಕ್ರಿಯವಾಗಿ ಭಾಗವಹಿಸಿದ್ದರು. ಅಪ್ಪಟ ದೇಶಪ್ರೇಮಿಯಾಗಿದ್ದ ಈ ಕನ್ನಡಿಗನ ಕನ್ನಡ ಭಾಷಾಬಿಮಾನ ಆಗಲೇ ತಲೆಯೆತ್ತಿ ನಿಂತಿತ್ತು.

ಹೊಸತಾಗಿ ರಚಿಸಲ್ಪಟ್ಟ ರಾಜ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಾರ್ವಜನಿಕವಾಗಿ ಗುರುತಿಸಲ್ಪಟ್ಟಿದ್ದ ವ್ಯಕ್ತಿಯೋರ್ವರನ್ನು ನಿಯೋಜಿಸಬೇಕಾಗಿತ್ತು. ಕರ್ನಾಟಕದ ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು, ಸ್ವಾತಂತ್ರ್ಯ ಹೋರಾಟಗಾರರಾದ ನಾರಾಯಣ ಎಸ್. ಕಿಲ್ಲೆಯವರ ಹೆಸರನ್ನು ನಿಯೋಜಿಸಿದರು. ಆಗ ಸ್ವತಃ ಕಿಲ್ಲೆಯವರೇ ಮುಖ್ಯಮಂತ್ರಿಯವರೊಂದಿಗೆ, ಸದಾನಂದ ಹೆಗ್ಡೆಯವರ ಹೆಸರನ್ನು ನಿಯೋಜಿಸುವಂತೆ ಸಾಕಷ್ಟು ಒತ್ತಾಯಿಸಿದ್ದರು. ಏಕೆಂದರೆ, ಕಾನೂನು ಹಾಗೂ ಸಂವಿಧಾನಿಕ ವಿಚಾರವಾಗಿ

ಕೆ.ಎಸ್. ಹೆಗ್ಡೆಯವರು ತನಗಿಂತ ಸಮರ್ಥರಾಗಿದ್ದರು ಎಂಬುದಾಗಿ ಕಿಲ್ಲೆಯವರು ಪ್ರತಿಪಾದಿಸಿದರು. ಕಿಲ್ಲೆಯವರಂದಂತೆಯೇ ರಾಜ್ಯಸಭಾ ಸದಸ್ಯರಾಗಿದ್ದ ಕೆ.ಎಸ್. ಹೆಗ್ಡೆಯವರು ರಾಷ್ಟ್ರ ರಾಜಕಾರಣದಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ವೈಯಕ್ತಿಕವಾಗಿ ಅವರು ಬಹು ಎತ್ತರದ ಮಟ್ಟವನ್ನೇರಿದರು. ನಿಸ್ವಾರ್ಥಿ ಕಿಲ್ಲೆಯವರ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಕವಿ ಕಯ್ಯರರು "ಕಿಲ್ಲೆಯವರ ನಿಸ್ವಾರ್ಥ ಮನೋಭಾವದಿಂದಾಗಿ ಈ ದೇಶ ಓರ್ವ ಪ್ರತಿಭಾವಂತ, ಸಮರ್ಥ ರಾಜಕೀಯ ಮುತ್ಸದ್ಧಿಯನ್ನು ಪಡೆಯುವಂತಾಯಿತು. ಇದಕ್ಕಾಗಿ ಕಿಲ್ಲೆಯವರಿಗೆ ತುಂಬು ಹೃದಯದ ಕೃತಜ್ಞತೆಗಳು" ಎಂಬುದಾಗಿ ಹೇಳಿದ್ದಾರೆ.

ಕೆ.ಎಸ್. ಹೆಗ್ಡೆಯವರು ತಮ್ಮ ಅಸಾಧಾರಣವಾದ ಬುದ್ಧಿಮತ್ತೆ ಹಾಗೂ ಯೋಗ್ಯತೆಯಿಂದಾಗಿ 1957ರವರೆಗೂ ಲೋಕಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಲೋಕಸಭೆಯ ಅಧ್ಯಕ್ಷೀಯ ಮಂಡಳಿಯ ಸದಸ್ಯರಾಗಿದ್ದುಕೊಂಡು, ಅನಂತರ ಸಾರ್ವಜನಿಕ ಲೆಕ್ಕಶಾಸ್ತ್ರ ಸಮಿತಿ ಹಾಗೂ ನಿಯಮ ಸಮಿತಿಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಈ ಅವದಿಯಲ್ಲಿ ಕೆ.ಎಸ್. ಹೆಗ್ಡೆಯವರು ಸಂಯುಕ್ತ ರಾಷ್ಟ್ರಗಳ 9ನೇ ಜಂಟಿ ಅಧಿವೇಶನದಲ್ಲಿ ಭಾಗವಹಿಸಿದ್ದರು. ರೈಲ್ವೆ ಮಂಡಳಿಯಲ್ಲಿನ ಭ್ರಷ್ಟಾಚಾರ ವಿಚಾರಣಾ ಸಮಿತಿಯ ಸದಸ್ಯರೂ ಆಗಿದ್ದ ಅವರು ಆ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಬೆಳಕಿಗೆ ತಂದರು. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಆಡಳಿತ ವಿಭಾಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

**ನ್ಯಾಯಾಧೀಶರಾಗಿ**

ರಾಜ್ಯಸಭಾ ಸದಸ್ಯತ್ವವನ್ನು ತೊರೆದ ಬಳಿಕ 1957ರಲ್ಲಿ ಕೆ.ಎಸ್. ಹೆಗ್ಡೆಯವರು ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿ ನೇಮಕಗೊಂಡರು. ತಮ್ಮ ಅಸಾಧಾರಣವಾದ ಮತ್ತು ನಿಷ್ಪಕ್ಷಪಾತವಾದ ನ್ಯಾಯತೀರ್ಮಾನ ವೈಖರಿಯಿಂದಾಗಿ ಹೆಗ್ಡೆಯವರು ಬಹು ಅಲ್ಪಕಾಲದಲ್ಲಿಯೇ ಜನಮನ್ನಣೆ ಪಡೆದರು.

1966ರವರೆಗೆ ಮೈಸೂರು ಹೈಕೋರ್ಟ್‌ನ ನ್ಯಾಯಾಧೀಶರಾಗಿ ದುಡಿದ ಹೆಗ್ಡೆಯವರು ಹೊಸದಿಲ್ಲಿ ಹಾಗೂ ಹಿಮಾಚಲ ಪ್ರದೇಶಗಳ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡರು. ನ್ಯಾಯಸಮ್ಮತವಾದ ತೀರ್ಮಾನ ನೀಡುವ ಮೂಲಕ ಕೆ.ಎಸ್. ಹೆಗ್ಡೆಯವರು ಎಲ್ಲರ ಮನೆಮಾತಾಗಿದ್ದರು. ಸದಾ ನ್ಯಾಯಕ್ಕಾಗಿಯೇ ಹೋರಾಟ ನಡೆಸಿ, ಅದರಲ್ಲಿಯೇ ಆನಂದವನ್ನು ಕಾಣುತ್ತಿದ್ದ ಸದಾನಂದ ಹೆಗ್ಡೆಯವರು ತಮ್ಮ ಪ್ರಾಮಾಣಿಕತೆಯನ್ನು ಹಾಗೂ ವೃತ್ತಿಘನತೆಯನ್ನು ಎತ್ತಿಹಿಡಿದಿದ್ದರು. ಯಾವತ್ತೂ ಜನರಿಗಾದ ಅನ್ಯಾಯವನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದರು. ನ್ಯಾಯಾಂಗದ ದೃಷ್ಟಿಯಲ್ಲಿ ಸತ್ಯಸಂಧತೆ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದ್ದ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರಿಗೆ ಸರಿಸಾಟಿಯಾದ ನ್ಯಾಯಾಧೀಶರು ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ಈ ಕಾರಣದಿಂದಲೇ 'ಒಂದು ಭ್ರಷ್ಟ ಸಮಾಜವು ಯಾವತ್ತೂ ಒಂದು ಸಾಮಾಜಿಕ ಬದ್ಧತೆಯನ್ನು ಬೆಳೆಸಲಾರದು' ಎಂಬುದಾಗಿ ಹೆಗ್ಡೆಯವರು ಅಭಿಪ್ರಾಯಪಟ್ಟಿದ್ದರು.

1967ರಲ್ಲಿ ಹೆಗ್ಡೆಯವರು ನ್ಯಾಯಾಂಗದ ಉನ್ನತ ಹುದ್ದೆಯನ್ನು ಅಲಂಕರಿಸಿದರು. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳುವ ಮೂಲಕ ಸುಪ್ರೀಂಕೋರ್ಟಿನ ನ್ಯಾಯಾಧೀಶರಾದ ಮೊದಲ ಕನ್ನಡಿಗನೆಂಬ ಹೆಗ್ಗಳಿಕೆಗೆ ಭಾಜನರಾದರು. ತಮ್ಮ ವೃತ್ತಿಯ ಕ್ಷೇತ್ರದಲ್ಲೇ ಸತತ ಪರಿಶ್ರಮ ಮತ್ತು ಸಾಧನೆಗಳಿಂದ ಎತ್ತರದ ಪೀಠಗಳನ್ನು ಅಲಂಕರಿಸಿದ ನ್ಯಾಯಮೂರ್ತಿ ಕೌಡೂರು ಸದಾನಂದ ಹೆಗ್ಡೆಯವರು ದೇಶದ ಹಿತ ಹಾಗೂ ಜನಹಿತವನ್ನು ತಮ್ಮ ಸಾಮಾಜಿಕ ಬದುಕಿನ ಕೇಂದ್ರಬಿಂದುವಾಗಿಸಿಕೊಂಡರು.

'ಅಭಿಪ್ರಾಯ ವ್ಯತ್ಯಾಸ'ವೆನ್ನುವುದು ಪ್ರತಿಯೊಬ್ಬರಲ್ಲೂ, ಪ್ರತಿಯೊಂದು ವಿಷಯಕ್ಕೂ ಇದ್ದೇ ಇರುತ್ತದೆ. ಆದರೆ ಇದು ವ್ಯಕ್ತಿಯ ಘನತೆ, ಗೌರವಗಳನ್ನು ಕಡೆಗಣಿಸುವ ಮಟ್ಟಕ್ಕೆ ಹೋಗಬಾರದು. ಹಾಗೊಮ್ಮೆ ಆದಲ್ಲಿ ದಕ್ಷರಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವುದು ಅಸಾಧ್ಯವಾಗುತ್ತದೆ. ಪ್ರಾಯಃ ಕೆ.ಎಸ್. ಹೆಗ್ಡೆಯವರಿಗೂ ಇದೇ ಅನುಭವವಾಗಿರಬೇಕು.

ಸ್ಪಷ್ಟವಾದಿ - ಲೋಕವಿರೋದಿ ಎಂಬ ಮಾತೊಂದಿದೆ. ಆದರೆ ಹೆಗ್ಡೆಯವರು ತನ್ನ ಸ್ಪಷ್ಟವಾದ ನಿಲುವಿನಿಂದ ಲೋಕ ವಿರೋದಿಗಳಾಗಲಿಲ್ಲ; ಲೋಕ ಪ್ರಿಯರಾದರು. ಸರಕಾರವೂ ಇದರಿಂದ ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಸರಕಾರಕ್ಕೆ ಬೇಕಾದುದು ತನ್ನ ತಾಳಕ್ಕೆ ತಕ್ಕಂತೆ ಕುಣಿಯುವ ಜನ ಮಾತ್ರ. 1973ರಲ್ಲಿ ಕೆ.ಎಸ್. ಹೆಗ್ಡೆಯವರು ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ತಮ್ಮ ಸೇವಾ ಹಿರಿತನವನ್ನು ಕಡೆಗಣಿಸಿದ, ಅಂದಿನ ಸರಕಾರದ ಅಸಮರ್ಪಕ ನಿರ್ಧಾರವನ್ನು ಪ್ರತಿಭಟಿಸಿ, 1973 ಎಪ್ರಿಲ್ 25ರಂದು ತಮ್ಮ ನ್ಯಾಯಾಧೀಶ ಹುದ್ದೆಗೆ ರಾಜಿನಾಮೆಯಿತ್ತರು.

*ಸಂಯತಂ ಕೋಮಲಂ ಚಿತ್ತಂ*
*ಸಾಧೋರಾಪದಿ ಕರ್ಕಶಮ್*
*ಸುಕುಮಾರಂ ಮಧೌಪತ್ರಂ ತರೋಃ ಸ್ಯಾತ್*
*ಕಠಿನಂ ಶುಚೌ*

ಸತ್ಪುರುಷರ ಮನಸ್ಸು ಸಹಜ ಕೋಮಲವಾಗಿರುತ್ತದೆ. ಆದರೆ, ಆಪತ್ಕಾಲದಲ್ಲಿ ಕಠಿಣವಾಗುತ್ತದೆ. ವಸಂತ ಕಾಲದಲ್ಲಿ ಸುಂದರವಾದ ಮರದ ಚಿಗುರೆಲೆಗಳು ಬೇಸಗೆಯಲ್ಲಿ ಒರಟಾಗುವಂತೆ ಸರಕಾರದ ನಿಲುವು ಕೆ.ಎಸ್. ಹೆಗ್ಡೆಯವರನ್ನು ಕಠೋರವಾಗುವಂತೆ ಮಾಡಿತು ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳೆಂಬ ಮೂರು ಅಂಗಗಳಿವೆ. ಶಾಸಕಾಂಗ ಮತ್ತು ಕಾರ್ಯಾಂಗಗಳು ದಾರಿ ತಪ್ಪಿದಾಗ (ಮಾಡಬಾರದ್ದನ್ನು ಮಾಡಿದಾಗ) ಮಾರ್ಗದರ್ಶನ ನೀಡಿ ಸರಿಪಡಿಸಬೇಕಾದುದು ನ್ಯಾಯಾಂಗದ ಹೊಣೆಗಾರಿಕೆ. ನ್ಯಾಯಾಂಗ ಸಶಕ್ತವಾಗಿರದ ರಾಷ್ಟ್ರದಲ್ಲಿನ ಆಡಳಿತ ವ್ಯವಸ್ಥೆ ಕುಸಿಯುತ್ತದೆ; ಅಸ್ತವ್ಯಸ್ತವಾಗುತ್ತದೆ. ಹೆಗ್ಡೆಯವರಿಗೆ ಈ ಎಚ್ಚರದ ಅರಿವು ಇತ್ತು. ಹೀಗಾಗಿಯೇ ಸರಕಾರದ ಧೋರಣೆಯನ್ನವರು ಪ್ರತಿಭಟಿಸಿದರು. ಮಾತ್ರವಲ್ಲ ಈ ದೇಶದ ಧರ್ಮಶಾಸ್ತ್ರದಲ್ಲೂ ಒಂದು ಮಾತಿದೆ. ಎಲ್ಲೇ ಅನ್ಯಾಯ ನಡೆಯಲಿ, ಆ ಸಭೆಯಲ್ಲಿ ತಿಳಿದವರಿದ್ದರೆ ಸುಮ್ಮನೆ ಕುಳಿತುಕೊಳ್ಳಬಾರದು, ತಿಳಿಯ ಹೇಳಬೇಕು. ಹೀಗೆ ಹೇಳಿಯೂ ಸಫಲರಾಗದಿದ್ದರೆ ಪ್ರತಿಭಟಿಸಬೇಕು. ಪ್ರತಿಭಟನೆಯೂ ವಿಫಲವಾದಾಗ ಆ ಜಾಗವನ್ನು ಬಿಟ್ಟು ದೂರ ಸರಿಯಬೇಕು. ನ್ಯಾಯಮೂರ್ತಿ ಹೆಗ್ಡೆಯವರು ಮಾಡಿದ್ದೂ ಇದನ್ನೇ. ಅನ್ಯಾಯದ ಕುರಿತು ಹೇಳಿ ನೋಡಿದರು. ಪ್ರತಿಭಟಿಸಿದರು. ಅನಂತರ ರಾಜೀನಾಮೆ ಕೊಟ್ಟು ಹೊರಟುಹೋದರು. ಇಡೀ ದೇಶದ ಬುದ್ಧಿಜೀವಿಗಳು ಹೆಗ್ಡೆಯವರ ಈ ವರ್ತನೆಯನ್ನು ಮೆಚ್ಚಿ ಕೊಂಡಾಡಿದರು. ಭಾರತವೇ ಏಕೆ? ವಿದೇಶಗಳಲ್ಲಿಯೂ ಹೆಗ್ಡೆಯವರ ದಿಟ್ಟ ನಿಲುವನ್ನು ಜನ ಮೆಚ್ಚಿ ನುಡಿದರು.

ನ್ಯಾಯಮೂರ್ತಿ ಸದಾನಂದ ಹೆಗ್ಡೆಯವರ ಜೊತೆಯಲ್ಲೇ ನ್ಯಾಯಮೂರ್ತಿ ಜೆ.ಎಂ. ಶೇಲಟ್ ಹಾಗೂ ಎ.ಎನ್. ಗ್ರೋವರ್ ಕೂಡ ರಾಜೀನಾಮೆ ನೀಡಿ ತಮ್ಮ ವೃತ್ತಿ ಘನತೆ ಹಾಗೂ ಸ್ವಾಭಿಮಾನವನ್ನು ಎತ್ತಿ ತೋರಿದರು; ಕಾನೂನು ರಂಗದಲ್ಲಿಯೇ ಹೊಸ ಇತಿಹಾಸ ಸೃಷ್ಟಿಸಿದರು. ಏಕಕಾಲಕ್ಕೆ ಮೂವರು ಹಿರಿಯ ನ್ಯಾಯಮೂರ್ತಿಗಳ ರಾಜಿನಾಮೆಯು ಸಾಂವಿಧಾನಿಕ ಚರಿತ್ರೆಯಲ್ಲಿಯೇ ಒಂದು ಮಹತ್ತರವಾದ ಬದಲಾವಣೆಯ ಕೇಂದ್ರ ವಾಯಿತು. ನ್ಯಾಯಾಂಗದ ದೃಷ್ಟಿಯಲ್ಲಿ ಸಂವಿಧಾನದ ಬಗೆಗಿನ ಸಾಮಾನ್ಯ ವ್ಯಕ್ತಿಯೊಬ್ಬನ ನಂಬಿಕೆ ಭದ್ರವಾಯಿತು. ಹೀಗಾಗಿಯೇ ಆರೋಗ್ಯವಂತ ಪ್ರಜಾಪ್ರಭುತ್ವದ ಹಾಗೂ ಆರೋಗ್ಯದಾಯಕ ನ್ಯಾಯಾಂಗದ ಬಗೆಗೆ ಕಾಳಜಿಯಿರುವ ದೇಶದ ಎಲ್ಲ ರಾಜಕೀಯ ಪಕ್ಷಗಳೂ, ಎಲ್ಲ ರಾಜಕಾರಣಿಗಳೂ ಈ ಐತಿಹಾಸಿಕ ಘಟನೆಯನ್ನು ನೆನಪಿನಲ್ಲಿಟ್ಟು ಕೊಳ್ಳುವಂತಾಯಿತು.

ಮನುಷ್ಯನಾದವನು ಕೇವಲ ಉಂಡುಟ್ಟು ಬೆಳೆದರೆ ಸಾಲದು. ಉಚ್ಚ ಆದರ್ಶ, ಉನ್ನತ ದೃಷ್ಟಿ ಹಾಗೂ ಉಜ್ವಲ ಆಚರಣೆಗಳನ್ನಿರಿಸಿಕೊಂಡು ಬದುಕಿದರೆ ಮಾತ್ರ ಆತನ ಬದುಕು ಚೈತನ್ಯದಿಂದ ಕೂಡಿರುತ್ತದೆ ಎಂದು ನಂಬಿ ಬಾಳಿದ್ದವರು ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರು.

**ಸಹೃದಯ ಓದುಗ**

ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರು ಒಬ್ಬ ಸಹೃದಯಿ ಓದುಗನಾಗಿದ್ದರು. ತನ್ನ ವೃತ್ತಿಜೀವನಕ್ಕೆ ಸಂಬಂಧಪಟ್ಟ ಹಾಗೂ ಜ್ಞಾನ ಬುತ್ತಿ ತುಂಬಬಲ್ಲ ಅನೇಕ ಪುಸ್ತಕಗಳನ್ನು ಓದುತ್ತಿದ್ದರು. ಲೋಕಸಭೆಯ ಸದಸ್ಯರಾಗಿದ್ದ ಅವದಿಯಲ್ಲಿ ಅವರು ಓದಿದ್ದ 'ನ್ಯಾಯಾಂಗ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಹಾಗೂ ಮಾರ್ಗದರ್ಶಿ ನಡವಳಿಕೆಗಳು' - ಕೆ.ಎಸ್. ಹೆಗ್ಡೆಯವರ ಅಚ್ಚುಮೆಚ್ಚಿನ ಪುಸ್ತಕಗಳಾಗಿದ್ದವು. ಬಿಡುವಿಲ್ಲದ ಕೆಲಸದ ನಡುವೆಯೂ ರಾಮಾಯಣ, ಮಹಾಭಾರತ - ಭಗವದ್ಗೀತೆ ಮೊದಲಾದ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಪುಸ್ತಕಗಳನ್ನು ಕೊಂಡಾಡುವುದರ ಜೊತೆಯಲ್ಲಿ ಕೊಂಡು ಓದುತ್ತಿದ್ದ ಕೆ.ಎಸ್. ಹೆಗ್ಡೆಯವರು ಉತ್ತಮ ಬರೆಹಗಾರರನ್ನು ಸದಾ ಪ್ರೋತ್ಸಾಹಿಸುತ್ತಿದ್ದರು.

ಸದಾ ಓದುವ ಹಸಿವಿನಿಂದ ಕೂಡಿದ್ದ ಕೆ.ಎಸ್. ಹೆಗ್ಡೆಯವರು ಪ್ರಜಾಸತ್ತೆಯ ಧ್ಯೇಯ - ಉದ್ದೇಶಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಪ್ರಜಾಸತ್ತಾತ್ಮಕವಾದ ಸಾಮಾಜಿಕ ವ್ಯವಸ್ಥೆಯ ನಾಗರಿಕರಾಗುವಂತೆ ನಾವು ನಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಕಾಗಿದ್ದು, ನಮ್ಮ ಮಕ್ಕಳು ಸ್ವತಂತ್ರ ಸಮಾಜವಾದಿ ಸಮಾಜದಲ್ಲಿ ಸ್ವತಂತ್ರ - ಸಮಾನ ಸ್ತ್ರೀ - ಪುರುಷರಂತೆ ಬದುಕಿ - ಬಾಳಲು ಕಲಿಯಲು ಅವಕಾಶ ಕಲ್ಪಿಸಲಾಗಿದೆ ಎಂಬ ಕಾಳಜಿ ಹೆಗ್ಡೆಯವರಲ್ಲಿತ್ತು. ನಮ್ಮಲ್ಲಿ ಸುಶಿಕ್ಷಿತರೆಂದು ಕರೆಸಿಕೊಳ್ಳುವವರಲ್ಲಿ ಕೂಡ ಅನೇಕರು ತಮ್ಮ ಸಹವರ್ತಿಗಳೊಂದಿಗೆ ಸ್ವಾತಂತ್ರ್ಯ ಮತ್ತು ಸಮಾನತೆಯ ಸಂಬಂಧ ಬೆಳೆಸಿಕೊಳ್ಳುವ ಮನೋವೃತ್ತಿಯನ್ನು ಅರಿತಿಲ್ಲ. ಹೀಗಾಗಿ ನಮ್ಮ ದೇಶದ, ಎಲ್ಲಾ ವರ್ಗದ ಜನರಿಗೂ ಪ್ರಜಾಸತ್ತಾತ್ಮಕವಾದ ಪ್ರವೃತ್ತಿಯನ್ನು ಕಲಿಸುವ ಅನಿವಾರ್ಯತೆ ಇದೆ ಎಂಬ ಕಾಳಜಿಯನ್ನು ಕೆ.ಎಸ್. ಹೆಗ್ಡೆಯವರು ಹೊಂದಿದ್ದರು.

ಜ್ಞಾನಸಂಪಾದನೆ ಒಂದು ನಿರಂತರವಾದ ಕ್ರಿಯೆಯಾಗಿದ್ದು ಅದನ್ನು ಮನಸ್ಸಿನ ಉಗ್ರಾಣದಲ್ಲಿ ಶೇಖರಿಸಿಡಬೇಕು. ಅವಶ್ಯವಾದಾಗ ಉಪಯೋಗಿಸಿಕೊಳ್ಳಬೇಕೆಂಬುದನ್ನು ಕೆ.ಎಸ್. ಹೆಗ್ಡೆಯವರು ಚೆನ್ನಾಗಿ ತಿಳಿದವರಾಗಿದ್ದರು. ಒಂದು ಒಳ್ಳೆಯ ಪುಸ್ತಕವು ಕಷ್ಟ ಕಾಲದಲ್ಲಿ ಸ್ನೇಹಿತನಾಗುತ್ತದೆ. ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಏಕಾಕಿತನದ ಭಾರವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಎಂತಹ ಆಳವಾದ ದುಃಖವನ್ನೂ ಮರೆಯಲು ಸಹಾಯ ಮಾಡುತ್ತದೆ ಎಂಬುದನ್ನು ಸಹೃದಯ ಓದುಗರಾಗಿದ್ದ ಸದಾನಂದ ಹೆಗ್ಡೆಯವರು ಅದಾಗಲೇ ಮನವರಿಕೆ ಮಾಡಿಕೊಂಡಿದ್ದರು.

ದಿನದಿಂದ ದಿನಕ್ಕೆ ಭ್ರಷ್ಟವಾಗುತ್ತಿರುವ ಸಮಾಜದಲ್ಲಿ ಯಾವುದೇ ರಾಜಕೀಯ ಘೋಷಣೆಗಳಿಗೆ ಬಗ್ಗದೆ, ಯಾವುದೇ ಸಾಮಾಜಿಕ ಯೋಜನೆಗಳಿಗೆ, ಯಾವುದೇ ಧಾರ್ಮಿಕ ಉಪದೇಶಗಳಿಗೆ ಸಾಧ್ಯವಾಗದೇ ಇರುವಂತಹ ಮನುಷ್ಯರ ಮನಸ್ಸುಗಳ ಪರಿವರ್ತನೆಯು ಕೇವಲ ಒಳ್ಳೆಯ ಪುಸ್ತಕಗಳಿಂದ ಮಾತ್ರ ಸಾಧ್ಯ ಎಂದು ಬಲವಾಗಿ ನಂಬಿದ್ದರಿಂದಲೇ ಕೆ.ಎಸ್. ಹೆಗ್ಡೆಯವರು ಪುಸ್ತಕಗಳನ್ನು ನೆಚ್ಚಿಕೊಂಡಿದ್ದರು; ಮೆಚ್ಚಿಕೊಂಡಿದ್ದರು. ಹೀಗಾಗಿಯೇ ಕೆಲಸದ ಒತ್ತಡದ ನಡುವೆಯೂ ತಮ್ಮ ಮನಸ್ಸನ್ನು ಓದಿನ ಮೂಲಕ ಪ್ರಶಾಂತವಾಗಿರಿಸಿಕೊಳ್ಳುತ್ತಿದ್ದರು. ಕೆಲಸ ಮಾಡಲು ಬಿಡುವಿಲ್ಲದ ಇಂದಿನ ದಿನಗಳಲ್ಲಿ ಪುಸ್ತಕ ಓದುವುದಾದರೂ ಹೇಗೆ ಎಂದುಕೊಂಡು ಮುಖ ಸಿಂಡರಿಸುವ ಮಂದಿಗೆಲ್ಲ ಪ್ರಾಯಶಃ ಸಹೃದಯ ಓದುಗರಾದ ಹೆಗ್ಡೆಯವರು ಖಂಡಿತವಾಗಿ ಆದರ್ಶಪ್ರಾಯರಾಗಿದ್ದಾರೆ.

*ಯಥಾಚಿತ್ತಂ ತಥಾ ವಾಚೋ ಯಥಾ ವಾಚಸ್ತಥಾ ಕ್ರಿಯಾಂ*
*ಚಿತ್ತೇ ವಾಚಿ ಕ್ರಿಯಾಯಾಂ ಚ ಮಹತಾಮೇಕರೂಪತಾ*

ಮನಸ್ಸಿನಂತೆ ಮಾತು, ಮಾತಿನಂತೆ ನಡೆ, ಸಜ್ಜನರಲ್ಲಿ ಮನಸ್ಸು, ಮಾತು ಮತ್ತು ನಡವಳಿಕೆಗಳು ಒಂದೇ ರೀತಿಯಾಗಿರುತ್ತವೆ. 'ಪುಸ್ತಕಪ್ರೇಮಿ'ಯಾಗಿದ್ದ ಕೆ.ಎಸ್. ಹೆಗ್ಡೆಯವರು ಉತ್ತಮ ಪುಸ್ತಕಗಳ ಸಂಸರ್ಗದಿಂದಾಗಿ ನುಡಿದಂತೆ ನಡೆವ - ನಡೆದಂತೆ ನುಡಿವ ವ್ಯಕ್ತಿಯಾಗಿದ್ದರು.

*ಪುಸ್ತಕವೋ ಪತ್ರಿಕೆಯೋ ಕೊಳ್ಳುವುದಕೆಂದು*
*ಮೀಸಲಿಡು ರೂಪಾಯಿಯಲಿ ಪೈಸೆಯೊಂದು*
*ಪುಕ್ಕಟೆಯೆ ನೀನೋದಿ ಹೊಡೆಯುತಿರೆ ಲೊಟ್ಟೆ*
*ಹೇಗೆ ತಂಪಾದೀತು ಬರೆದವನ ಹೊಟ್ಟೆ?*

ಎಂಬ ದಿನಕರ ದೇಸಾಯಿಯವರ ಚುಟುಕವನ್ನು ಚೆನ್ನಾಗಿ ಅರಿತಿದ್ದ ಹೆಗ್ಡೆಯವರು ಸ್ವತಃ ತಾವೇ ಪುಸ್ತಕಗಳನ್ನು ಖರೀದಿಸಿ, ಬರೆಹಗಾರರ ಹೊಟ್ಟೆ ತಂಪಾಗಿಸುತ್ತಿದ್ದರು. ಬೌದ್ಧಿಕವಾಗಿ ಬಹಳಷ್ಟು ಬೆಳೆದರು.

**ರಾಜಕೀಯ ಮುತ್ಸದ್ಧಿ**

ರಾಜಕೀಯ ವ್ಯವಸ್ಥೆಯಲ್ಲಿಯೇ ಪ್ರಜಾಪ್ರಭುತ್ವ ಸರ್ವೋತ್ಕೃಷ್ಟವಾದುದು ಎಂಬುದು ಬಹುಜನ ಒಪ್ಪಿಕೊಂಡ, ಸ್ವೀಕರಿಸಿಕೊಂಡ ಒಂದು ವ್ಯವಸ್ಥೆ. ಇದು ಸರಿಯೇ. ಆದರೂ ಕೆಲವೊಮ್ಮೆ ಈ ವ್ಯವಸ್ಥೆ ಬುದ್ಧಿಜೀವಿಗಳ ತಲೆ ತಿನ್ನುವುದೂ ಇದೆ. ಹೀಗಾಗಿಯೇ 'ಪ್ರಜಾಪ್ರಭುತ್ವವು ಕ್ರಮೇಣ ಅನಾಯಕತ್ವವಾಗುತ್ತದೆ' ಎಂಬ ಮಾತೂ ಇದೆ. ಹೀಗೆ ಅನಾಯಕತ್ವವಾಗುವುದಕ್ಕೆ, ಅವಿದ್ಯಾವಂತ - ಸ್ವಾರ್ಥಪರ ರಾಜಕಾರಣಿಗಳೇ ಕಾರಣ.

ರಾಜಕಾರಣಕ್ಕೆ ಬೇಕಾದುದು ತೀವ್ರ ಸೇವಾಸಕ್ತಿ, ದೇಶ - ವಿದೇಶಗಳ ರಾಜಕೀಯದ ಸ್ಥಿತ್ಯಂತರಗಳ ಸರಿಯಾದ ಮಾಹಿತಿ, ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಪ್ರಬಲವಾದ ಇಚ್ಛಾಶಕ್ತಿ, ಸಂವಿಧಾನದ ಮೂಲಭೂತ ತತ್ವಗಳ ಹಿತಾಸಕ್ತಿ. ಈ ಎಲ್ಲ ಗುಣಗಳು ಕೂಡಿದ್ದರೇನೇ ವ್ಯಕ್ತಿಯೊಬ್ಬ ರಾಜಕೀಯ ರಂಗದಲ್ಲಿ ಯಶಸ್ವಿಯಾಗಬಲ್ಲ. ರಾಜನೈತಿಕ ಶಿಕ್ಷಣವಿಲ್ಲದೆ ಕೇವಲ ಮತದಾನದಿಂದ ಮೇಲೆದ್ದು ಬಂದವನು ಪ್ರಜಾಪ್ರಭುತ್ವವನ್ನು ಕಟ್ಟಲಾರ ಎಂಬ ಅರಿವು ಕೆ.ಎಸ್. ಹೆಗ್ಡೆಯವರಲ್ಲಿ ಸ್ಪಷ್ಟವಾಗಿತ್ತು. ಆದುದರಿಂದಲೇ ಅವರೋರ್ವ ಸ್ವಯಂ ಅರ್ಹತೆಯಿಂದ ಬೆಳೆದುನಿಂತ ರಾಜಕೀಯ ಮುತ್ಸದ್ಧಿ!

ಅಧಿಕಾರದಾಹ ನಮ್ಮ ಮೇಲೆ ಸವಾರಿ ಮಾಡದಂತೆ ನೋಡಿಕೊಳ್ಳಬೇಕೆಂಬ ಎಚ್ಚರ ಕೆ.ಎಸ್. ಹೆಗ್ಡೆಯವರಿಗಿತ್ತು. ಮಾನವತೆಯ ಸೇವೆಯ ದಾಹ, ಪ್ರತಿಯೊಬ್ಬ ಮನುಷ್ಯನೂ ತಾನು ಸರ್ವೋನ್ನತ ಮಟ್ಟಕ್ಕೆ ಏರಬಲ್ಲ ಶಕ್ತಿಯುಳ್ಳ ವ್ಯಕ್ತಿ ಎಂದು ಭಾವಿಸುವಂತೆ ಮಾಡಬಲ್ಲ ಸೇವೆಯ ದಾಹ ನಮ್ಮಲ್ಲಿ ಹುಟ್ಟಿ ಬರಬೇಕು ಎಂಬ ಬಯಕೆ ಅವರದಾಗಿತ್ತು. ಇಡೀ ರಾಷ್ಟ್ರದ ಮಾನವ ಸಮುದಾಯ 'ನನ್ನವರು' ಎಂಬ ಭಾವನೆ ಪ್ರತಿಯೊಬ್ಬ ರಾಜಕಾರಣಿಯಲ್ಲೂ ಇರಬೇಕು ಎಂದು ಭಾವಿಸಿದ್ದ ಕೆ.ಎಸ್. ಹೆಗ್ಡೆಯವರು ಅದನ್ನು ನುಡಿದಂತೆ ನಡೆದು ತೋರಿದರು. ತಮ್ಮ ನಿಸ್ವಾರ್ಥ ಮನೋಭಾವದಿಂದಾಗಿ ರಾಜ್ಯಸಭೆಯ ಸದಸ್ಯರಾಗಿ, ಸಾಂಸದಿಕರಾಗಿ, ಲೋಕಸಭೆಯ ಸ್ಪೀಕರ್ ಆಗಿ, ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ನಾಯಕರಾಗಿ ಈ ರಾಷ್ಟ್ರದ ಜನತೆ ಸದಾ ನೆನಪಿಟ್ಟುಕೊಳ್ಳುವಂತಹ ದೀಮಂತ ವ್ಯಕ್ತಿತ್ವವನ್ನು ಮೆರೆದರು.

ಅಪ್ಪಟ ದೇಶಪ್ರೇಮಿಯಾಗಿದ್ದ ಹೆಗ್ಡೆಯವರು ಅನ್ಯಾಯದ ವಿರುದ್ಧ ಧ್ವನಿಯೆತ್ತಲೆಂದೇ ಲೋಕಸಭಾ ಚುನಾವಣೆಗೆ ಸ್ಪರ್ದಿಸಿದರು. ಜಯ ಗಳಿಸಿದರು. ಲೋಕಸಭೆಯ ಸ್ಪೀಕರ್ ಆಗಿ ಸಂಸತ್ತಿನ ಘನತೆಯನ್ನು ಎತ್ತಿ ಹಿಡಿದರು. ನ್ಯಾಯ - ನಿಷ್ಠೆಯ ಮೇರು ವ್ಯಕ್ತಿತ್ವವನ್ನು ಮೆರೆದರು. ತನ್ನ ಅಧಿಕಾರಾವಧಿಯಲ್ಲಿ ಮಹತ್ತರವಾದುದನ್ನು ಸಾಧಿಸಿ ಲೋಕಮನ್ನಣೆ ಗಳಿಸಿದರು.

**ಸಂಸ್ಕೃತಿ ಚಿಂತಕ**

'ಸಂಸ್ಕೃತಿ' ಎನ್ನುವುದು ನಾವು ಹೇಳಿಕೊಳ್ಳುವುದಲ್ಲ. ಅದನ್ನು ಇನ್ನೊಬ್ಬರು ನಮ್ಮೊಳಗೆ ಕಂಡುಕೊಳ್ಳುವುದು. ನಾವು ಓದಿದ್ದೆಲ್ಲ ಮರೆತು ಹೋಗಬಹುದು. ಆದರೆ ನಾವು ಅಳವಡಿಸಿಕೊಂಡು ಹೋದ ಸಂಸ್ಕೃತಿ ನಮ್ಮನ್ನು ಬಿಟ್ಟುಹೋಗುವುದಿಲ್ಲ. ವಾಸ್ತವದ 'ವಿಷ'ವನ್ನು ನುಂಗಿಕೊಂಡು ಯಾರು ನಂಜುಂಡರಾಗಿರುತ್ತಾರೆಯೋ ಅವರಿಂದ ಮಾತ್ರ 'ಅಮೃತ' ಸೃಷ್ಟಿಯ ಕಾರ್ಯ ನಡೆಯುತ್ತದೆ. ದೇಶದಲ್ಲಿ ಇಂಥ

ವ್ಯಕ್ತಿಗಳು ಹೆಚ್ಚಿದಷ್ಟೂ ದೇಶದ ಜೀವನ ಮಧುರವಾಗುತ್ತದೆ. ತನ್ನ ಕೆಳಗೆ - ಅಕ್ಕಪಕ್ಕದಲ್ಲಿ - ಸುತ್ತಲೂ ಕೊಳಕು ಇದೆ ಎಂದು ತಿಳಿದರೂ ಮರವು ಯಾವತ್ತೂ ತನ್ನ ಬೇರುಗಳನ್ನು ಸಂಕುಚಿತಗೊಳಿಸಿಕೊಳ್ಳುವುದಿಲ್ಲ. ಖುಷಿಯಿಂದಲೇ ಪಕ್ಕದ ಕೊಳಕನ್ನು ಹೀರಿಕೊಂಡು, ಸುಗಂಧಭರಿತ ಫಲಪುಷ್ಪಗಳನ್ನು ಕೊಡುತ್ತದೆ. ಹೀಗಾಗಿಯೇ ಕೆ.ಎಸ್. ಹೆಗ್ಡೆಯವರಿಗೆ ಕಣ್ಣು ಮುಚ್ಚಿಕೊಂಡು, ಕೈ ಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳಲಾಗಲಿಲ್ಲ. ತನ್ನ ಸ್ಥಾನದ ಅರಿವು, ಪರರ ಮನದ ಇಂಗಿತವನ್ನು ಅರಿಯುವ ಸಾಮರ್ಥ್ಯ, ಸ್ವಾರ್ಥದ ಮೇಲಿನ ನಿಯಂತ್ರಣ, ಆಹ್ಲಾದಕರ ಪ್ರವೃತ್ತಿ ಹಾಗೂ ಸಮನ್ವಯ ದೃಷ್ಟಿಗಳನ್ನು ಹೊಂದಿದ್ದು ಸಂಸ್ಕೃತಿವಂತರಾಗಿದ್ದವರು ಕೆ.ಎಸ್. ಹೆಗ್ಡೆಯವರು. ಅವರೊಬ್ಬ ಸದಭಿರುಚಿಯ ಕನಸುಗಾರ ಮಾತ್ರವಲ್ಲ, ಸಂಸ್ಕೃತಿ ಚಿಂತಕರಾಗಿದ್ದರು. ಇಂದಿನ ಯುವ ಜನಾಂಗ ದೇವರನ್ನು ಮರೆತು ಬದುಕುತ್ತಿರುವುದನ್ನು ಕಂಡ ಹೆಗ್ಡೆಯವರು ತಾನು ಪ್ರಾರಂಭಿಸಿದ ವಿದ್ಯಾಸಂಸ್ಥೆಯ ಸಂಕೀರ್ಣದಲ್ಲಿಯೇ ಶ್ರೀ ಮಹಾಗಣಪತಿ ದೇವಾಲಯ ನಿರ್ಮಿಸಿದರು. ದೇವಾಲಯ ಹಾಗೂ ವಿದ್ಯಾಲಯಗಳು ಸಮಾಜ ಪುರುಷನ ಎರಡು ಕಣ್ಣುಗಳಂತೆ ಎಂದು ಅವರು ತಿಳಿದಿದ್ದರು. ದೇವರಲ್ಲಿ ವಿಶ್ವಾಸವು ಮಾನವನ ಜೀವನಕ್ಕೆ ಅರ್ಥವನ್ನೂ, ಉದ್ದೇಶವನ್ನೂ ನೀಡುತ್ತದೆ ಎಂಬುದನ್ನವರು ಬಲವಾಗಿ ನಂಬಿದ್ದರು. ವಿದ್ಯಾಲಯದ ಹತ್ತಿರದಲ್ಲಿಯೇ ದೇವಾಲಯವನ್ನು ಸ್ಥಾಪಿಸಿದರೆ ಇಂದಿನ ಯುವ ಪೀಳಿಗೆ ದೇವರ ಇರುವಿಕೆಯ ಜೊತೆಯಲ್ಲಿ ಬದುಕಿನ ಅರ್ಥವನ್ನು ಕಂಡುಕೊಳ್ಳಬಹುದು ಎಂಬ ಆಕಾಂಕ್ಷೆ ಅವರದ್ದಾಗಿತ್ತು.

ನಮ್ಮ ಪ್ರಾಚೀನ ಪರಂಪರೆಯಲ್ಲಿ ಭಗವಂತನನ್ನು ಅರಿಯುವುದಕ್ಕಾಗಿ ನವ ವಿಧ ಭಕ್ತಿಯನ್ನು ಹೇಳಲಾಗಿದೆ. ಅವುಗಳೆಂದರೆ - ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮ ನಿವೇದನ. ಹೀಗಾಗಿ, ಜನರನ್ನು ಭಗವಂತನ ಭಜನೆ, ಧ್ಯಾನ, ಕೀರ್ತನೆಗಳಲ್ಲಿ ತೊಡಗಿಸಬೇಕಾದುದು ತನ್ನ ಪರಮ ಕರ್ತವ್ಯವೆಂದು ಸದಾನಂದ ಹೆಗ್ಡೆಯವರು ತಿಳಿದಿದ್ದರು. ಬದುಕಿನ ಗುರಿಯನ್ನರಿತು, ಪರಮಾತ್ಮನ ಸ್ಪರ್ಶದ ಅನುಭವಕ್ಕಾಗಿ, ಅಂತರಂಗದ ಶುದ್ಧಿಗಾಗಿ 'ಸಮಾಜಸೇವೆ'ಯ ದೀಕ್ಷೆ ಪಡೆಯುವ ಉದ್ದೇಶ ಅವರದ್ದಾಗಿತ್ತು. ಆದುದರಿಂದಲೇ ದೇವಸ್ಥಾನದಲ್ಲಿ ಪ್ರತಿವರ್ಷವೂ ಅನೇಕ ಧಾರ್ಮಿಕ ಉಪನ್ಯಾಸಗಳನ್ನು, ಪುರಾಣ, ಭಾರತ, ರಾಮಾಯಣ ಪ್ರವಚನಗಳನ್ನು ಏರ್ಪಡಿಸುತ್ತಿದ್ದರು. ವಿದ್ಯಾಭೂಷಣರ ಸಂಗೀತ ಕಚೇರಿಯೆಂದರೆ ಕೆ.ಎಸ್. ಹೆಗ್ಡೆಯವರಿಗೆ ಪ್ರಾಣ. ಭಜನೆ, ಹರಿಕಥೆ, ಯಕ್ಷಗಾನ ತಾಳಮದ್ದಳೆಗಳನ್ನು ಆಯೋಜಿಸುವುದು ಮಾತ್ರವಲ್ಲದೆ, ಕಾರ್ಯಕ್ರಮದ ಕೊನೆಯವರೆಗೂ ಇದ್ದು ಅದನ್ನು ನಿರ್ವಹಿಸಿದ ಕಲಾವಿದರನ್ನು, ವಿದ್ವಾಂಸರನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಸಹೃದಯ ಪ್ರೇಕ್ಷಕನೇ ಕಲಾವಿದನಿಗೆ ನಿಜವಾದ ಸ್ಫೂರ್ತಿ ಎಂಬುದನ್ನವರು ಚೆನ್ನಾಗಿ ಅರಿತಿದ್ದರು. ಈಗಿನ ಕಾಲದಲ್ಲಿ ದಾಕ್ಷಿಣ್ಯಕ್ಕೋ, ಪ್ರಚಾರಕ್ಕೋ ಕಾರ್ಯಕ್ರಮಗಳನ್ನು ಮಾಡುವವರಿದ್ದಾರೆ; ಆದರೆ ನೋಡುವವರಿಲ್ಲ - ಕೇಳುವವರಿಲ್ಲ. ಸಂಘಟಕರಿಗೇ ಬೇಡವಾದ, ಸಂಘಟಕರೇ ಹಾಜರಿರದ ಕಾರ್ಯಕ್ರಮಗಳು ಸತ್ತ ್ವಪೂರ್ಣವಾಗಿರುವುದಾದರೂ ಹೇಗೆ? ಜನಪ್ರಿಯವಾಗುವುದಾದರೂ ಹೇಗೆ?

ಕೆ.ಎಸ್. ಹೆಗ್ಡೆಯವರಿಗೆ ದೈವಭಕ್ತಿ ಎನ್ನುವುದು ಸಹಜ ಸಂಸ್ಕೃತಿಯ ಪ್ರಕಟರೂಪವೇ ಆಗಿತ್ತು. ವಿದ್ಯಾಲಯದ ಆವರಣದಲ್ಲಿಯೇ ಈ ಕಾರ್ಯಕ್ರಮ ಏರ್ಪಡಿಸಲು ಒಂದು ಕಾರಣವೂ ಇತ್ತು. ನಾಲ್ಕು ಗೋಡೆಗಳ ನಡುವೆ ಕಲಿಯುವ ಪಾಠಕ್ಕಿಂತ ತರಗತಿ ಕೋಣೆಯ ಹೊರಗಿನ ಪಾಠವೇ ನಮ್ಮ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ. ತರಗತಿ ಕೋಣೆಯ ಹೊರಗಿನ ಪಾಠಗಳೇ ಸಾಂಸ್ಕೃತಿಕ ಚಟುವಟಿಕೆಗಳು. ಈ ಚಟುವಟಿಕೆಗಳನ್ನು ಹೆಗ್ಡೆಯವರು ಕೇವಲ ಮಕ್ಕಳನ್ನು - ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಮಾಡಿಲ್ಲ. ಅವರ ದೃಷ್ಟಿಯಲ್ಲಿ ಶಿಕ್ಷಕರು ಹಾಗೂ ಎಲ್ಲ ಸಿಬ್ಬಂದಿ ವರ್ಗದವರೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮುಖ್ಯವಾಗಿತ್ತು. ಯಾವನೇ ಒಬ್ಬ ವ್ಯಕ್ತಿ ತನ್ನ ಊರಿನ - ನಾಡಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಂಡಾಗ ಅವನು ಬೌದ್ಧಿಕವಾಗಿ ಸಾಕಷ್ಟು ಬೆಳೆಯುತ್ತಾನೆ, ಹೃದಯವಂತ ನಾಗುತ್ತಾನೆ. ಎಲ್ಲಕ್ಕಿಂತ ಮುಖ್ಯವಾಗಿ ತನ್ನ ನಾಡಿನ ಸಂಸ್ಕೃತಿಯ ಬಗೆಗೆ ಹೆಮ್ಮೆ ಪಟ್ಟುಕೊಳ್ಳುತ್ತಾನೆ. ನಿಟ್ಟೆ ಹಾಗೂ ಪರಿಸರದ ಜನತೆಗೆ ಸಾಂಸ್ಕೃತಿಕವಾಗಿ ಬಹಳಷ್ಟನ್ನು ನೀಡಿದ ಕೆ.ಎಸ್. ಹೆಗ್ಡೆಯವರ ಹೃದಯ ಶ್ರೀಮಂತಿಕೆಗೆ ಖಂಡಿತವಾಗಿ ನಾವು ತಲೆಬಾಗಲೇಬೇಕು.

**ಸಮಾಜಮುಖಿ ಕನಸು**

“ನನಗಾಗಿ ಸ್ವಲ್ಪ; ಸಮಾಜಕ್ಕಾಗಿ ಸರ್ವಸ್ವ” ಎಂಬುದನ್ನು ಬಲವಾಗಿ ನಂಬಿದ್ದ ಕೆ.ಎಸ್. ಹೆಗ್ಡೆಯವರು ತನ್ನ ಸಮಾಜಕ್ಕಾಗಿ ತಾನು ಏನನ್ನಾದರೂ ಮಾಡಲೇಬೇಕೆಂಬ ಕನಸು ಕಂಡವರು. ಕನಸು ಕಾಣುವುದು ಮನುಷ್ಯನ ಸಹಜ ಸ್ವಭಾವ. ಕನಸು ಕಾಣುವುದು ದೊಡ್ಡದಲ್ಲ; ಕಂಡ ಕನಸನ್ನು ನನಸಾಗಿಸುವುದು ದೊಡ್ಡದು. ತನಗಾಗಿ - ತನ್ನವರಿಗಾಗಿ ಕನಸು ಕಾಣುವುದು ದೊಡ್ಡದಲ್ಲ; ತಾನು ಬದುಕಿದ ಸಮಾಜಕ್ಕಾಗಿ - ದೇಶಕ್ಕಾಗಿ ಕನಸು ಕಾಣುವುದು ದೊಡ್ಡದು. ಸದಾನಂದ ಹೆಗ್ಡೆಯವರು ಕಂಡ ಕನಸು - ಮನುಕುಲದ ಭವಿಷ್ಯದ ಕನಸು. ದೊಡ್ಡ ಮನುಷ್ಯರು ಮಾತ್ರ ದೊಡ್ಡ ಕನಸನ್ನು ಕಾಣುತ್ತಾರೆ. ಕಂಡ ಕನಸನ್ನು ನನಸಾಗಿಸಿಕೊಳ್ಳುತ್ತಾರೆ. ದೊಡ್ಡವರಾದ ಹೆಗ್ಡೆಯವರು ದೊಡ್ಡ ದೊಡ್ಡ ಕನಸುಗಳನ್ನು ಕಂಡರು; ಅವುಗಳನ್ನೆಲ್ಲ ಕಾರ್ಯಗತಗೊಳಿಸಿದರು ಕೂಡ.

ಮನುಷ್ಯನಾಗಿ ಹುಟ್ಟಿದ ಮೇಲೆ ಅವನ ಬಾಳಿಗೊಂದು ಗುರಿ ಇರಬೇಕು. ಗುರಿಯಿಲ್ಲದ ಜೀವನ ಪರಿಮಳವಿಲ್ಲದ ಹೂವಿನಂತೆ; ಗುರಿಯಿಲ್ಲದ ಜೀವನ ಚುಕ್ಕಾಣಿಯಿಲ್ಲದ ಹಡಗಿನಂತೆ. ಕೆ.ಎಸ್. ಹೆಗ್ಡೆಯವರ ಬಾಳಿಗೆ ಒಂದು ಸ್ಪಷ್ಟವಾದ ಗುರಿ ಇತ್ತು. ಈ ಗುರಿ ಮುಟ್ಟಲು ನೇರವಾದ ದಾರಿಯೂ ಇತ್ತು. ಇಂದಿನ ಅನೇಕ ಜನರಿಗೆ ದಾರಿಯೂ ಇಲ್ಲ, ಗುರಿಯೂ ಇಲ್ಲ. ಹೇಳುವ ಮಾತಿಗೂ - ಬಾಳುವ ಆದರ್ಶಕ್ಕೂ ಸಂಬಂಧವೇ ಇಲ್ಲ. ಕೆ.ಎಸ್. ಹೆಗ್ಡೆಯವರು ಆದರ್ಶವನ್ನು ನುಡಿದು ಹೇಳಲಿಲ್ಲ; ನಡೆದು ತೋರಿದರು.

ಸಮಾಜದ ಋಣ ತೀರಿಸಲು ಸಮಾಜ ಸೇವೆಯೇ ಉತ್ತಮ ಮಾರ್ಗ ಎಂದು ತಿಳಿದ ಕೆ.ಎಸ್. ಹೆಗ್ಡೆಯವರು ಯಾವುದೇ ಒಂದು ಜನಾಂಗ ಪ್ರಗತಿಯನ್ನು ಸಾದಿಸಬೇಕಾದರೆ ಶೈಕ್ಷಣಿಕವಾದ ಪ್ರಗತಿ ಮೊತ್ತಮೊದಲಿನ ಆದ್ಯತೆಯಾಗಬೇಕೆಂದು ತಿಳಿದರು. ಇದಕ್ಕಾಗಿ ತಮ್ಮ ಹೆಂಡತಿಯ ಊರಾದ ನಿಟ್ಟೆಯನ್ನು ಆರಿಸಿಕೊಂಡರು. ಅಧಿಕಾರದಲ್ಲಿದ್ದರೆ ಮಾತ್ರ ಸಮಾಜಸೇವೆ ಮಾಡಲು ಸಾಧ್ಯ ಎಂಬ ಮೌಢ್ಯದಿಂದ ಕೂಡಿರುವ ಇಂದಿನ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಕೆ.ಎಸ್. ಹೆಗ್ಡೆಯವರು ನಿಜವಾಗಿಯೂ ಒಂದು ಸವಾಲಾದರು. ತಮ್ಮ ಸೇವಾ ಹಿರಿತನವನ್ನು ಕಡೆಗಣಿಸಿದ ಸರಕಾರದ ವಿರುದ್ಧ ಪ್ರತಿಭಟಿಸಿದರು. ಜನರ ಏಳಿಗೆಯತ್ತ ಮೊಗ ಮಾಡಿದರು.

ಸಮಾಜವನ್ನುಳಿದು ಯಾವತ್ತೂ ನಮ್ಮ ಬದುಕಿಗೆ ನೆಲೆಯಿಲ್ಲ, ಬೆಲೆಯಿಲ್ಲ. ತಾನು ಸಮಾಜಕ್ಕಾಗಿ; ಸಮಾಜ ತನಗಾಗಿ - ಈ ಸಾಮರಸ್ಯದ ಸಾಂಗತ್ಯದಲ್ಲೇ ನಮ್ಮ ಸಂತೋಷ ಇರಬೇಕಾಗಿದೆ. ಹೀಗಾಗಿಯೇ ಕೆ.ಎಸ್. ಹೆಗ್ಡೆಯವರು ಸಮಾಜಕ್ಕೆ ಶಿಕ್ಷಣ ನೀಡುವ ಕಾಯಕಕ್ಕೆ ಮುಂದಾದರು. 1979 ಆಗಸ್ಟ್ 30ರಂದು ಏಳು ಜನ ಬುದ್ಧಿಜೀವಿಗಳು ಒಟ್ಟು ಸೇರಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ನಿಟ್ಟೆಯಲ್ಲಿ ಆರಂಭಗೊಂಡ ಈ ವಿದ್ಯಾಸಂಸ್ಥೆಗೆ ‘ನಿಟ್ಟೆ ವಿದ್ಯಾಸಂಸ್ಥೆ’ ಎಂಬುದಾಗಿ ನಾಮಕರಣ ಮಾಡಲಾಯಿತು. ಸಂಸ್ಥೆಯ ಸ್ಫೂರ್ತಿಯ ಪ್ರೇರಕರಾದ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರೇ ನಿಟ್ಟೆ ವಿದ್ಯಾಸಂಸ್ಥೆಯ ಸ್ಥಾಪಕರೆನ್ನಿಸಿಕೊಂಡರು. ಕುಗ್ರಾಮವಾಗಿದ್ದ ನಿಟ್ಟೆಯಲ್ಲಿ ಪ್ರೌಢಶಾಲೆಯೊಂದನ್ನು ಸ್ಥಾಪಿಸುವ ಹಂಬಲದಿಂದ 1980ರಲ್ಲಿ ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಕೆ.ಎಸ್. ಹೆಗ್ಡೆಯವರ ಭಾವ ಡಾ| ಶಂಕರ ಅಡ್ಯಂತಾಯ ಆ ಕಾಲದಲ್ಲಿ ಬಹಳ ಜನಮನ್ನಣೆ ಪಡೆದ ವೈದ್ಯರಾಗಿದ್ದರಿಂದ ಸಂಸ್ಥೆಯ ಚೊಚ್ಚಲ ಜ್ಞಾನದೇಗುಲಕ್ಕೆ ಅವರ ಹೆಸರನ್ನಿಡಲಾಯಿತು. ತನ್ನದೇ ಆದ ಸ್ವಂತ ಕಟ್ಟಡವಿಲ್ಲದೇ ಇದ್ದುದರಿಂದ ನಿಟ್ಟೆ ಗ್ರಾಮ ಪಂಚಾಯತಿಯ ಯುವಕ ಮಂಡಲದ ಕಟ್ಟಡದಲ್ಲಿ ಶಾಲೆ ಆರಂಭಗೊಂಡಿತು. ಜೂನ್ 2, 1980ರಂದು 76 ಮಕ್ಕಳಿಗಾಗಿ ಪ್ರೌಢಶಾಲೆ ಪ್ರಾರಂಭವಾಯಿತು. ಪ್ರತ್ಯೇಕ ತರಗತಿ ಕೋಣೆಗಳು ಇಲ್ಲವಾದ್ದರಿಂದ ಒಂದೇ ಸಭಾಂಗಣದಲ್ಲಿ ಎರಡು ವಿಭಾಗಗಳಲ್ಲಿ ತರಗತಿಗಳು ನಡೆಯುತ್ತಿದ್ದವು. ಕೆ.ಎಸ್ ಹೆಗ್ಡೆಯವರ ದ್ವಿತೀಯ ಪುತ್ರ ಶ್ರೀ ಎನ್. ವಿನಯ ಹೆಗ್ಡೆಯವರು ಶಾಲಾ ಸಂಚಾಲಕರಾಗಿ ನೇಮಕಗೊಂಡರು.

1981ರಲ್ಲಿ ನಿಟ್ಟೆ ವಿದ್ಯಾಸಂಸ್ಥೆಯು 8 ಎಕರೆಗಳಷ್ಟು ವಿಸ್ತೀರ್ಣವುಳ್ಳ ಸ್ಥಳದಲ್ಲೇ ತನ್ನದೇ ಆದ ಶಾಲಾ ಕಟ್ಟಡವನ್ನು ರಚಿಸಿತು. ಅಕ್ಟೋಬರ್ 31, 1981ರಿಂದ ನೂತನ ಶಾಲಾ ಕಟ್ಟಡದಲ್ಲಿ ತರಗತಿಗಳು ಮುಂದುವರಿದವು. 1984ರಲ್ಲಿ ಡಾ| ಎನ್. ಶಂಕರ ಅಡ್ಯಂತಾಯ ಪ್ರೌಢಶಾಲೆಯು ಪದವಿ ಪೂರ್ವ ವಿದ್ಯಾಲಯವಾಗಿ ಮೇಲ್ದರ್ಜೆಗೇರಿತು. ಒಂದು ಶಾಲೆಗೆ ಇರಬೇಕಾದ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಿದ್ದ ಈ ಪ್ರೌಢಶಾಲೆಯ ಅಧ್ಯಾಪಕರು ಹಾಗೂ ಸಿಬ್ಬಂದಿ 1989ರಿಂದ ಸರಕಾರೀ ವೇತನ ಪಡೆಯುವ ಅರ್ಹತೆ ಪಡಕೊಂಡರು.

**ಪರಂಪರೆಯ ಮುನ್ನಡೆ**

ಪ್ರತಿಯೊಬ್ಬ ಮನುಷ್ಯ ಸಾಧಿಸಿಕೊಳ್ಳಬೇಕಾದ ಬಹುದೊಡ್ಡ ಸಂಪತ್ತು, ಶಾಶ್ವತವಾದ ಸಂಪತ್ತು - ಅವನ ಗುಣ ಸಂಪತ್ತು. ಈ ಗುಣ ಎಲ್ಲಿಂದ ಬರುತ್ತದೆ? ಕೆಲವರಿಗೆ ಪರಂಪರೆಯಿಂದ ಬರುತ್ತದೆ. ಹಲವರಿಗೆ ಪರಿಸರದಿಂದ ಬರುತ್ತದೆ. ಇನ್ನು ಕೆಲವರಿಗೆ ಕಲಿಕೆಯಿಂದ ಬರುತ್ತದೆ. ಮತ್ತೆ ಹಲವರಿಗೆ ಸ್ವಯಂ ಚಿಂತನೆಯಿಂದ ಬರುತ್ತದೆ. ಕೆ.ಎಸ್. ಹೆಗ್ಡೆಯವರು ತಮ್ಮ ತಂದೆ ಸುಬ್ಬಯ್ಯ ಹೆಗ್ಡೆ ಹಾಗೂ ತಾಯಿ ಲಿಂಗಮ್ಮ ಶೆಡ್ತಿಯವರ ಗುಣಸಾರವನ್ನು ಹೀರಿಕೊಂಡು ಬೆಳೆದವರು. ಅನಂತರ ತನ್ನಿಂದ ತಾನಾಗಿಯೇ ಈ ಗುಣಗಳನ್ನು ಹೆಚ್ಚಿಸಿಕೊಂಡವರು. ಸದಾನಂದ ಹೆಗ್ಡೆಯವರ ಈ ಗುಣ ಸಂಪತ್ತು ಅವರ ಮಕ್ಕಳಲ್ಲಿ ಬೆಳೆದು ಬಂದಿರುವುದನ್ನು ನಾವಿಂದು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಇದಕ್ಕೆ ನಿದರ್ಶನ ನಿಟ್ಟೆ ವಿದ್ಯಾಸಂಸ್ಥೆಯ ಈಗಿನ ಅಧ್ಯಕ್ಷರಾಗಿರುವ ಶ್ರೀ ಎನ್. ವಿನಯ ಹೆಗ್ಡೆಯವರು. ನಮ್ಮಲ್ಲೊಂದು ಪ್ರಸಿದ್ಧವಾದ ಮಾತಿದೆ : 'ವಿದ್ಯಾ ದದಾತಿ ವಿನಯಂ'. ವಿದ್ಯೆ ವಿನಯವನ್ನು ತಂದುಕೊಡುತ್ತದೆ. ಯಾವ ವಿದ್ಯೆ ವಿನಯವನ್ನು ತಂದೀಯಲಾರದೋ ಅದನ್ನು 'ವಿದ್ಯೆ' ಎನ್ನಲಾಗದು. ಈ ದೃಷ್ಟಿಯಿಂದಲೇ 'ವಿದ್ಯೆಗೆ ವಿನಯವೇ ಭೂಷಣ' ಎನ್ನುವುದು.

ವಿನಯ ಹೆಗ್ಡೆಯವರು ಮಿತಭಾಷಿ ಮಾತ್ರವಲ್ಲ; ಮೃದುಭಾಷಿ ಕೂಡ. ಸದಾ ತಾಳ್ಮೆಯ ವ್ಯಕ್ತಿತ್ವ. ನಿರಂತರವಾಗಿ ಸಮಾಜದ - ತನ್ನ ಸುತ್ತಣ ಜನರ ಒಳಿತನ್ನು ಬಯಸುವ ದೀಮಂತ ವ್ಯಕ್ತಿ. ಹೆಸರಿಗೆ ಅನ್ವರ್ಥವಾಗಿರುವಂತೆ ನಯ-ವಿನಯದ ಸಾಕಾರಮೂರ್ತಿ. ಅವರೇ ಹೇಳುವಂತೆ, ಅವರ ತಾಯ್ತಂದೆಯರೇ ಅವರ ವ್ಯಕ್ತಿತ್ವವನ್ನು ರೂಪಿಸಿದವರು. ಯಾವುದೇ ಕೆಲಸವಾದರೂ ಸರಿ, ಅದನ್ನು ಒಳ್ಳೆಯ ರೀತಿಯಿಂದ ಇತರರಿಗೆ ಅನ್ಯಾಯವಾಗದಂತೆ ಮಾಡಬೇಕು ಎಂಬುದಾಗಿ ಕೆ.ಎಸ್. ಹೆಗ್ಡೆಯವರು ಹೇಳುತ್ತಿದ್ದರಂತೆ. ಹೀಗಾಗಿ, ತಂದೆಯ ಹೆಸರಿಗೆ - ಅವರ ಅಭಿಪ್ರಾಯಗಳಿಗೆ ಸ್ವಲ್ಪವೂ ಕಳಂಕ ಬರದಂತೆ ಅವರ ಮಕ್ಕಳೆಲ್ಲರೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಗೃಹಿಣಿಯಾಗಿದ್ದ ಶ್ರೀಮತಿ ಮೀನಾಕ್ಷಿ ಹೆಗ್ಡೆಯವರು ತಮ್ಮ ಮಕ್ಕಳ ಮೇಲೆ ಹರಿಸಿದ್ದ ಒಲುಮೆಯ ಧಾರೆ ಅವರ ಮಕ್ಕಳಲ್ಲಿ ರಕ್ತಗತವಾಗಿ ಬಂದಿರುವುದಂತೂ ಸತ್ಯ. ಅವರು ಹೇಳಿಕೊಟ್ಟ - ತೋರಿಕೊಟ್ಟ 'ಪರೋಪಕಾರವೇ ದೊಡ್ಡ ಆಸ್ತಿ' ಎಂಬ ಬೀಜಮಂತ್ರ ವಿನಯ ಹೆಗ್ಡೆಯವರ ಬಾಳಿನಲ್ಲಿ ತಾರಕ ಮಂತ್ರವಾಯಿತು. ತಾಯ್ತಂದೆಯವರಲ್ಲಿದ್ದ ಸರಳತೆ ಅವರಲ್ಲಿ ಆಗಲೇ ಪಡಿಮೂಡಿತ್ತು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರಂತೆಯೇ ಖಜಿಇಟ್ಟುಛಿ ೕಝುಜಿಜ್ಜಿಜ; ಜಿಜ ೀಜ್ಜಿಜ್ಜಿಜ ಎನ್ನುವುದು ವಿನಯ ಹೆಗ್ಡೆಯವರ ಬದುಕಿನಲ್ಲಿ ಎದ್ದು ಕಾಣುವ ಸತ್ಯತೆ.

ವಿನಯ ಹೆಗ್ಡೆಯವರ ಒಡನಾಟಕ್ಕೆ ಬಂದವರಿಗೆಲ್ಲ 'ವಿನಯ'ದ ವಿಶೇಷತೆಯೇ, ಹಿರಿಮೆಯೇ ಅರಿವಾಗುತ್ತದೆ. ತನ್ನ ವಿನಯವಂತಿಕೆಯಿಂದಾಗಿಯೇ ವಿನಯ ಹೆಗ್ಡೆಯವರು ಬಹುಜನಕ್ಕೆ ಬಹುಬೇಗನೇ ಆಪ್ತರಾಗುತ್ತಾರೆ. ಈ 'ವಿನಯ' - ಹೆಗ್ಡೆಯವರ ದೌರ್ಬಲ್ಯವಲ್ಲ; ಅದು ಅವರ ಸಾಮರ್ಥ್ಯ. ಯಾರಾದರೂ ಇದನ್ನು ದೌರ್ಬಲ್ಯವೆಂದು ತಿಳಿದುಕೊಂಡರೆ, ಸ್ವಪ್ರಯೋಜನಾಕಾಂಕ್ಷಿಗಳಾದರೆ, ವಿನಯ ಹೆಗ್ಡೆಯವರು ಆಗ 'ವಜ್ರಾದಪೀ ಕಠೋರಾಣಿ'ಯಾಗುತ್ತಾರೆ. 'ವಜ್ರಾದಪೀ ಕಠೋರಾಣಿ, ಮೃದೂನೀ ಕುಸುಮಾದಪೀ' ಎಂಬ ಮಾತಿದೆ. ವಿನಯ ಹೆಗ್ಡೆಯವರು ಕಠೋರರೂ ಹೌದು; ಕುಸುಮ ಕೋಮಲರೂ ಹೌದು. ಅವರು ಯಾವತ್ತೂ ತಮ್ಮ ನೌಕರರನ್ನು - ನೌಕರರೆಂದು ಕಂಡವರೇ ಅಲ್ಲ. ತನ್ನ ಕುಟುಂಬದ ಬಂಧುಗಳೆಂದು ತಿಳಿದವರು. ಅವರ ನೋವು - ನಲಿವುಗಳಲ್ಲಿ ಪಾಲ್ಗೊಂಡವರು. ತಪ್ಪಿದಾಗ ತಿದ್ದಿ ಮುನ್ನಡೆಸಿದವರು. ತಂದೆಯವರ ಕನಸಿನ ಮಹಾಸೌಧ (ಶಿಕ್ಷಣ ಸಂಸ್ಥೆ)ವನ್ನು ನಿರ್ಮಿಸಿ ಧನ್ಯತೆಯನ್ನು ಕಂಡವರು. ಮಾತಾ ಪಿತೃಗಳ ಋಣ ತೀರಿಸಿದವರು.

ಎನ್. ವಿನಯ ಹೆಗ್ಡೆ ಅವರಿಗೆ ತಂದೆ ಸದಾನಂದ ಹೆಗ್ಡೆಯವರು ದೀಪದರ್ಶಿಯಾಗಿದ್ದರು. ಅವರ ತಾಯಿ ಮೀನಾಕ್ಷಿ ಹೆಗ್ಡೆಯವರು ಈ ದೀಪ ಆರದಂತೆ ಸದಾ ಎಣ್ಣೆಯನ್ನು ಹೊಯ್ಯುತ್ತಿದ್ದರು. ಹೀಗಾಗಿಯೇ ಎನ್. ವಿನಯ ಹೆಗ್ಡೆಯವರು ಕಟ್ಟಿದ ಸಂಸ್ಥೆಗಳಿಗೆ ಅವರ ತಂದೆ - ತಾಯಿಯರ ಹೆಸರು, ಬಂಧು ಬಳಗದವರ ಹೆಸರನ್ನಿಟ್ಟು ಅವರ ಕ್ರತುಚೇತನಗಳಿಗೆ ಗೌರವ ಸಮರ್ಪಿಸಿದ್ದಾರೆ. ಸರಳ - ಸಜ್ಜನಿಕೆಯ ಸಾಕಾರಮೂರ್ತಿ ಎನ್. ವಿನಯ ಹೆಗ್ಡೆಯವರ ಸಮರ್ಥ ನಾಯಕತ್ವದಿಂದಾಗಿ ನಿಟ್ಟೆ ವಿದ್ಯಾಸಂಸ್ಥೆಯು ದೇಶ - ವಿದೇಶಗಳಲ್ಲಿ ಗುರುತಿಸಲ್ಪಟ್ಟಿರುವುದು - ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನಮಗೆಲ್ಲ ಹೆಮ್ಮೆಯ ಸಂಗತಿ.

ನಿಟ್ಟೆ ವಿದ್ಯಾಸಂಸ್ಥೆಯ ಅನ್ನ ತಿಂದು ಬದುಕುತ್ತಿರುವ ನಾನು ವಿನಯ ಹೆಗ್ಡೆಯವರ ಕುರಿತು, ಅವರ ಹೃದಯ ವೈಶಾಲ್ಯತೆಯ ಕುರಿತು ಒಂದು ಮಾತನ್ನು ಇಲ್ಲಿ ಉಲ್ಲೇಖಿಸದೇ ಇದ್ದರೆ ಪ್ರಾಯಶಃ ಕೃತಘ್ನಳೇ ಸರಿ. 1994ರಲ್ಲಿ ನಿಟ್ಟೆ ವಿದ್ಯಾಸಂಸ್ಥೆಗೆ ಕೆಲಸಕ್ಕೆ ಸೇರಿದಾಗ

ನಾನು ಕೇವಲ ಬಿ.ಕಾಂ. ಪದವೀಧರೆ. ಕಾಲೇಜಿನ ಕಛೇರಿಯಲ್ಲಿ ಗುಮಾಸ್ತಳಾಗಿ ಕೆಲಸ ನಿರ್ವಹಿಸುತ್ತಿದ್ದ ನನಗೆ ಆಕಸ್ಮಿಕವಾಗಿ ಅಧ್ಯಾಪಿಕೆಯಾಗುವ ಅವಕಾಶವನ್ನು ಕಲ್ಪಿಸಿದವರು ಆಗಿನ ಪ್ರಾಂಶುಪಾಲರಾಗಿದ್ದ ಶ್ರೀ ಕೆ. ಅರವಿಂದ ಹೆಗ್ಡೆಯವರು ಹಾಗೂ ಶ್ರೀ ಎನ್. ವಿನಯ ಹೆಗ್ಡೆಯವರು. ಎಂದಿನಂತೆ ಒಂದು ಸಂಜೆ ನಿಟ್ಟೆಯ ಮಹಿಳಾ ವಸತಿ ಗೃಹದಿಂದ 'ಸನ್ಮತಿ ಭವನ' (ಕೆ.ಎಸ್. ಹೆಗ್ಡೆಯವರ ಸ್ಮಾರಕ ಸ್ಥಳ)ದತ್ತ ಹೆಜ್ಜೆ ಹಾಕುತ್ತಿದ್ದೆ. ಇದ್ದಕ್ಕಿದ್ದಂತೆ ಎನ್. ವಿನಯ ಹೆಗ್ಡೆಯವರ ಕಾರು ನಿಂತಿತು. ಅನಿರೀಕ್ಷಿತವಾಗಿ ಬಂದ ಕಾರಿನಲ್ಲಿದ್ದ ಹೆಗ್ಡೆಯವರನ್ನು ಕಂಡು ವಂದಿಸಿದೆ. 'ನಿಮ್ಮನ್ನು ಟೀಚರ್ ಆಗಿ ನೇಮಕ ಮಾಡಿದ್ದೇನೆ. ಎರಡು ವಾರದಲ್ಲಿ ನಿಮಗೆ ನೇಮಕಾತಿ ಪತ್ರ ಸಿಗುತ್ತದೆ' ಎಂದಿನಂತೆ ಮೃದು ಧ್ವನಿ. ನನ್ನ ಕಿವಿಗಳನ್ನು ನಾನೇ ನಂಬಲಾಗಲಿಲ್ಲ. ಕಣ್ಣಿನಲ್ಲಿ ಒಂದೇ ಸವನೆ ನೀರು ಸುರಿದಿತ್ತು. ಕೊಂಚ ಸಾವರಿಸಿಕೊಂಡು ಮತ್ತೆ ಉತ್ತರಿಸಿದೆ. 'ಸರ್, ನಾನು ಟ್ರೈನ್ಡ್ (ತರಬೇತಿ ಹೊಂದಿದವಳು) ಅಲ್ಲ. ನನಗೇಕೆ ಶಿಕ್ಷಕಿಯ ಕೆಲಸ ಕೊಡುತ್ತೀರಿ?' ತಕ್ಷಣ ಹೆಗ್ಡೆಯವರೆಂದರು - 'ನಮಗೆ ವಿದ್ಯಾರ್ಹತೆ ಮುಖ್ಯವಲ್ಲಮ್ಮ - ಸಾಮರ್ಥ್ಯ ಮುಖ್ಯ'. ಕಾರು ಹೊರಟಿತು. ನನ್ನ ದಾರಿ ನಾನು ಹಿಡಿದೆ. ಉದ್ಯೋಗ ಗಿಟ್ಟಿಸಲು ವಿದ್ಯಾರ್ಹತೆಯೇ ಮಾನದಂಡವಾಗಿರುವ ಇಂದಿನ ಕಾಲದಲ್ಲಿಯೂ ಕೂಡ 'ಸಾಮರ್ಥ್ಯ'ವನ್ನು ಗುರುತಿಸುವ ವ್ಯಕ್ತಿಯೊಬ್ಬರು ಇದ್ದಾರಲ್ಲ! ಎಂದುಕೊಂಡು ಮನಸ್ಸಿನಲ್ಲಿಯೇ ಅವರಿಗೆ ಕೃತಜ್ಞತೆ ಸಲ್ಲಿಸಿದೆ.

ಜವಾನ, ಗುಮಾಸ್ತ, ಶಿಕ್ಷಕ, ಪ್ರಾಂಶುಪಾಲರೆನ್ನುವ ಭೇದವಿಲ್ಲದೆ, ಹಿರಿ-ಕಿರಿಯರೆನ್ನುವ ತಾರತಮ್ಯವಿಲ್ಲದೆ, ಜಾತಿ-ಮತ-ಪಂಥಗಳ ಅಂತರವಿಲ್ಲದೆ, ಎಲ್ಲರನ್ನೂ ಪ್ರೀತಿಯಿಂದ ಕಾಣುವ ಎನ್. ವಿನಯ ಹೆಗ್ಡೆಯವರ ಅಂತರಂಗ ವೈಶಾಲ್ಯಕ್ಕೆ ನಾವು ಯಾವತ್ತೂ ತಲೆಬಾಗಲೇ ಬೇಕು.

ಕೆ.ಎಸ್. ಹೆಗ್ಡೆಯವರ ಜ್ಯೇಷ್ಠ ಪುತ್ರರಾದ ಪ್ರಸನ್ನ ಹೆಗ್ಡೆಯವರು ಭಾರತೀಯ ನೌಕಾದಳದಲ್ಲಿ ನೌಕಾದಿಪತಿಯಾಗಿದ್ದುಕೊಂಡು, ರಷ್ಯಾ, ಮಾಸ್ಕೋ ದೇಶಗಳ ನೌಕಾ ಸೇನೆಯ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದರು. ಪ್ರಸ್ತುತ ಲೆಮಿನಾ ಫೌಂಡ್ರೀಸ್ ಹಾಗೂ ಲೆಮಿನಾ ಸಸ್ಪೆನ್‌ಶನ್ಸ್ ಲಿಮಿಟೆಡ್ ಕೈಗಾರಿಕಾ ಸಂಸ್ಥೆಗಳನ್ನು ಮುನ್ನಡೆಸುತ್ತಿದ್ದಾರೆ.

'ತಾಯಿಯಂತೆ ಮಗಳು, ನೂಲಿನಂತೆ ಸೀರೆ' ಎಂಬ ಮಾತು ನಮ್ಮಲ್ಲಿ ರೂಡಿಯಲ್ಲಿದೆ. ಅನೇಕ ವೇಳೆ 'ತಂದೆಯಂತೆ ಮಗ' ಎನ್ನುವ ಮಾತು ಕೂಡ ಸಾರ್ಥಕವಾಗುವುದನ್ನು ನಾವು ಕಂಡಿದ್ದೇವೆ. ಕೆ.ಎಸ್. ಹೆಗ್ಡೆಯವರ ಹಿರಿಯ ಮಗ ಪ್ರಸನ್ನ ಹೆಗ್ಡೆಯವರು ಕೈಗಾರಿಕಾ ಸಂಸ್ಥೆಯನ್ನು ಸ್ಥಾಪಿಸಿ, ಊರಿನ ಹಾಗೂ ಸುತ್ತಮುತ್ತಲಿನ ಜನತೆ ಆರ್ಥಿಕವಾಗಿ ಸಬಲರಾಗುವುದಕ್ಕೆ ಸಹಕರಿಸಿದರು. ಎರಡನೆಯ ಮಗ ವಿನಯ ಹೆಗ್ಡೆಯವರು ನಿಟ್ಟೆ ವಿದ್ಯಾಸಂಸ್ಥೆಯನ್ನು ಬೆಳೆಸುವ - ಮುನ್ನಡೆಸುವ ಮೂಲಕ ತನ್ನ ತಂದೆಯವರು ಆರಂಭಿಸಿದ ವಿದ್ಯಾ ದಾನವನ್ನು ಮುಂದುವರಿಸಿದರು. ಗ್ರಾಮೀಣ ಪ್ರದೇಶದ ಮಕ್ಕಳನ್ನು ಅಜ್ಞಾನವೆಂಬ ಕತ್ತಲಿನಿಂದ ಜ್ಞಾನವೆಂಬ ಬೆಳಕಿನೆಡೆಗೆ ಕೊಂಡೊಯ್ದರು. ಮೂರನೆಯವರಾದ ಎನ್. ಸಂತೋಷ ಹೆಗ್ಡೆಯವರು ತನ್ನ ತಂದೆಯವರಂತೆಯೇ ಕಾನೂನು ರಂಗ ಆರಿಸಿಕೊಂಡರು; ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಇದೀಗ ನಮ್ಮ ರಾಜ್ಯದ ಲೋಕಾಯುಕ್ತರಾಗಿದ್ದುಕೊಂಡು ಭ್ರಷ್ಟ ರಾಜಕಾರಣಿಗಳ, ಅಧಿಕಾರಿಗಳ ಅವ್ಯವಹಾರವನ್ನು ಬಯಲಿಗೆಳೆಯುತ್ತಿದ್ದಾರೆ. ರಕ್ತಗತವಾಗಿ ಬಂದಿರುವ 'ಅನ್ಯಾಯದ ವಿರುದ್ಧ ಪ್ರತಿಭಟಿಸುವ' ಗುಣದಿಂದಾಗಿ ಸಂತೋಷ ಹೆಗ್ಡೆಯವರು ಯಾವುದೇ ಅಂಜಿಕೆಯಿಲ್ಲದೆ, ಯಾವುದೇ ಪಕ್ಷ - ಸಂಬಂಧಗಳನ್ನು ಲೆಕ್ಕಿಸದೆ ಅನ್ಯಾಯ - ಅವ್ಯವಹಾರಗಳನ್ನು ಬಯಲಿಗೆಳೆಯುತ್ತಿದ್ದಾರೆ. ದೇಶವನ್ನು ಪೆಡಂಭೂತವಾಗಿ ಕಾಡುತ್ತಿರುವ ಭ್ರಷ್ಟಾಚಾರ - ಲಂಚಗುಳಿತನದಿಂದಾಗಿ ನಮ್ಮ ದೇಶ ಖಂಡಿತವಾಗಿ ಅಭಿವೃದ್ಧಿ ಸಾದಿಸಲಾರದು ಎಂಬುದರ ಕಟು ಸತ್ಯವನ್ನು ಸಂತೋಷ ಹೆಗ್ಡೆಯವರು ಸರಿಯಾಗಿ ಅರ್ಥೈಸಿಕೊಂಡಿದ್ದಾರೆ.

ಇಂದು ಈ ಸಮಾಜದ ಭ್ರಷ್ಟರ ಪಾಲಿಗೆ ದುಃಸ್ವಪ್ನವಾಗಿ ಕಾಡುತ್ತಿರುವ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆಯವರು ವಕೀಲಿ ವೃತ್ತಿಗೆ ಬಂದುದು ಒಂದು ಆಕಸ್ಮಿಕ. ತಂದೆ ನ್ಯಾಯಮೂರ್ತಿಯಾಗಿದ್ದರೂ ಮಕ್ಕಳು ವಕೀಲಿ ವೃತ್ತಿಗೆ ಬರಬೇಕೆಂದು ಎಂದೂ ಬಯಸಿರಲಿಲ್ಲ. ತಾಯಿಯ ಆಸೆಯಂತೆ ಮೆಡಿಕಲ್ ಕಾಲೇಜು ಸೇರಿದ್ದ ಸಂತೋಷ್ ಹೆಗ್ಡೆಯವರು ತನಗಿಂತ ಮೂರು-ನಾಲ್ಕು ವರ್ಷ ಚಿಕ್ಕವರಾಗಿದ್ದ ಸಹಪಾಠಿಗಳೊಂದಿಗೆ ಕಲಿಯುವುದು ಕಷ್ಟವೆನ್ನಿಸಿ ತನ್ನ ತಂದೆಯವರಿಗೆ ತಿಳಿಸಿದರು. ಆಗ ಕೆ.ಎಸ್. ಹೆಗ್ಡೆಯವರು ವಿದ್ಯಾಭ್ಯಾಸದ ಆಯ್ಕೆಯ ನಿರ್ಧಾರವನ್ನು ಮಗನಿಗೇ ವಹಿಸಿದರು. ಪದವಿ ಮುಗಿಸಿ, ಉತ್ತಮ ಕೆಲಸ ಗಿಟ್ಟಿಸಬೇಕೆಂಬ ಒಂದೇ ಉದ್ದೇಶದಿಂದ ಸಂತೋಷ್ ಹೆಗ್ಡೆಯವರು ಕಾನೂನು ರಂಗ ಸೇರಿದರು.

ಕರ್ನಾಟಕದ ಅಡ್ವೊಕೇಟ್ ಜನರಲ್ ಹುದ್ದೆಯಿಂದ ಹಿಡಿದು ಅಡಿಶನಲ್ ಸಾಲಿಸಿಟರ್ ಜನರಲ್, ಸಾಲಿಸಿಟರ್ ಜನರಲ್, ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದರು. ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾಗುವ ವಿಷಯದಲ್ಲಿ ಕೆ.ಎಸ್. ಹೆಗ್ಡೆಯವರು ಅನುಭವಿಸಿದ್ದ ನೋವಿನ ಅರಿವು ಮಗನಲ್ಲೂ ಇತ್ತು. ಹೀಗಾಗಿ, ಸಂತೋಷ್ ಹೆಗ್ಡೆಯವರು ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯ ಹುದ್ದೆಯನ್ನು ಸ್ವೀಕರಿಸಲು ಹಿಂದೆ-ಮುಂದೆ ನೋಡಿದ್ದರು. ಅನಂತರ ತಾಯಿ ಮೀನಾಕ್ಷಿ ಹೆಗ್ಡೆಯವರ ಆಣತಿಯಂತೆ ಹೊಣೆ ಹೊತ್ತರು. ನಿವೃತ್ತರಾದ ಬಳಿಕ ದೂರಸಂಪರ್ಕ ವ್ಯಾಜ್ಯ ಪರಿಹಾರ ನ್ಯಾಯ ಮಂಡಳಿಯ ಅಧ್ಯಕ್ಷರಾದರು. ಇಲ್ಲಿ ಇವರಿಗೆ ಸಾಕಷ್ಟು ಸಂಭಾವನೆ ಸಿಗುತ್ತಿತ್ತು. ಆದುದರಿಂದಲೇ ಸಂತೋಷ್ ಹೆಗ್ಡೆಯವರಿಗೆ ದೇಶ ಸುತ್ತುವ ಹವ್ಯಾಸ. ಇದುವರೆಗೆ ಇವರು ಸುಮಾರು 35 ದೇಶಗಳನ್ನು ಸುತ್ತಿದ್ದಾರೆ. ದೇಶ ಸುತ್ತಿ ನೋಡು; ಕೋಶ ಓದಿ ನೋಡು ಎಂಬ ಮಾತಿನಂತೆ ಅನೇಕ ದೇಶಗಳನ್ನು ಸುತ್ತಿ ತಮ್ಮ ಅನುಭವದ ಬುತ್ತಿಯನ್ನು ತುಂಬಿಕೊಂಡಿದ್ದಾರೆ, ಎನ್. ಸಂತೋಷ್ ಹೆಗ್ಡೆಯವರು.

ಇವರು ಕರ್ನಾಟಕದ ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಿದಂದಿನಿಂದ ಹಲವು ವಿವಾದಗಳ ಕೇಂದ್ರಬಿಂದುವಾಗಿದ್ದಾರೆ. 34 ವರ್ಷಗಳ ತಮ್ಮ ವೃತ್ತಿ ಜೀವನದಲ್ಲಿ ಆರೋಪ ಹಾಗೂ ವಿವಾದಗಳು ಇವರ ಹತ್ತಿರ ಸುಳಿದಿರಲಿಲ್ಲ. ಎಲ್ಲೆಂದರಲ್ಲಿ ಪ್ರಶಂಸೆಗಳ ಸುರಿಮಳೆ. ತನ್ನ ನೆಚ್ಚಿನ ಸ್ಥಳವಾದ ಬೆಂಗಳೂರಿನಲ್ಲಿರಬೇಕು ಎಂಬ ಏಕೈಕ ಉದ್ದೇಶದಿಂದ ಲೋಕಾಯುಕ್ತರ ಹುದ್ದೆಯನ್ನು ಅಲಂಕರಿಸಲು ಒಪ್ಪಿಗೆ ನೀಡಿದಂದಿನಿಂದ ವಿವಾದಗಳದ್ದೇ ಸರಮಾಲೆ. ಇಂದು ವಿವಾದಗಳು ಅವರಿಂದ ಸ್ವಲ್ಪ ಮಟ್ಟಿಗೆ ದೂರ ಸರಿದಿದ್ದರೂ, ಹುದ್ದೆಯನ್ನು ನೀಡಿದವರ, ಅವರ ವಿರೋದಿಗಳ ಹಾಗೂ ಸಮಾಜದ ಒಂದು ವರ್ಗದವರ ಕೆಂಗಣ್ಣಿಗೆ ಸಂತೋಷ್ ಹೆಗ್ಡೆಯವರು ಗುರಿಯಾಗಿದ್ದಾರೆ. ಆದರೆ, ಅಂಜಿಕೆ ಹಿಂದೆ ಸರಿಯುವ ಜಾಯಮಾನ ಇವರದ್ದಲ್ಲ.

ಸಿಂಹದ ಹೊಟ್ಟೆಯಲ್ಲಿ ಸಿಂಹದ ಮರಿಯೇ ಹುಟ್ಟುತ್ತದೆ ಎನ್ನುವಂತೆ ಯಾವುದೇ ಒತ್ತಡಗಳಿಗೆ ಮಣಿಯದ, ನ್ಯಾಯೋಚಿತ ತೀರ್ಮಾನಗಳಿಗೆ ಇನ್ನೊಂದು ಹೆಸರಾಗಿದ್ದ ಕೆ.ಎಸ್. ಹೆಗ್ಡೆಯವರ ಮಗನಾಗಿ ಸಂತೋಷ್ ಹೆಗ್ಡೆಯವರು ಹುಟ್ಟಿರುವುದು ಈ ಮಣ್ಣಿನ ಪುಣ್ಯ ವಿಶೇಷ - ಎಂದರೆ ಅತಿಶಯೋಕ್ತಿಯಾಗಲಾರದು. ಕಾನೂನಲ್ಲಿರುವುದನ್ನು ಮಾತ್ರ ನಾನು ನಿರ್ವಹಿಸುತ್ತೇನೆ. ಅದರ ಹೊರತಾಗಿ ನಾನೇನೂ ಮಾಡುವುದಿಲ್ಲ. ಈ ಕಾರಣಕ್ಕಾಗಿ ಯಾರ ವಿರೋಧ ಎದುರಾದರೂ ಚಿಂತೆಯಿಲ್ಲ. ಈ ಹುದ್ದೆಯಿಂದ ನಾನೇನೂ ಸಂಪಾದನೆ ಮಾಡಬೇಕಾಗಿಲ್ಲ. ಸಮಾಜದಲ್ಲಿ ನೊಂದವರಿಗೆ, ಶೋಷಿತರಿಗೆ ನನ್ನ ಕೈಲಾದಷ್ಟು ಸಹಾಯ ಮಾಡುವುದೇ ನನ್ನ ಗುರಿ. ಹಿಂದಿನ ಹುದ್ದೆಗಳ ನಿರ್ವಹಣೆಯಿಂದ ಗಳಿಸಿರುವ ಹಣ ಸಾಕು ಎಂದು ಹೇಳುವ ಸಂತೋಷ್ ಹೆಗ್ಡೆಯವರು ಆತ್ಮಸ್ಥೆ ರ್ಯದ, ಆತ್ಮ ತೃಪ್ತಿಯ ಬದುಕು ನಿಜಕ್ಕೂ ಇತರರಿಗೆ ಮಾದರಿಯಾಗಿದೆ. ಮಾತ್ರವಲ್ಲ, ಅಧಿಕಾರಿಯಾಗುವುದೇ ಹಣ ಮಾಡುವುದಕ್ಕಾಗಿ ಎಂಬ ಮನೋಭಾವ ಹೊಂದಿರುವ ಭ್ರಷ್ಟ ಅಧಿಕಾರಿಗಳು ನಾಚುವಂತಿದೆ.

ಕೆ.ಎಸ್. ಹೆಗ್ಡೆ ಹಾಗೂ ಮೀನಾಕ್ಷಿ ಹೆಗ್ಡೆ ದಂಪತಿಯ 6 ಜನ ಮಕ್ಕಳಲ್ಲಿ ಮೂವರು ಪುತ್ರಿಯರು. ಅವರ ಮಗಳು ನಿರ್ಮಲಾ ಅಡ್ಯಂತಾಯ ಪ್ರಸ್ತುತ ಮುಂಬಯಿಯಲ್ಲಿ ವಾಸವಾಗಿದ್ದಾರೆ. ಆಶಾ ಅಜಿಲ ಹಾಗೂ ಉಷಾ ಪೂಂಜ ಅವರು ಅವಳಿ ಸಹೋದರಿಯರು. ಅಮೇರಿಕದಲ್ಲಿ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದ ಉಷಾ ಪೂಂಜ ಅವರು ಅನಾರೋಗ್ಯದಿಂದಾಗಿ ಇಹಲೋಕದಿಂದ ದೂರವಾಗಿದ್ದಾರೆ. ಆದರೂ ಅವರ ಹೆಸರಿನಲ್ಲಿರುವ 'ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್, ಮಂಗಳೂರು' ಸಂಸ್ಥೆಯು ಪ್ರತಿದಿನವೂ ನಮಗೆ ಅವರನ್ನು ನೆನಪಿಸುತ್ತಿದೆ. ಆಶಾ ಅಜಿಲ ಅವರು ಹೊರದೇಶದಲ್ಲಿದ್ದುಕೊಂಡು ಅನೇಕ ಮಹಿಳಾ ಸಂಘಟನೆಗಳಲ್ಲಿ ಕಾರ್ಯ ನಿರ್ವಹಿಸಿದವರು. ತಮ್ಮ ಪತಿಯ ನಿಧನದ ಬಳಿಕ ಇದೀಗ ಮಂಗಳೂರಿನಲ್ಲಿ ನೆಲೆಸಿದ್ದಾರೆ. ಶಿಕ್ಷಣದ ಬಗೆಗೆ ಸಾಕಷ್ಟು ಕಾಳಜಿ ಹೊಂದಿದ್ದ, ಬಹಳಷ್ಟು ಪ್ರಾಮುಖ್ಯತೆ ನೀಡಿದ್ದ ಕೌಡೂರು ಸದಾನಂದ ಹೆಗ್ಡೆಯವರ ಮಕ್ಕಳು - ಮೊಮ್ಮಕ್ಕಳೂ ಸೇರಿದಂತೆ ಇಡೀ ಕುಟುಂಬ ವಿದ್ಯಾವಂತ ಕುಟುಂಬ. ಹೀಗಾಗಿ ಕೆ.ಎಸ್. ಹೆಗ್ಡೆಯವರ ಪರಂಪರೆಯ ಮುನ್ನಡೆ ಈ ನಾಡಿಗೆ ಮಾದರಿಯೆನ್ನಿಸಿದೆ.

**ತ್ಯಾಗಮಯೀ ಮಾತೆ – ಮೀನಾಕ್ಷಿ ಹೆಗ್ಡೆಯವರು**

ಭಾರತೀಯ ಸಂಸ್ಕೃತಿ ಭವ್ಯ, ದಿವ್ಯ ಅನ್ನುವವರೆಲ್ಲ ಅದು ಉಳಿಯುವುದೂ ಬೆಳೆಯುವುದೂ ಸ್ತ್ರೀಯರಿಂದ ಅನ್ನುತ್ತಾರೆ. ಇದು ಅಕ್ಷರಶಃ ಸತ್ಯ. 'ಒಬ್ಬ ಪುರುಷನ ಯಶಸ್ಸಿನ ಹಿಂದೆ ಒಬ್ಬಳು ಸ್ತ್ರೀ ಖಂಡಿತವಾಗಿಯೂ ಇರುತ್ತಾಳೆ' ಎಂದು ನಮ್ಮ ಹಿರಿಯರು ಹೇಳಿರುವ ಮಾತನ್ನು ನಾವು ಖಂಡಿತವಾಗಿ ಒಪ್ಪಲೇಬೇಕು. ಕೆ.ಎಸ್. ಹೆಗ್ಡೆಯವರ ಎಲ್ಲ ಸಾಧನೆಗಳ ಹಿಂದೆ ಅವರ ಪತ್ನಿ ಮೀನಾಕ್ಷಿ ಹೆಗ್ಡೆಯವರ ಬಹುದೊಡ್ಡ ತ್ಯಾಗವಿದೆ ಎಂಬುದನ್ನು ನಾವೆಂದೂ ಮರೆಯಲಾಗದು. ತನ್ನ ಗಂಡನ ಪ್ರತಿಯೊಂದು ಯೋಚನೆ - ಯೋಜನೆಗಳ ಸ್ಫೂರ್ತಿಯಾಗಿದ್ದುಕೊಂಡು, ಜೀವನದಲ್ಲಿ ಅವರ ನೆರಳಿನಂತೆ ಹಿಂಬಾಲಿಸಿದರು.

ಇಡೀ ಮನೆಯ ಜವಾಬ್ದಾರಿಯನ್ನು ಹೊತ್ತು, 'ಅತಿಥಿ ದೇವೋಭವ' ಎಂಬುದನ್ನು ತಿಳಿದು - ಮನೆಗೆ ಬರುವ ಅತಿಥಿಗಳನ್ನು, ಕೆ.ಎಸ್. ಹೆಗ್ಡೆಯವರ ಸ್ನೇಹಿತರನ್ನು ಆದರದಿಂದ ಸತ್ಕರಿಸಿದರು. ತನ್ನ ಅಕ್ಕಪಕ್ಕದವರ (ನೆರೆಹೊರೆಯವರ) ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸಿದರು. ತಾನು ಉಣ್ಣುವುದರ ಜೊತೆಯಲ್ಲಿ ಕಷ್ಟದಲ್ಲಿದ್ದವರಿಗೆ - ಬಡವರಿಗೆ ಉಣಬಡಿಸುತ್ತಿದ್ದರು, ಸಹಕರಿಸುತ್ತಿದ್ದರು. ಇವರ ಬಳಿಗೆ ಸಹಾಯ ಕೇಳಿ ಬಂದ ಯಾವನೇ ಆಗಲಿ, ಬರಿಗೈಯಲ್ಲಿ ಹಿಂದಿರುಗುತ್ತಿರಲಿಲ್ಲ. ಈ ಕಾರಣದಿಂದಾಗಿಯೇ ಅವರು ಊರವರ ಮಾತೆಯಾಗಿದ್ದರು. ತನ್ನ ಮಕ್ಕಳನ್ನು ಜವಾಬ್ದಾರಿಯಿಂದ ಬೆಳೆಸಿ, ಸಮಾಜದ ಜನ ಅವರನ್ನು ಗುರುತಿಸುವಂತಹ ವ್ಯಕ್ತಿಗಳನ್ನಾಗಿ ರೂಪಿಸಿದರು. ಮಕ್ಕಳೆಲ್ಲರೂ ಅಮ್ಮನ ಜೊತೆ ಹೆಚ್ಚು ಸಲುಗೆಯಿಂದ ಇರುತ್ತಿದ್ದರು. ಅಪ್ಪನನ್ನು ಕಂಡರೆ ಅವರಿಗೆಲ್ಲ ಭಯಮಿಶ್ರಿತ ಗೌರವವಿತ್ತು.

ಕೆ.ಎಸ್. ಹೆಗ್ಡೆಯವರನ್ನು ಹತ್ತಿರದಿಂದ ಕಂಡು ಮಾತನಾಡುವ ಅವಕಾಶ ನನಗೆ ಯಾವತ್ತೂ ಸಿಕ್ಕಿರಲಿಲ್ಲ. ಆದರೆ ಮೀನಾಕ್ಷಿ ಹೆಗ್ಡೆಯವರ ಸ್ಪರ್ಶದ ಹರುಷವನ್ನು ನಾನೆಂದೂ ಮರೆಯುವಂತಿಲ್ಲ. 1995ರಲ್ಲಿ ನಾನು ನಿಟ್ಟೆ ವಿದ್ಯಾಸಂಸ್ಥೆಯಲ್ಲಿಯೇ ದುಡಿಯುತ್ತಿದ್ದ ಸಂದರ್ಭದಲ್ಲಿ ಮೀನಾಕ್ಷಿ ಹೆಗ್ಡೆಯವರನ್ನು ಕಾಣುವುದಕ್ಕಾಗಿ ನಿಟ್ಟೆಯಲ್ಲಿನ ಅವರ ಮನೆಗೆ ಹೋಗಿದ್ದೆ. ಬಾಗಿಲು ತೆರೆಯುತ್ತಿದ್ದಂತೆ ನನಗೆ ಬಿಳಿಸೀರೆಯುಟ್ಟಿದ್ದ ಮೀನಾಕ್ಷಿ ಹೆಗ್ಡೆಯವರ ನಗುಮೊಗದ ದರ್ಶನವಾಯಿತು. ತಕ್ಷಣ ನನಗೆ ನೆನಪಾಗಿದ್ದು ಇಡೀ ಜಗತ್ತಿನ ಮಾತೆ - ಮದರ್ ಥೆರೆಸಾ ಅವರು. ಮೀನಾಕ್ಷಿ ಹೆಗ್ಡೆಯವರಿಗೆ ನನ್ನನ್ನು ನಾನು ಪರಿಚಯಿಸಿಕೊಂಡೆ. ಕೆ.ಎಸ್. ಹೆಗ್ಡೆಯವರ ಕುರಿತು ನಾನು 'ಮುಂಗಾರು' ದೈನಿಕದಲ್ಲಿ ಬರೆದಿದ್ದ ಲೇಖನವನ್ನು ಓದಿ ಹೇಳುವಂತೆ ನನ್ನಲ್ಲಿ ಕೇಳಿಕೊಂಡರು. ಲೇಖನ ಓದಿ ಮುಗಿಸುತ್ತಿದ್ದಂತೆ ನನ್ನನ್ನು ಬಿಗಿದಪ್ಪಿಕೊಂಡರು. ಕೆನ್ನೆಗಳ ತುಂಬ ಲೆಕ್ಕವಿಲ್ಲದಷ್ಟು ಸಿಹಿಮುತ್ತುಗಳನ್ನು ಕೊಟ್ಟರು. ನಿರೀಕ್ಷಿಸದೆ ಇದ್ದ ಈ ಸ್ಪರ್ಶದ ಅನುಭವ ನಾನೆಂದೂ ಮರೆಯಲಾಗದಂಥದ್ದು! ಮೊತ್ತಮೊದಲ ಬಾರಿಗೆ ಭೇಟಿಯಾದ ನನ್ನನ್ನೇ ಇಷ್ಟು ಪ್ರೀತಿಸುತ್ತಿರಬೇಕಾದರೆ - ತನ್ನ ಅಕ್ಕಪಕ್ಕದ ಜನರನ್ನು ಅವರೆಷ್ಟು ಪ್ರೀತಿಯಿಂದ ಕಂಡಿರಲಿಕ್ಕಿಲ್ಲ? ಅನ್ನುವ ಪ್ರಶ್ನೆ ನನ್ನನ್ನು ಆಗಲೇ ಕಾಡಿತ್ತು.

ಕಾಪಿ - ತಿಂಡಿ, ಕೊನೆಗೆ ಊಟ ಎಲ್ಲವನ್ನೂ ಮುಗಿಸಿ - ಸಾಯಂಕಾಲದ ಹೊತ್ತಿಗೆ ನಾನು ಅವರ ಮನೆಯಿಂದ ಹಿಂತಿರುಗಿ ಬಂದಿದ್ದೆ. ಅವರುಟ್ಟ ಬಿಳಿಯ ಸೀರೆಯಷ್ಟೇ ಅವರ ಮನೆ - ಮನಸ್ಸು ಎಲ್ಲವೂ ಶುಭ್ರವಾಗಿತ್ತು. ಇಂಥ ನಿಷ್ಕಲ್ಮಶ ಹೃದಯದ ಮಾತೆ ತನ್ನ ಸ್ವಾರ್ಥವೆಲ್ಲವನ್ನು ಕಳಚಿ, ಗಂಡನ ಧ್ಯೇಯ - ಧೋರಣೆಗಳನ್ನು ಗೌರವಿಸಿ ಪ್ರೋತ್ಸಾಹಿಸಿದವರು. ಹೀಗಾಗಿಯೇ ಕೆ.ಎಸ್. ಹೆಗ್ಡೆಯವರು ಬಹು ಎತ್ತರದ ಸ್ಥಾನಕ್ಕೇರಿ ಬಹುಮಾನ್ಯರಾದವರು. ಕೆ.ಎಸ್. ಹೆಗ್ಡೆಯವರ ಸಾಧನೆಯ ಹಿಂದೆ ಅವರ ಪತ್ನಿ ಮೀನಾಕ್ಷಿ ಹೆಗ್ಡೆಯವರ ಬಹುದೊಡ್ಡ ತ್ಯಾಗವಿದೆ ಎಂಬುದನ್ನು ನಾವು ಮರೆಯಬಾರದು.

ಪರೋಪಕಾರಾರ್ಥಂ ಇದಂ ಶರೀರಂ ಎನ್ನುವಂತೆ ಪರರ ಉಪಕಾರಕ್ಕಾಗಿಯೇ ತನ್ನ ಜೀವವನ್ನು ಸವೆಸಿದವರು ಮೀನಾಕ್ಷಿ ಹೆಗ್ಡೆಯವರು. ತಮ್ಮ ಆರು ಜನ ಮಕ್ಕಳಿಗೂ ಪರೋಪಕಾರವೇ ಬದುಕಿನ ದೊಡ್ಡ ಆಸ್ತಿ ಎಂಬ ಪಾಠವನ್ನು ಕಲಿಸಿದವರು. ಪ್ರೀತಿ ಬೆಂದ ಬಾಳಿಗೆ ಸಮಾಧಾನ ನೀಡುತ್ತದೆ, ಉದ್ವಿಗ್ನತೆಗೆ ಸಾಂತ್ವನ ನೀಡುತ್ತದೆ. ನಿರಾಶೆಯ ಮುಗಿಲುಗಳನ್ನು ದೂರ ಸರಿಸಿ ಆಶೆಯ ಹೊಂಗಿರಣ ಮೂಡಿಸುತ್ತದೆ. ಪ್ರೀತಿಸುವುದು ಬದುಕಿನ ಚೆಲುವನ್ನು ಇಮ್ಮಡಿಗೊಳಿಸುತ್ತದೆ ಎಂಬ ಸತ್ಯವನ್ನರಿತು ತನ್ನ ಸುತ್ತಣ ಜನರನ್ನೆಲ್ಲ ಪ್ರೀತಿಯಿಂದ ಕಂಡವರು. ಹೆತ್ತ ಮಕ್ಕಳಿಗಷ್ಟೇ ಅಲ್ಲದೆ, ಸುತ್ತಮುತ್ತಲ ಜನರಿಗೆಲ್ಲ ಅಮ್ಮನಾದವರು. ಈ ಮಾತೃ ಹೃದಯದ ವಾತ್ಸಲ್ಯವನ್ನುಂಡವರು ಈಗಲೂ ಆಗಾಗ ಅಮ್ಮನನ್ನು ನೆನೆಸಿಕೊಳ್ಳುತ್ತಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ; ಕಿವಿಯಾರೆ ಕೇಳಿದ್ದೇನೆ.

*ದೀನಾನಾಂ ಸ್ವಗುಣ ಫಲನತಃ ಸಜ್ಜನಾನಾಂ ಕುಟುಂಬೀ*
*ಆದರ್ಶಃ ರಕ್ಷಿತಾನಾಂ ಸುಚರಿತನಿಕಷಃ ಶೀಲವೇಲಾ ಸಮುದ್ರಃ*
*ಸತ್ಕರ್ತಾ ನಾವ ಮಂತಾ ಪುರುಷ ಗುಣನಿದಿರ್ದಕ್ಷಿಣೋದಾರ ಸತ್ತವಂ*
*ಹ್ಯೇಕಃ ಶ್ಲಾಘ್ಯಃ ಸಜೀವತ್ಯದಿಕ ಗುಣತಯಾ ಚೋಚ್ಛವಸಂತೀವ ಚಾನ್ಯೇ*

ಬಡವರಿಗೆ ಕಲ್ಪವೃಕ್ಷದಂತೆ ಸಹಾಯ ಮಾಡುವವನು, ತನ್ನ ಒಳ್ಳೆಯ ಗುಣಗಳೆಂಬ ಹಣ್ಣಿನ ಭಾರದಿಂದ ಬಾಗಿದವನು, ಸಜ್ಜನರಿಂದಾದ ಕುಟುಂಬವುಳ್ಳವನು, ಎಲ್ಲರನ್ನೂ ಸತ್ಕರಿಸುವವನು, ಯಾರನ್ನೂ ಅವಮಾನಗೊಳಿಸದವನು, ಸತ್ಪುರುಷನಲ್ಲಿರಬೇಕಾದ ಎಲ್ಲ ಗುಣಗಳಿಗೂ ನಿದಿಯಾದವನು, ದಾಕ್ಷಿಣ್ಯ ಔದಾರ್ಯಗಳಿಂದ ಕೂಡಿದವನು ಮಾತ್ರ ನಿಜವಾದ ಬದುಕನ್ನು ಬಾಳುತ್ತಾನೆ. ಉಳಿದವರು ಸುಮ್ಮನೆ ಉಸಿರಾಡುತ್ತಾರೆ - ಎನ್ನುವಂತೆ ಮೀನಾಕ್ಷಿ ಹೆಗ್ಡೆಯವರು ನಿಜವಾದ ಬದುಕನ್ನು ಬಾಳಿದವರು. ಇಹಲೋಕದಿಂದ ಭೌತಿಕವಾಗಿ ದೂರವಾದರೂ ನಮ್ಮ ಮನದಂಗಳದಲ್ಲಿ ನಿತ್ಯ ನೂತನರಾಗಿದ್ದಾರೆ.

### ಗ್ರಾಮಾಬಿವೃದ್ಧಿಯ ಕನಸು

'ಗ್ರಾಮ'ವೆಂಬುದು ಒಂದು ರಾಷ್ಟ್ರದ ಬೆನ್ನೆಲುಬು. ಈ ಬೆನ್ನೆಲುಬು ಬಲಿಷ್ಠವಾಗಿದ್ದರೆ ಮಾತ್ರ ಒಂದು ಸದೃಢ ರಾಷ್ಟ್ರದ ನಿರ್ಮಾಣವಾಗಬಲ್ಲುದು ಎಂಬ ತಿಳಿವಳಿಕೆ ಕೆ.ಎಸ್. ಹೆಗ್ಡೆಯವರಲ್ಲಿತ್ತು. ಆದುದರಿಂದಾಗಿ ಸಮಾಜದ ಋಣ ತೀರಿಸಲು ಸಮಾಜಸೇವೆ ಮಾಡಬೇಕೆಂದುಕೊಂಡ ಅವರು ಅಭಿವೃದ್ಧಿಗೆ ಮುನ್ನ ಗ್ರಾಮದ - 'ಬೇಕು'ಗಳ ಕುರಿತು ಮಾಹಿತಿ ಸಂಗ್ರಹಿಸಬೇಕೆಂಬ ಕನಸನ್ನು ಕಂಡು - ನನಸಾಗಿಸಲು ಯತ್ನಿಸಿದರು.

ಸುಪ್ರೀಂಕೋರ್ಟಿನ ನ್ಯಾಯಾಧೀಶರ ಹುದ್ದೆಯಿಂದ ನಿರ್ಗಮಿಸಿದ ಬಳಿಕ ಕೆ.ಎಸ್. ಹೆಗ್ಡೆಯವರ ಚಿತ್ತ ಹರಿದದ್ದು ದಿಲ್ಲಿಯಿಂದ ಹಳ್ಳಿಗೆ. ನಿಟ್ಟೆಯಲ್ಲಿ ನೆಲೆನಿಂತ ಅವರು ಸುತ್ತ ಕಣ್ಣು ಹಾಯಿಸಿದರು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷವಾದರೂ ಗ್ರಾಮೀಣ ಅಭಿವೃದ್ಧಿ ಸಾಕಷ್ಟು ಆಗಿರಲಿಲ್ಲ. ಹೊರಗಣ್ಣಿನಿಂದ ನೋಡಿದರು; ಒಳಗಣ್ಣಿನಿಂದ ಚಿಂತಿಸಿದರು. ಮಾನ್ಯ ಹೆಗ್ಡೆಯವರು ಜನರ ಹತ್ತಿರ ಹೋದರು. ತನ್ನ ಹತ್ತಿರಕ್ಕೂ ಆತ್ಮೀಯತೆಯಿಂದ ಬರಮಾಡಿಕೊಂಡರು. ಸುಖ ಕಷ್ಟ ವಿಚಾರಿಸಿದರು. ಆಗ ತಿಳಿದುಬಂತು - ಸರಕಾರದ ಯೋಚನೆ - ಯೋಜನೆಗಳು ಜನಸಾಮಾನ್ಯರ ಬಳಿಗೆ ಬರಲೇ ಇಲ್ಲವೆಂದು. ಸರಿ; ಕಾರ್ಯಪ್ರವೃತ್ತರಾದರು. ಸರಕಾರದ ಎಲ್ಲ ಇಲಾಖೆಗಳ ಯೋಜನೆಗಳ ಮಾಹಿತಿಯನ್ನು ತರಿಸಿಕೊಂಡರು. ಜನರಿಗೆ ತಿಳಿಯಹೇಳಿದರು. ಯಾವತ್ತೂ ಯೋಜನೆಯ ಪ್ರಯೋಜನ ಪಡೆಯುವುದು ಜನರ ಹಕ್ಕು ಎಂಬುದನ್ನು ತೋರಿಸಿಕೊಟ್ಟರು. ಈ ಯೋಚನೆ - ಯೋಜನೆಗಳ ಮಾಹಿತಿಕೋಶವಾಗಿ 'ಮಾಹಿತಿ ದರ್ಪಣ' ಪ್ರಕಟವಾಯಿತು. 2009 ಕೆ.ಎಸ್. ಹೆಗ್ಡೆಯವರ ಜನ್ಮಶತಾಬ್ದ ಆಚರಣೆಯ ಸಂದರ್ಭದಲ್ಲಿ ಇದನ್ನು ಹೊರ ತರಲಾಯಿತು.

ಸ್ವಾತಂತ್ರ್ಯವಿರುವುದೇ ಸ್ವತಂತ್ರವಾಗಿ, ಸಶಕ್ತವಾಗಿ ಬದುಕುವುದಕ್ಕೆ. ಅದರಲ್ಲೂ ನಮ್ಮದು ಬಹುದೊಡ್ಡ ಪ್ರಜಾಪ್ರಭುತ್ವ. ಸರಕಾರ ಕಾಲ ಕಾಲಕ್ಕೆ ಜನಹಿತಕಾರಿಯಾದ ಯೋಜನೆಗಳನ್ನು ಕೈಗೊಳ್ಳುತ್ತದೆ. ಈ ಯೋಜನೆಯ ಅನುಷ್ಠಾನಕ್ಕೆ ವಿವಿಧ ಇಲಾಖೆಗಳಿರುತ್ತವೆ. ತಮ್ಮ ಹೆಸರಿನ ದೊಡ್ಡ ದೊಡ್ಡ ನಾಮಫಲಕಗಳನ್ನು ತೂಗು ಹಾಕಿಕೊಂಡಿರುವ ಇಲಾಖೆಗಳು ನಿಷ್ಕ್ರಿಯವಾಗಿರುತ್ತವೆ. ತಮ್ಮ ಬಳಿಗೆ ಬರುವವರಿಗೆ, ತಮ್ಮನ್ನು ನೋಡಿಕೊಳ್ಳುವವರಿಗೆ ನೆರವಾಗುತ್ತವೆ. ಎಲ್ಲೋ ಕೆಲವರು ಯೋಜನೆಗಳ ಪೂರ್ಣ ಪ್ರಯೋಜನ ಪಡೆಯುತ್ತಾರೆ. ಗ್ರಾಮೀಣ ಪ್ರದೇಶದ ಜನ ಇದ್ದಂತೆಯೇ ಇದ್ದಲ್ಲಿಯೇ ಇರುತ್ತಾರೆ. ಗ್ರಾಮೀಣರ ಮನೆ ತಲುಪುವ ಮುನ್ನವೇ ಅದೆಷ್ಟೋ ಯೋಜನೆಗಳು ಸೋರಿಹೋಗುತ್ತವೆ. ಈ ನಗ್ನಸತ್ಯವನ್ನು ಕಂಡ ಹೆಗ್ಡೆಯವರು ಸರಕಾರದ ಎಲ್ಲ ಯೋಜನೆಗಳನ್ನು ಎಲ್ಲರ ಮನೆಯ ಬಾಗಿಲಿಗೆ ತಲುಪಿಸುವ ಕೆಲಸವನ್ನು ಮಾಡಿದರು.

ಈ 'ಮಾಹಿತಿ ದರ್ಪಣ'ದಲ್ಲಿ ಏನುಂಟು, ಏನಿಲ್ಲ? ಸರಕಾರದ ಮೂವತ್ತು ಇಲಾಖೆಗಳ, ವಿವಿಧ ಯೋಜನೆಗಳ, ಅವುಗಳನ್ನು ಪಡೆಯುವ ವಿಧಾನದ, ಅರ್ಹತೆಯ ಪೂರ್ಣ ಮಾಹಿತಿ ಇಲ್ಲಿದೆ. ಪ್ರಾಯಶಃ ಯಾವ ಇಲಾಖೆಯ ಕಚೇರಿಗೆ ಹೋದರೂ ಇಷ್ಟೊಂದು ಮಾಹಿತಿ ಸುಲಭವಾಗಿ ಸಿಗಲಾರದು; ಇಲಾಖಾ ಅಧಿಕಾರಿಗಳೂ ಹೇಳಲಾರರು. ಈ 'ಮಾಹಿತಿ ದರ್ಪಣ'ದಲ್ಲಿ ಕಾಲ ಕಾಲಕ್ಕೆ ರೂಪುಗೊಂಡ ಎಲ್ಲ

ಯೋಜನೆಗಳ ಸರಿಯಾದ ಮಾಹಿತಿಯಿದೆ. ಇದನ್ನು ಜನಕ್ಕೆ ಮುಟ್ಟಿಸಿದವರೇ ಹೆಗ್ಡೆಯವರು. ಅವರು ಕೇವಲ ಮಾಹಿತಿಯನ್ನು ಮುಟ್ಟಿಸಿ ಸುಮ್ಮನಾಗಲಿಲ್ಲ. ಸೌಲಭ್ಯ ಸಿಗುವವರೆಗೆ ನೆರವಾದರು. ತನ್ನ ಅಖಿಲ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದರು. ಇದರೊಂದಿಗೆ ವೈಯಕ್ತಿಕವಾಗಿಯೂ ಗ್ರಾಮೀಣ ಅಭಿವೃದ್ಧಿಗೆ ನೆರವಾದರು. ಇವುಗಳಲ್ಲಿ ಶಿಕ್ಷಣ, ವೈದ್ಯಕೀಯ ನೆರವು, ನೀರಾವರಿ ಸೌಲಭ್ಯ ಮುಖ್ಯವಾದವುಗಳು. ಇದರೊಂದಿಗೆ ಹೆಗ್ಡೆಯವರಲ್ಲಿ ಸಂಸ್ಕೃತಿಯ ಚಿಂತನೆಯೂ ಇತ್ತು.

ಎಲ್ಲಿ ಸಂಕಲ್ಪದ ಶುದ್ಧಿಯಿರುತ್ತದೋ ಅಲ್ಲಿ ಸಂಕಲ್ಪದ ಸಿದ್ಧಿಯಿರುತ್ತದೆ. ಈ ಶುದ್ಧಿಯಿಂದಾಗಿಯೇ ಮಾನ್ಯ ಹೆಗ್ಡೆಯವರು ಬೀಜಕ್ಷೇಪ ಮಾಡಿದ ನಿಟ್ಟೆ ವಿದ್ಯಾಸಂಸ್ಥೆಯಿಂದು ಹೆಮ್ಮರವಾಗಿ ಬೆಳೆದುನಿಂತು ಸತ್ಫಲವನ್ನು ನೀಡುತ್ತಿದೆ. ಇದರ ಹಿಂದೆ ಕೆ.ಎಸ್. ಹೆಗ್ಡೆಯವರ ಪುತ್ರ ಮಾನ್ಯ ಎನ್. ವಿನಯ ಹೆಗ್ಡೆಯವರ ಕ್ರತುಶಕ್ತಿಯಿದೆ; ತಿಳಿಗಣ್ಣಿನ ಚಿಂತನೆಯಿದೆ. ಬಂಧುಗಳ ಬೆಂಬಲವಿದೆ; ಮುಂಬಲವಿದೆ. ಹೀಗಾಗಿಯೇ ನಿಟ್ಟೆ ವಿದ್ಯಾ ಸಂಸ್ಥೆಯಿಂದು ಮಂಗಳೂರು - ಬೆಂಗಳೂರು ಹಾಗೂ ನಿಟ್ಟೆಯೂ ಸೇರಿದಂತೆ 24 ಶಿಕ್ಷಣ ಸಂಸ್ಥೆಗಳನ್ನು ಹಾಗೂ ಹದಿನೇಳು ಗ್ರಾಮೀಣ ಆರೋಗ್ಯ ಕೇಂದ್ರಗಳನ್ನು ಹೊಂದಿದ್ದು, ದೇಶಾದ್ಯಂತ ಹೆಸರು ಮಾಡಿದೆ. ಹುಟ್ಟಿದ ಮಗುವೊಂದು ಮೂರು ವರ್ಷದಿಂದ ಆರಂಭಿಸಿ - ತನ್ನ ಪೂರ್ಣ ವಿದ್ಯಾಭ್ಯಾಸವನ್ನು ಪೂರೈಸುವವರೆಗೂ ಕಲಿಯಲು ಇಲ್ಲಿ ವಿಫುಲ ಅವಕಾಶವಿದೆ.

## ನಿಟ್ಟೆ ವಿದ್ಯಾಸಂಸ್ಥೆಯ ಆಡಳಿತಕ್ಕೊಳಪಟ್ಟ ಶಿಕ್ಷಣ ಸಂಸ್ಥೆಗಳು

## 1. ನಿಟ್ಟೆ ವಿದ್ಯಾಸಂಸ್ಥೆ

1979ರ ಜೂನ್ 30ರಂದು ಜನ್ಮ ತಳೆದ ನಿಟ್ಟೆ ವಿದ್ಯಾಸಂಸ್ಥೆಗೀಗ 30ರ ಹರೆಯ. ಹೀಗಾಗಿಯೇ ಇದು ಸದೃಢವಾಗಿ ಬೆಳೆದು ನಿಂತಿದೆ. ಭೌತಿಕವಾಗಿ - ಬೌದ್ಧಿಕವಾಗಿ ಪ್ರೌಢವಾಗಿದೆ. ದೇಶ - ವಿದೇಶಗಳ ವಿದ್ಯಾರ್ಥಿಗಳನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ವಿದ್ಯೆಯಿಂದ ವಿನಯ ಬರುತ್ತದೆ. ವಿನಯದಿಂದ ಕಾರ್ಯ ಸಾಮರ್ಥ್ಯ ಬರುತ್ತದೆ; ಕಾರ್ಯ ಸಾಮರ್ಥ್ಯದಿಂದ ಸಂಪತ್ತು ಬರುತ್ತದೆ. ಸಂಪತ್ತು ಧರ್ಮಕಾರ್ಯಕ್ಕೆ ನೆರವಾಗುತ್ತದೆ. ಅದರಿಂದ ಸಂತೃಪ್ತಿ ಉಂಟಾಗುತ್ತದೆ ಎಂಬುದನ್ನರಿತು ಈ ವಿದ್ಯಾಸಂಸ್ಥೆಯು ಉತ್ತಮ ಶಿಕ್ಷಣವನ್ನು ನೀಡುತ್ತ ಬಂದಿದೆ. ಈ ಸಂಸ್ಥೆಯಲ್ಲಿ ಶಿಶುಮಂದಿರ, ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ತಾಂತ್ರಿಕ ವಿದ್ಯಾಲಯ, ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್, ಹೋಟೆಲ್ ಆಡಳಿತವೂ ಸೇರಿದಂತೆ ಒಟ್ಟು 24 ಶಿಕ್ಷಣ ಸಂಸ್ಥೆಗಳಿವೆ. ಅಲ್ಲದೆ ಉಡುಪಿ, ದಕ್ಷಿಣಕನ್ನಡ, ಉತ್ತರಕನ್ನಡ, ಕಾಸರಗೋಡು, ಕೊಡಗು ಜಿಲ್ಲೆಗಳಲ್ಲಿ ಹದಿನೇಳು ಆರೋಗ್ಯಕೇಂದ್ರಗಳಿದ್ದು ಆಸುಪಾಸಿನ ಜನರಿಗೆ ಉಚಿತವಾಗಿ ದಂತ ವೈದ್ಯಕೀಯ ಹಾಗೂ ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ. ಅಲ್ಲದೆ ಮಂಗಳೂರು ಸಮೀಪದ ನಾಟೇಕಲ್, ಅಂಬ್ಲಮೊಗರು ಹಾಗೂ ಬೋಳಿಯಾರ್‌ಗಳಲ್ಲಿನ ಮೂರು ಸರಕಾರಿ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ದತ್ತು ಸ್ವೀಕರಿಸಲಾಗಿದೆ. ಈ ಆಸ್ಪತ್ರೆಗಳಲ್ಲಿನ ಹೊರರೋಗಿಗಳಿಗೆ ಹೆಚ್ಚುವರಿ ಚಿಕಿತ್ಸೆ ಬೇಕಾದಾಗ ಅವರಿಗೆ ಉಚಿತ ಸೌಲಭ್ಯ ನೀಡಲಾಗುತ್ತಿದೆ.

ನಿಟ್ಟೆ ವಿದ್ಯಾಸಂಸ್ಥೆಯ ಆಡಳಿತಕ್ಕೊಳಪಟ್ಟ ಶಿಕ್ಷಣ ಸಂಸ್ಥೆಗಳನ್ನು ಮುಖ್ಯವಾಗಿ ಏಳು ವಿಭಾಗಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ – ಆರೋಗ್ಯ ವಿಜ್ಞಾನ ವಿದ್ಯಾಲಯಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಕಾರ್ಯನಿರ್ವಾಹಕ ವ್ಯವಸ್ಥೆ (ಆಡಳಿತ) ವಿದ್ಯಾಲಯಗಳು, ಇಂಜಿನಿಯರಿಂಗ್ ಮಹಾವಿದ್ಯಾಲಯಗಳು, ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಣ ಸಂಸ್ಥೆಗಳು, ಶಾಲೆಗಳು ಹಾಗೂ ಗ್ರಾಮೀಣ ಆರೋಗ್ಯ ಕೇಂದ್ರಗಳು.

## 2. ಆರೋಗ್ಯ ವಿಜ್ಞಾನ ವಿದ್ಯಾಲಯಗಳು

**I) ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಂಗಳೂರು (ಓಖಏಉಊಅ ಕ್ಷೇಮ)**

1990ರಲ್ಲಿ ನಿಟ್ಟೆ ವಿದ್ಯಾಸಂಸ್ಥೆಯು ವೈದ್ಯಕೀಯ ಕಾಲೇಜೊಂದನ್ನು ಆರಂಬಿಸುವ ಯೋಜನೆ ಕೈಗೊಂಡಿತು. ಅನಂತರ ಸಂಸ್ಥೆಯು ಜನಸಾಮಾನ್ಯರ ಆರೋಗ್ಯ ಸೇವೆಗೆ ಇತ್ತ ಕೊಡುಗೆಯನ್ನು ಅರಿತುಕೊಂಡು, ವೈದ್ಯಕೀಯ ಕಾಲೇಜು ಆರಂಬಿಸಲು ದಾರಿ ಸುಗಮವಾಗಿದೆ ಎಂಬುದನ್ನು ತಿಳಿಯಿತು. 1999ರಲ್ಲಿ ಸರಕಾರದ ಅನುಮತಿಯೊಂದಿಗೆ ಸುಸಜ್ಜಿತವಾದ ಕಟ್ಟಡದಲ್ಲಿ ವೈದ್ಯಕೀಯ ಕಾಲೇಜನ್ನು ಆರಂಭಿಸಿತು. ನಿಟ್ಟೆಗೆ ಬಂದು ನೆಲೆಯೂರಿದ್ದ ಕೆ.ಎಸ್. ಹೆಗ್ಡೆಯವರು ತಾನು ಸುಖವಾಗಿರುವುದರ ಜೊತೆಯಲ್ಲಿ ತನ್ನ ಸುತ್ತಣ ಜನರು ಆರೋಗ್ಯವಂತರಾಗಿರಬೇಕೆಂದು ಬಯಸಿದವರು. ಆ ಕಾಲದಲ್ಲಿಯೇ ಗ್ರಾಮೀಣ ಜನರಿಗೆ ಉಚಿತ ವೈದ್ಯಕೀಯ ಸೇವೆಯನ್ನು ಒದಗಿಸಿದವರು. 'ಆರೋಗ್ಯವಂತ ಸಮಾಜದ ಸೃಷ್ಟಿ'ಯ ಕನಸು ಕಂಡಿದ್ದ ಕೆ.ಎಸ್. ಹೆಗ್ಡೆಯವರ ಕನಸನ್ನು ನನಸಾಗಿಸಿದ ವಿನಯ ಹೆಗ್ಡೆಯವರು ವೈದ್ಯಕೀಯ ಕಾಲೇಜಿಗೆ ತನ್ನ ತಂದೆಯವರ ಹೆಸರನ್ನಿಡುವ ಮೂಲಕ ಅವರಿಗೆ ಗೌರವ ಸಲ್ಲಿಸಿದ್ದಾರೆ.

ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಜೊತೆಗಿದ್ದು, 'ಕ್ಷೇಮ'ವು 715 ಹಾಸಿಗೆಗಳುಳ್ಳ ಸುಸಜ್ಜಿತವಾದ ಆಸ್ಪತ್ರೆಯೆನ್ನಿಸಿಕೊಂಡಿದೆ. ಇಲ್ಲಿ ವರ್ಷಕ್ಕೆ ಅಂದಾಜು ಇಪ್ಪತ್ತು ಸಾವಿರ ರೋಗಿಗಳು ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಸೇವೆಯನ್ನು ಪಡೆಯುತ್ತಿದ್ದಾರೆ. 'ನೆರೆಕರೆ ಕ್ಷೇಮ' ಯೋಜನೆಯಡಿ ದಾಖಲಾದ ಎಲ್ಲ ಹೊರರೋಗಿಗಳು ಹಾಗೂ ಒಳರೋಗಿಗಳಿಗೆ ಧರ್ಮಾರ್ಥ ಸೇವೆಯನ್ನು ನೀಡಲಾಗುತ್ತಿದೆ. ವಯೋವೃದ್ಧರಿಗಾಗಿ ಆರೋಗ್ಯ ತಪಾಸಣೆ ಹಾಗೂ ಕೌನ್ಸಿಲಿಂಗ್‌ಗಾಗಿ 'ಸಹಾರ' ಎನ್ನುವ ವಿಶೇಷ ಕಾರ್ಯಕ್ರಮವನ್ನು ಅಳವಡಿಸಲಾಗಿದೆ. 'ಜೀವನ್‌ದಾನ್' ಕಾರ್ಯಕ್ರಮದಲ್ಲಿ ಹೆಚ್.ಐ.ವಿ. ಪಾಸಿಟಿವ್ ಹಾಗೂ ಏಡ್ಸ್ ಕುರಿತಂತೆ ವಿಶೇಷ ಮಾಹಿತಿ ನೀಡಲಾಗುತ್ತಿದೆ. ಯೂನಿವರ್ಸಿಟಿ ಆಫ್ ಟೆಕ್ಸಾಸ್ ಹೆಲ್ತ್ ಸೈನ್ಸಸ್ ಸೆಂಟರ್, ಹಸ್ಟನ್, ಯುಎಸ್ ಇದರ ಸಹಯೋಗದೊಂದಿಗೆ 'ಕಮ್ಯೂನಿಕೇಬಲ್ ಡಿಸೀಸಸ್' ಎಂಬ ಸಂಶೋಧನಾ ವಿಭಾಗವನ್ನೂ ತೆರೆಯಲಾಗಿದೆ. ಸುಮಾರು ಏಳೂವರೆ ಸಾವಿರ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯೂ ಸೇರಿದಂತೆ ಪ್ರತಿವರ್ಷ ಒಂದು ಲಕ್ಷಕ್ಕೂ ಮಿಕ್ಕಿದ ರೋಗಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**ii) ಎ.ಬಿ. ಶೆಟ್ಟಿ ಸ್ಮಾರಕ ದಂತ ವಿಜ್ಞಾನ ಕಾಲೇಜು, ಮಂಗಳೂರು**

1985ರಲ್ಲಿ ಆರಂಭಗೊಂಡ ಈ ಸಂಸ್ಥೆಯಲ್ಲಿ ಕೇವಲ 40 ವಿದ್ಯಾರ್ಥಿಗಳಿದ್ದರು. ಆದರೆ ಇದೀಗ ಪ್ರತೀವರ್ಷ ನೂರು ದಂತವೈದ್ಯರು ಹಾಗೂ 50 ಮಂದಿ ದಂತ ತಜ್ಞರು ಈ ಸಂಸ್ಥೆಯಲ್ಲಿ ರೂಪುಗೊಳ್ಳುತ್ತಾರೆ. 'ಮಾನವ ಸಮುದಾಯದ ಸೇವೆ'ಯನ್ನು ಧ್ಯೇಯವಾಗಿಸಿರಿಕೊಂಡ ಈ ಸಂಸ್ಥೆಯು ಸ್ಮೈಲ್ ಟ್ರೈನ್ ಫೌಂಡೇಶನ್ ಯುಎಸ್‌ಎ, ಕ್ಲೆಫ್ಟ್ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಜ್ಯೂರಿಕ್ ಮತ್ತು ರಾಯಲ್ ಕಾಲೇಜ್ ಆಫ್ ಸರ್ಜನ್ಸ್, ಎಡಿನ್‌ಬರೋ ಸಂಸ್ಥೆಯೊಂದಿಗೆ ಸಹಯೋಗ ಹೊಂದಿದೆ.

**iii) ಕೆ.ಎಸ್. ಹೆಗ್ಡೆ ಆಸ್ಪತ್ರೆ, ಮಂಗಳೂರು**

ದೇರಳಕಟ್ಟೆಯಲ್ಲಿರುವ ಈ ಆಸ್ಪತ್ರೆಯು ಉತ್ತಮ ಸೇವೆಯನ್ನು ಒದಗಿಸುತ್ತಾ ಬಂದಿದ್ದು ಬಡಜನರಿಗೆ ಆರೋಗ್ಯ ಭಾಗ್ಯವನ್ನು ಕರುಣಿಸಿದೆ.

i) ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಕ್ರಾ ್ಯನಿಯೋಫೇಶಿಯಲ್ ಸರ್ಜರಿ, ಮಂಗಳೂರು

ನಿಟ್ಟೆ ಗುಲಾಬಿ ಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್, ಮಂಗಳೂರು

i)ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ಮಂಗಳೂರು

ii) ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಪಿಸಿಯೋಥೆರಪಿ, ಮಂಗಳೂರು

iii) ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಎಂಡ್ ಹಿಯರಿಂಗ್, ಮಂಗಳೂರು

# 3. ಇಂಜಿನಿಯರಿಂಗ್ ಮಹಾವಿದ್ಯಾಲಯಗಳು

**i) ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯ ನಿಟ್ಟೆ**

'ಅದ್ಭುತ ಸಾಧನೆಗಳೆಲ್ಲದರ ಮೂಲವೂ ಒಂದು ಚಿಕ್ಕ ಆರಂಭ' ಎಂಬುದು ನಮಗೆಲ್ಲರಿಗೂ ಗೊತ್ತು. 1979ರಲ್ಲಿ ಆರಂಭವಾದ ನಿಟ್ಟೆ ವಿದ್ಯಾಸಂಸ್ಥೆಗೆ ಕೀರ್ತಿ ಕಳಸವೆಂಬಂತೆ 1986ರಲ್ಲಿ ನಿಟ್ಟೆಯಲ್ಲಿ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯವು ಆರಂಭಗೊಂಡಿತು. ರಾಷ್ಟ್ರದಲ್ಲಿಯೇ ಗುರುತಿಸಲ್ಪಟ್ಟ - ಗೌರವಿಸಲ್ಪಟ್ಟ ಈ ತಾಂತ್ರಿಕ ವಿದ್ಯಾಲಯವು ದೇಶ - ವಿದೇಶಗಳ ವಿದ್ಯಾರ್ಥಿಗಳನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ಇದೀಗ ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಈ ವಿದ್ಯಾಲಯದ ಬೇರೆ ಬೇರೆ ಶಾಖೆಗಳಲ್ಲಿ ಅಧ್ಯಯನ ನಡೆಸುತ್ತಿದ್ದಾರೆ.

ಈ ತಾಂತ್ರಿಕ ವಿದ್ಯಾಲಯವು ಆರಂಭದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಒಳಪಟ್ಟಿದ್ದು, ನವದೆಹಲಿಯ ಎ.ಐ.ಸಿ.ಟಿ.ಇ. ಸಂಸ್ಥೆಯಿಂದ ಮಾನ್ಯತೆ ಪಡೆದಿದೆ. ಐ.ಎಸ್.ಬಿ. 9001-2000 ಮನ್ನಣೆ ಪಡೆದಿರುವ ಈ ತಾಂತ್ರಿಕ ವಿದ್ಯಾಲಯವು 2007-08ರಿಂದ ನಿಟ್ಟೆ ಸ್ವಾಯತ್ತ ವಿಶ್ವವಿದ್ಯಾಲಯದ ಸಂಸ್ಥೆಗಳಲ್ಲಿ ಒಂದಾಗಿದೆ.

ಈ ವಿದ್ಯಾಲಯದಲ್ಲಿ 4 ವರ್ಷಗಳ ಇಂಜಿನಿಯರಿಂಗ್ ಪದವಿ, ಎರಡು ವರ್ಷಗಳ ಎಂ.ಟೆಕ್. ಪದವಿ, ಮೂರು ವರ್ಷಗಳ ಎಂ.ಸಿ.ಎ. ಪದವಿ ಶಿಕ್ಷಣವನ್ನು ನೀಡಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ವೈಯಕ್ತಿಕ ಗಮನ ನೀಡಬಲ್ಲಂಥ ಪ್ರಾಧ್ಯಾಪಕ ವೃಂದ ಮಾತ್ರವಲ್ಲದೆ, ವಿದ್ಯಾರ್ಥಿ ಮಾನಸಿಕ ಒತ್ತಡದಿಂದ ಹೊರಬರಲು ಸಹಕರಿಸುವ ಕೌನ್ಸೆಲಿಂಗ್ ವ್ಯವಸ್ಥೆಯೂ ಅತ್ಯುತ್ತಮವಾಗಿದೆ. ಅಂತಿಮ ವರ್ಷದ ವಿದ್ಯಾಭ್ಯಾಸ ಪೂರ್ತಿಗೊಳಿಸುವ ಮುನ್ನವೇ ಉದ್ಯೋಗದ ಆಯ್ಕೆಗಾಗಿ ರಾಷ್ಟ್ರದ ಪ್ರತಿಷ್ಠಿತ ಕಂಪೆನಿಗಳ ಸಹಕಾರದೊಂದಿಗೆ ವಿದ್ಯಾಲಯದಲ್ಲಿಯೇ ಸಂದರ್ಶನ ಹಾಗೂ ಆಯ್ಕೆಯ ಪ್ರಕ್ರಿಯೆ ನಡೆಸಲಾಗುತ್ತದೆ. ಸಾವಿರಾರು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡಕೊಂಡಿದ್ದಾರೆ.

**ii) ನಿಟ್ಟೆ ಮೀನಾಕ್ಷಿ ಸ್ಮಾರಕ ತಾಂತ್ರಿಕ ವಿದ್ಯಾಲಯ, ಬೆಂಗಳೂರು**

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆನ್ನುವ ಹಂಬಲ ನಿಟ್ಟೆ ವಿದ್ಯಾಸಂಸ್ಥೆಯದಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಡಾ| ಎನ್.ಆರ್. ಶೆಟ್ಟಿಯವರು ಜನಜಂಗುಳಿಯಿಂದ ಕೂಡಿರುವ ಬೆಂಗಳೂರು ನಗರ ಪ್ರದೇಶದ ಹೊರವಲಯದಲ್ಲಿ ಪ್ರಥಮ ದರ್ಜೆ ಕಾಲೇಜು ಹಾಗೂ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಬೇಕೆಂಬ ಪ್ರಸ್ತಾಪ ಮಾಡಿದರು. ಹೀಗಾಗಿ 2000ನೇ ಇಸವಿಯಲ್ಲಿ ನಿಟ್ಟೆ ವಿದ್ಯಾಸಂಸ್ಥೆಯು ಬೆಂಗಳೂರು ನಗರದ ಹೊರವಲಯದಲ್ಲಿರುವ ಗೋವಿಂದ ಹಳ್ಳಿಯಲ್ಲಿ 25 ಎಕರೆ ಸ್ಥಳವನ್ನು ಖರೀದಿಸಿತು. ಶಿಕ್ಷಣ ಸಂಸ್ಥೆಗಾಗಿ ಆವರಣವನ್ನು ನಿರ್ಮಿಸಿತು. 2001ರಲ್ಲಿ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯವು ಹುಟ್ಟಿಕೊಂಡಿತು.

# 4. ಕಾರ್ಯನಿರ್ವಹಣೆ ವ್ಯವಸ್ಥೆ (ಆಡಳಿತ ವ್ಯವಸ್ಥೆ) ಶಿಕ್ಷಣ ಸಂಸ್ಥೆಗಳು

**i) ಜಸ್ಟಿಸ್ ಕೆ.ಎಸ್. ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ನಿಟ್ಟೆ**

ಸ್ಪರ್ಧಾತ್ಮಕ ಜಗತ್ತಿನಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಕೂಡ ನಗರ ಪ್ರದೇಶದ ವಿದ್ಯಾರ್ಥಿಗಳ ಜೊತೆಗೆ ಸ್ಪರ್ಧಿಸುವಂತಾಗಬೇಕು. ರಾಷ್ಟ್ರದ ವಿವಿಧ ಸಂಸ್ಥೆಗಳು, ಬೇರೆ ಬೇರೆ ಇಲಾಖೆಗಳ ಹೊಣೆ ನಿಭಾಯಿಸುವ ಜವಾಬ್ದಾರಿಯುತ

ನಾಯಕರಾಗಿ ಬೆಳೆಯಬೇಕು ಎಂಬ ನಿಟ್ಟಿನಲ್ಲಿ 1998ರಲ್ಲಿ ನಿಟ್ಟೆಯಲ್ಲಿ ಕೆ.ಎಸ್. ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಯನ್ನು ಸ್ಥಾಪಿಸಲಾಯಿತು.

**ii) ಸರೋಶ್ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಅಡ್ಮಿನಿಷ್ಟ್ರೇಶನ್, ಮಂಗಳೂರು**

ಇಂದಿನ ಯುವಜನರಲ್ಲಿ ಉತ್ತಮ ಗುಣನಡತೆ, ಮೌಲ್ಯಗಳು ಹಾಗೂ ಕೌಶಲ್ಯಗಳನ್ನು ಬೆಳೆಸುವ ಮೂಲಕ ಅವರು ಸ್ಪರ್ಧಾತ್ಮಕ ಜಗತ್ತಿನಲ್ಲಿ ಆತ್ಮವಿಶ್ವಾಸದಿಂದ ಬಾಳಲು ಪ್ರೇರೇಪಿಸುವ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

# 5. ತಾಂತ್ರಿಕ ವಿದ್ಯಾಲಯಗಳು

**i) ನಿಟ್ಟೆ ರುಕ್ಮಿಣಿ ಅಡ್ಯಂತಾಯ ಸ್ಮಾರಕ ಪಾಲಿಟೆಕ್ನಿಕ್, ನಿಟ್ಟೆ**

1982ರಲ್ಲಿ ನಿಟ್ಟೆಯ ಲೆಮಿನಾ ಫೌಂಡ್ರೀಸ್‌ನಲ್ಲಿಯೇ ನಿಟ್ಟೆ ರುಕ್ಮಿಣಿ ಅಡ್ಯಂತಾಯ ಸ್ಮಾರಕ ಪಾಲಿಟೆಕ್ನಿಕ್ ಆರಂಭಗೊಂಡಿತು. ರಾಜ್ಯ ಸರಕಾರದ ಅನುಮತಿಯೊಂದಿಗೆ ಆರಂಭವಾದ ಈ ಪಾಲಿಟೆಕ್ನಿಕ್ ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಖಾಸಗಿ ಪಾಲಿಟೆಕ್ನಿಕ್ ಎಂಬ ಹೆಸರಿಗೆ ಪಾತ್ರವಾಯಿತು. ಸಂಸ್ಥೆ ಆರಂಭವಾಗಿ ಆರು ತಿಂಗಳ ಬಳಿಕ ಕಾಲೇಜು ತನ್ನದೇ ಆದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಎಲ್ಲ ರೀತಿಯ ಸೌಲಭ್ಯಗಳನ್ನು ಹೊಂದಿದ್ದು, ಉತ್ತಮ ಶಿಕ್ಷಣವನ್ನು ನೀಡುತ್ತ ಬಂದಿರುವ ಈ ಸಂಸ್ಥೆಯು ಇದೀಗ ಸರಕಾರದ ಮಾನ್ಯತೆ ಹೊಂದಿದ್ದು ಇಲ್ಲಿನ ಪ್ರಾಧ್ಯಾಪಕರು ಹಾಗೂ ಸಿಬಂದಿ ಸರಕಾರದಿಂದ ವೇತನ ಪಡೆಯುತ್ತಿದ್ದಾರೆ.

**ii) ಮೂಲ್ಕಿ ರಾಮಕೃಷ್ಣ ಪೂಂಜ ಕೈಗಾರಿಕಾ ತರಬೇತಿ ಸಂಸ್ಥೆ, ತೋಕೂರು**

ನಿಟ್ಟೆಯಿಂದ ಸುಮಾರು 30 ಕಿಲೋಮೀಟರ್ ದೂರದಲ್ಲಿರುವ ಮೂಲ್ಕಿಯಲ್ಲಿ 1984ರಲ್ಲಿ ಈ ಸಂಸ್ಥೆ ಜನ್ಮ ತಾಳಿತು. ಉದ್ಯೋಗ ಕೇಂದ್ರಿತ ತರಬೇತಿ ನೀಡುತ್ತಿರುವ ಈ ಕೈಗಾರಿಕಾ ತರಬೇತಿ ಸಂಸ್ಥೆಯು ಸಾವಿರಾರು ವಿದ್ಯಾರ್ಥಿಗಳು ಸ್ವತಂತ್ರವಾಗಿ, ಸ್ವಾವಲಂಬಿಗಳಾಗಿ ಬಾಳುವುದಕ್ಕೆ ಅನುವು ಮಾಡಿಕೊಟ್ಟಿದೆ. ಉತ್ತಮ ಗುಣಮಟ್ಟದ ಶಿಕ್ಷಣದಿಂದಾಗಿ ನಾಡಿನ ಮೂಲೆ ಮೂಲೆಗಳ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ.

# 6. ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಣ ಸಂಸ್ಥೆಗಳು

**i) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪದವಿಪೂರ್ವ ಕಾಲೇಜು**

1979ರ ಆಗಸ್ಟ್ 30ರಂದು ಜನ್ಮ ತಳೆದ ನಿಟ್ಟೆ ವಿದ್ಯಾ ಸಂಸ್ಥೆಯ ಚೊಚ್ಚಲ ಸಂಸ್ಥೆ ಇದಾಗಿದೆ. 1980ರಲ್ಲಿ ಕೇವಲ 76 ಮಕ್ಕಳೊಂದಿಗೆ ಆರಂಭಗೊಂಡಿದ್ದ ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರೌಢಶಾಲೆಯ 1984ರಲ್ಲಿ ಪದವಿಪೂರ್ವ ವಿದ್ಯಾಲಯವಾಗಿ ಮೇಲ್ದರ್ಜೆಗೇರಿತು. ಈ ಕಾಲೇಜಿನಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಿದ್ದು, ಅತ್ಯುತ್ತಮವಾದ ಗ್ರಂಥಾಲಯ, ಪ್ರಯೋಗಾಲಯ ಹಾಗೂ ಕಂಪ್ಯೂಟರ್ ಶಿಕ್ಷಣದ ವ್ಯವಸ್ಥೆಯಿದೆ. ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ಮಕ್ಕಳನ್ನು ಸಮಾಜ ಸೇವೆಯ ಕಾಯಕಕ್ಕೆ ಅಣಿಗೊಳಿಸಲಾಗುತ್ತಿದೆ.

ಪ್ರೌಢಶಾಲೆಯಲ್ಲಿ ಪಾಠಗಳ ಜತೆಯಲ್ಲಿ ಪಾಠೇತರ ಚಟುವಟಿಕೆಗಳಾದ ಎನ್.ಸಿ.ಸಿ., ಗೈಡ್ಸ್, ಮೊದಲಾದ ತರಗತಿಗಳನ್ನು ನಡೆಸುವ ಮೂಲಕ ಮಕ್ಕಳ ಕ್ರಿಯಾಶೀಲ ಬೆಳವಣಿಗೆಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗುತ್ತಿದೆ.

**ii) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರಥಮ ದರ್ಜೆ ಕಾಲೇಜು, ನಿಟ್ಟೆ**

1988ರಲ್ಲಿ ಬಿ.ಎಸ್.ಸಿ. ವಿಭಾಗವನ್ನು ಆರಂಭಿಸಿ, ಅನಂತರ ವಿಶ್ವವಿದ್ಯಾಲಯದ ಅನುಮತಿಯೊಂದಿಗೆ ಗಣಿತ, ವಿದ್ಯುನ್ಮಾನ ಹಾಗೂ ಕಂಪ್ಯೂಟರ್ ವಿಭಾಗಗಳನ್ನು ಆರಂಬಿಸಲಾಯಿತು. ಕರ್ನಾಟಕವೇ ಅಲ್ಲದೆ ಇತರ ರಾಜ್ಯಗಳ ಅನೇಕ ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

**iii) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು**

ಶಿಕ್ಷಣದ ಸೇವೆ ಕೇವಲ ನಿಟ್ಟೆಗಷ್ಟೇ ಮೀಸಲಾಗಿರಬಾರದು ಎಂಬ ಉದ್ದೇಶದಿಂದ ರಾಜ್ಯದ ರಾಜಧಾನಿಯಲ್ಲಿ 2000ನೇ ಇಸವಿಯಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲಾಯಿತು.

**i) ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪದವಿಪೂರ್ವ ಕಾಲೇಜು, ಬೆಂಗಳೂರು**

1979ರಲ್ಲಿ ಸ್ಥಾಪಿತವಾದ ನಿಟ್ಟೆ ವಿದ್ಯಾಸಂಸ್ಥೆಯ ಚೊಚ್ಚಲ ವಿದ್ಯಾಸಂಸ್ಥೆ ಇದಾಗಿದೆ. 1980 ಜೂನ್ 2ರಂದು ಆರಂಭಗೊಂಡ ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರೌಢಶಾಲೆಯು 1984ರಲ್ಲಿ ಡಾ| ಎನ್. ಶಂಕರ ಅಡ್ಯಂತಾಯ ಸ್ಮಾರಕ ಪದವಿಪೂರ್ವ ವಿದ್ಯಾಲಯವಾಗಿ ಮೇಲ್ದರ್ಜೆಗೇರಿತು.

**ii) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪದವಿಪೂರ್ವ ಕಾಲೇಜು, ಮಂಗಳೂರು**

ಮಂಗಳೂರಿನ ವೈದ್ಯಕೀಯ ಕಾಲೇಜು ಸಮೀಪದಲ್ಲಿಯೇ ಇದ್ದು, ವೈದ್ಯಕೀಯ ಕಾಲೇಜು ಪ್ರಾಧ್ಯಾಪಕರ ಮಕ್ಕಳು ಹಾಗೂ ಕೆ.ಎಸ್. ಹೆಗ್ಡೆ ಆಸ್ಪತ್ರೆಯ ವೈದ್ಯರು ಹಾಗೂ ಇತರ ಉದ್ಯೋಗಿಗಳ ಮಕ್ಕಳಿಗೆ ಪದವಿಪೂರ್ವ ಶಿಕ್ಷಣ ಪಡೆಯಲು ಇಲ್ಲಿ ಉತ್ತಮ ಅವಕಾಶವಿದೆ.

# 7. ಶಾಲೆಗಳು

**i) ಡಾ| ನಿಟ್ಟೆ ಇಂಟರ್‌ನ್ಯಾಷನಲ್ ಸ್ಕೂಲ್, ಬೆಂಗಳೂರು**

ದೇಶ ವಿದೇಶಗಳಿಂದ ಉದ್ಯೋಗ ನಿಮಿತ್ತ ಬೆಂಗಳೂರಿನಲ್ಲಿ ನೆಲೆಸಿರುವ ಉದ್ಯೋಗಿಗಳ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಈ ಶಾಲೆ ಆರಂಭಗೊಂಡಿತು.

**ii) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಆಂಗ್ಲ ಮಾಧ್ಯಮ ಪ್ರೌಢಶಾಲೆ, ನಿಟ್ಟೆ**

ನಿಟ್ಟೆಯಲ್ಲಿ ತಾಂತ್ರಿಕ ವಿದ್ಯಾಲಯ ಆರಂಭಗೊಂಡ ಬಳಿಕ, ಬೇರೆ ಬೇರೆ ಕಡೆಗಳಿಂದ ಬಂದ ಪ್ರಾಧ್ಯಾಪಕರ, ಉಪನ್ಯಾಸಕರ ಮಕ್ಕಳು ಆಂಗ್ಲಭಾಷಾ ಶಿಕ್ಷಣ ಪಡೆಯುವುದು ಅಂದು ಅನಿವಾರ್ಯವಾಗಿತ್ತು. ಹೀಗಾಗಿ, 1988ರಲ್ಲಿ ನಿಟ್ಟೆಯ ರೋಟರಿ ಕ್ಲಬ್ ಸಂಸ್ಥೆಯು ಆಂಗ್ಲಮಾಧ್ಯಮ ಶಾಲೆಯನ್ನು ಪ್ರಾರಂಭಿಸಿತು. ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಿರುವ ಈ ಶಾಲೆಯು ಬ್ರಿಟಿಷ್ ಕೌನ್ಸಿಲ್‌ನಿಂದ ಕೊಡಮಾಡುವ ಅಂತಾರಾಷ್ಟ್ರೀಯ ಶಾಲಾ ಪ್ರಶಸ್ತಿಯನ್ನು ಪಡೆದಿರುವುದು ಕೇವಲ ಶಾಲೆಗಷ್ಟೇ ಅಲ್ಲ, ನಿಟ್ಟೆ ವಿದ್ಯಾಸಂಸ್ಥೆಗೂ ಹೆಮ್ಮೆಯ ವಿಷಯ.

**iii) ಡಾ| ಮುಂಡ್ಕೂರು ರಾಮಣ್ಣ ಶೆಟ್ಟಿ ಸ್ಮಾರಕ ಆಂಗ್ಲಮಾಧ್ಯಮ ಪ್ರೌಢಶಾಲೆ, ತೋಕೂರು**

ಮೂಲ್ಕಿ ಸಮೀಪದ ತಪೋವನ, ತೋಕೂರಿನಲ್ಲಿದೆ. ಮೂಲ್ಕಿ ಹಾಗೂ ಪರಿಸರದ ವಿದ್ಯಾರ್ಥಿಗಳಿಗೆ ಆಂಗ್ಲಭಾಷಾ ಮಾಧ್ಯಮದ ಶಿಕ್ಷಣ ಪಡೆಯಲು ಇಲ್ಲಿ ಉತ್ತಮ ಅವಕಾಶವಿದೆ.

**i) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಹಿರಿಯ ಪ್ರಾಥಮಿಕ ಶಾಲೆ, ಮಲ್ಲಾಯಬೆಟ್ಟು**

ನಿಟ್ಟೆಯ ಸಮೀಪದ ಕಲ್ಯಾ ಗ್ರಾಮದಲ್ಲಿರುವ ಸರಕಾರಿ ಶಾಲೆಯನ್ನು ದತ್ತು ಸ್ವೀಕರಿಸಿರುವ ನಿಟ್ಟೆ ವಿದ್ಯಾಸಂಸ್ಥೆಯು ಶಾಲೆಗೆ ಬೇಕಾಗಿರುವ ಅಚ್ಚುಕಟ್ಟಾದ, ಸುಂದರವಾದ ಕಟ್ಟಡವನ್ನು ನಿರ್ಮಿಸಿರುವ ಜೊತೆಯಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ.

**ii) ಡಾ| ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಹಿರಿಯ ಪ್ರಾಥಮಿಕ ಶಾಲೆ, ಬೋಳಕೋಡಿ**

ಇದೂ ಕೂಡಾ ಸರಕಾರಿ ಶಾಲೆಯಾಗಿದ್ದು, ಆರಂಭದಲ್ಲಿ ಬಹಳಷ್ಟು ಸಮಸ್ಯೆಗಳಿಂದ ಕೂಡಿತ್ತು. ಸರಕಾರದ ತೊಂದರೆ ಏನೇ ಇರಲಿ, ಗ್ರಾಮೀಣ ಪ್ರದೇಶದ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎಂಬ ಕಾರಣದಿಂದ ನಿಟ್ಟೆ ವಿದ್ಯಾಸಂಸ್ಥೆಯು ಈ ಪ್ರಾಥಮಿಕ ಶಾಲೆಯನ್ನು ದತ್ತು ಸ್ವೀಕಾರ ಮಾಡಿತು. ಶಾಲೆಗೆ ಬೇಕಾದ ಉತ್ತಮ ಕಟ್ಟಡ, ಪೀಠೋಪಕರಣಗಳು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಿತು. ಅಲ್ಲದೆ, ಇಲ್ಲಿನ ಶಿಕ್ಷಕರಿಗೆ ಪ್ರತಿವರ್ಷ ಅಧ್ಯಾಪನಕ್ಕೆ ಸಂಬಂಧಪಟ್ಟಂತೆ ಪುನಶ್ಚೇತನ ಶಿಬಿರಗಳನ್ನೂ ನಡೆಸಿತು. ಇಷ್ಟೇ ಏಕೆ, ಶಿಕ್ಷಕರ ವೇತನದ ಜವಾಬ್ದಾರಿಯನ್ನೂ ನಿಟ್ಟೆ ವಿದ್ಯಾಸಂಸ್ಥೆಯೇ ಭರಿಸಿತು.

## 8. ಉಪಗ್ರಹಾಧಾರಿತ ಗ್ರಾಮೀಣ ಆರೋಗ್ಯ ಕೇಂದ್ರಗಳು

ಸದೃಢವಾದ ಶರೀರದಲ್ಲಿ ಮಾತ್ರ ಸದೃಢವಾದ ಮನಸ್ಸು ಇರುತ್ತದೆ' ಎಂಬುದಾಗಿ ನಮ್ಮ ಹಿರಿಯರು ಹೇಳಿರುವ ಮಾತು ಅಕ್ಷರಶಃ ಸತ್ಯ. ಏಕೆಂದರೆ ಮನುಷ್ಯನಿಗೆ ಆರೋಗ್ಯಸಂಪತ್ತು ಇದ್ದರೆ ಉಳಿದೆಲ್ಲ ಸಂಪತ್ತುಗಳನ್ನು ಅವನು ಪಡೆಯಲು ಸಾಧ್ಯ. ಸಂಸ್ಥೆಯ ಸ್ಥಾಪಕರಾದ ಕೌಡೂರು ಸದಾನಂದ ಹೆಗ್ಡೆಯವರ ಗ್ರಾಮಸ್ವರಾಜ್ಯದ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಅವರ ಪುತ್ರ ಎನ್. ವಿನಯ ಹೆಗ್ಡೆಯವರು ಸುಬ್ರಹ್ಮಣ್ಯ, ಶೃಂಗೇರಿ, ಮೂಲ್ಕಿ, ಯಲ್ಲಾಪುರ, ಮುಂಡ್ಕೂರು, ನಿಟ್ಟೆ, ಬೈಲೂರು, ತಾಳಿಪಾಡಿ, ದಬ್ಬೆಕಟ್ಟೆ, ನಾಡ, ಮಡಿಕೇರಿ, ಮಾರ್ಣಕಟ್ಟೆ, ಬೆಳ್ಳಿಕೊಟ್ಟೆ, ಸಸಿಹಿತ್ಲು, ಹೆಜಮಾಡಿ, ಮುಕ್ಕ ಹಾಗೂ ಜೆಪ್ಪಿನಮೊಗರುಗಳಲ್ಲಿ ಉಪಗ್ರಹಾಧಾರಿತ ಗ್ರಾಮೀಣ ಆರೋಗ್ಯ ಕೇಂದ್ರಗಳನ್ನು ತೆರೆದಿದ್ದಾರೆ. ಹೀಗಾಗಿ ಅನೇಕ ಬಡ ಜನತೆಗೆ ಉಚಿತ ಆರೋಗ್ಯಸೇವೆ ದೊರೆಯುತ್ತಿದೆ.

## 9. ವಿವೇಕಾನಂದ ಜ್ಞಾನವಾಹಿನಿ ಕೇಂದ್ರ

ಕಳೆದ 5 ವರ್ಷಗಳ ಹಿಂದೆ ದೂರದ ಮೇಘಾಲಯದಿಂದ ಬಂದ 24 ವಿದ್ಯಾರ್ಥಿಗಳು ಇಲ್ಲಿ ಆಶ್ರಯ ಪಡೆಯುತ್ತಿದ್ದು ನಿಟ್ಟೆ ವಿದ್ಯಾಸಂಸ್ಥೆಯ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಅವರಿಗೆ ಉಚಿತವಾಗಿ ಶಿಕ್ಷಣ ನೀಡಲಾಗುತ್ತಿದೆ. ಉಚಿತ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮೇಲ್ವಿಚಾರಕಿಯರು ಅವರ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿದ್ದಾರೆ.

ಈ ಕೇಂದ್ರದಲ್ಲಿ ಎರಡರಿಂದ 5 ವರ್ಷದೊಳಗಿನ ಮಕ್ಕಳಿಗೆ ಅತ್ಯುತ್ತಮ ಸಂಸ್ಕಾರ ನೀಡುವ ಶಿಶುಮಂದಿರವೂ ಇದೆ. ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ ಎನ್ನುವಂತೆ, ಈ ಕೇಂದ್ರದಲ್ಲಿ ಭಾರತೀಯ ಸಂಸ್ಕೃತಿಯ ಸಂಸ್ಕಾರಪೂರ್ಣ ಶಿಕ್ಷಣ ಪಡೆದ ಮಕ್ಕಳು ಮುಂದಿನ ದಿನಗಳಲ್ಲೂ ಈ ಸಂಸ್ಕಾರವನ್ನು ಮುಂದುವರಿಸಿಕೊಂಡು ಬಂದಿರುವುದೇ ಶಿಶುಮಂದಿರದ ಅತ್ಯುತ್ಕೃಷ್ಟವಾದ ಶಿಕ್ಷಣ ವಿಧಾನಕ್ಕೆ ಕನ್ನಡಿ ಹಿಡಿದಂತಿದೆ.

# 10. ನೆರೆಕರೆ ಕ್ಷೇಮ ಯೋಜನೆ

ಸಮುದಾಯ ಅಭಿವೃದ್ಧಿಯನ್ನು ಕೇಂದ್ರವಾಗಿರಿಸಿಕೊಂಡಿರುವ ಈ ಯೋಜನೆಯು ನಿಟ್ಟೆ ಹಾಗೂ ಪರಿಸರದ ಆರ್ಥಿಕವಾಗಿ ಹಿಂದುಳಿದ ಜನರ ಶೈಕ್ಷಣಿಕ - ಆರ್ಥಿಕ ಪ್ರಗತಿಗೆ ಹೆಚ್ಚು ಮಹತ್ವ ನೀಡಿದುದಾಗಿದೆ. ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ವೈದ್ಯಕೀಯ ಸೇವೆಯನ್ನು ನೀಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಅಲ್ಲದೆ ನಿರುದ್ಯೋಗಿ ಯುವ ಜನತೆಗೆ ಸ್ವ-ಉದ್ಯೋಗ ತರಬೇತಿಗಳನ್ನು ನೀಡುವ ಮೂಲಕ ಅವರು ಸ್ವಾವಲಂಬಿಗಳಾಗಿ, ಸ್ವತಂತ್ರ ಜೀವನವನ್ನು ನಡೆಸುವುದಕ್ಕೆ ಸಹಕಾರಿಯಾಗಿದೆ. ಆದುದರಿಂದ ವಿದ್ಯಾಸಂಸ್ಥೆಯ ಸುತ್ತಮುತ್ತಲಿನ ಜನತೆ 'ನಿಟ್ಟೆ ವಿದ್ಯಾಸಂಸ್ಥೆ ನಮ್ಮದು' ಎಂಬುದಾಗಿ ಅಭಿಮಾನದಿಂದ ಹೇಳಿಕೊಳ್ಳುವಂತಾಗಿದೆ.

ನೆರೆಕರೆ ಕ್ಷೇಮ ಯೋಜನೆಯಡಿ ಪ್ರತಿವರ್ಷವೂ ನಿಟ್ಟೆ ಪರಿಸರದ ಬಡಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು ನೀಡಲಾಗುತ್ತಿದೆ. ಗ್ರಾಮೀಣ ಜನರು ನಾಡಿನ ಸಂಸ್ಕೃತಿಯ ಸುಗಂಧವನ್ನರಿಯಬೇಕು ಎಂಬ ದೃಷ್ಟಿಯಿಂದ, ವಿದ್ಯಾಸಂಸ್ಥೆಯ ಆವರಣದಲ್ಲಿಯೇ ನಡೆಯುವ ಸಾರ್ವಜನಿಕ ಗಣೇಶೋತ್ಸವದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು 'ನೆರೆಕರೆ ಕ್ಷೇಮ'ಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ. ಹಬ್ಬ ಹರಿದಿನಗಳಂದು ಬಡ ಕುಟುಂಬಗಳಿಗೆ ಉಚಿತವಾಗಿ ಅಕ್ಕಿ - ಬೆಲ್ಲ ವಿತರಿಸುವ ಸಂಪ್ರದಾಯವೂ ಈ ಯೋಜನೆಯಲ್ಲಿದೆ.

'ಕಂಪ್ಯೂಟರ್ ಸಾಕ್ಷರತಾ ಕಾರ್ಯಕ್ರಮ'ದನ್ವಯ ನಿಟ್ಟೆ ವಿದ್ಯಾಸಂಸ್ಥೆಯು ಹದಿಮೂರೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ವಿವಿಧ ಶಾಲೆಗಳಿಗೆ ಮೂವತ್ತೈದು ಕಂಪ್ಯೂಟರ್‌ಗಳನ್ನು ಒದಗಿಸಿದೆ. ಇಪ್ಪತ್ಮೂರು ಶಾಲೆಗಳಿಗೆ ತರಗತಿಯ ಪೀಠೋಪಕರಣಗಳು, ಬೋಧನೋಪಕರಣಗಳು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಒದಗಿಸಿದೆ.

14-2-2002ರಂದು ಅಧಿಕೃತವಾಗಿ ಉದ್ಘಾಟನೆಗೊಂಡ ಈ ನೆರೆಕರೆ ಕ್ಷೇಮ ಯೋಜನೆಯು ನಿಟ್ಟೆ ಗ್ರಾಮದ ಸಮಸ್ತ ಜನತೆಯ ಕಲ್ಯಾಣ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಜಾರಿಗೆ ತಂದು ಜನರಿಗೆ ನೆಮ್ಮದಿಯ ಜೀವನ ಕಲ್ಪಿಸುವ ಉದ್ದೇಶವನ್ನು ಹೊಂದಿದೆ. ಟಸರ್ವೇ ಜನಾಃ ಸುಖಿನೋ ಭವಂತು! ಎಂದು ನಂಬಿದ್ದ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರು ತಮ್ಮ ಬದುಕಿನ ದಿನಗಳಲ್ಲಿಯೇ ಈ ಯೋಜನೆಯ ಕುರಿತಾದ ಮಹಾ ಕನಸನ್ನು ಕಂಡಿದ್ದರು. ಇದೀಗ ಅವರ ಪುತ್ರ ಎನ್. ವಿನಯ ಹೆಗ್ಡೆಯವರು ತಂದೆಯ ಕನಸನ್ನು ಸಾಕಾರಗೊಳಿಸಿದ್ದಾರೆ.

# 11. ಉಚಿತ ತಾಂತ್ರಿಕ ತರಬೇತಿ

ನಿಟ್ಟೆಯಲ್ಲಿರುವ ಸಂಸ್ಥೆಯ ಸಮುದಾಯ ಪಾಲಿಟೆಕ್ನಿಕ್‌ನಲ್ಲಿ ಕಳೆದ ಆರು ವರ್ಷಗಳಿಂದ ಇಲೆಕ್ಟ್ರಿಕಲ್, ಪ್ಲಂಬಿಂಗ್, ಮೆಕ್ಯಾನಿಕ್, ಟೈಲರಿಂಗ್, ಮೋಟಾರು ವಾಹನ ಚಾಲನೆ ಮತ್ತು ಇಲೆಕ್ಟ್ರಾನಿಕ್ ಉಪಕರಣಗಳ ದುರಸ್ತಿ ಕುರಿತ ಉಚಿತ ವೃತ್ತಿಪರ ತರಬೇತಿಯನ್ನು ನಡೆಸಲಾಗುತ್ತಿದೆ. ವಿದ್ಯಾಸಂಸ್ಥೆಯು ಪ್ರತಿವರ್ಷವೂ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳನ್ನು ಉಚಿತ ವೃತ್ತಿಪರ ತಾಂತ್ರಿಕ ತರಬೇತಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವಿನಿಯೋಗಿಸುತ್ತಿದೆ.

1981ರಲ್ಲಿ ನಿಟ್ಟೆಯಲ್ಲಿ ಸ್ಥಾಪಿಸಲಾದ 'ಲೆಮಿನಾ ಫೌಂಡ್ರೀಸ್'ನಲ್ಲಿ ಅಮೆರಿಕಾ ಮತ್ತು ಐರೋಪ್ಯ ದೇಶಗಳಿಗೆ ರಫ್ತು ಮಾಡುವಂತಹ ಮೋಟಾರು ವಾಹನಗಳ ಬ್ರೆಕ್ ಡ್ರಂಗಳನ್ನು ಉತ್ಪಾದಿಸಲಾಗುತ್ತಿದೆ. ಈ ಫೌಂಡ್ರಿಯು ನಿಟ್ಟೆ ಗ್ರಾಮದ ಸುಮಾರು 700 ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ.

# 12. ಮಹಿಳಾ ಉದ್ಯೋಗ ಮಂಡಲಿ

ವಿದ್ಯಾಸಂಸ್ಥೆಯು ಸ್ಥಾಪಿಸಿರುವ ಮಹಿಳಾ ಉದ್ಯೋಗ ಮಂಡಲಿಯಡಿ ಮುದ್ರಣಾಲಯ, ಹೊಲಿಗೆ ತರಬೇತಿ ಘಟಕ, ಒಂದು ಕ್ಯಾಂಟೀನ್, ಗೃಹೋಪಯೋಗಿ ವಸ್ತುಗಳ ಉತ್ಪಾದನೆ ಮತ್ತು ಮಾರಾಟ ಘಟಕಗಳಿದ್ದು, ಲಾಭಾಂಶವನ್ನು ಹೊಂದಿದೆ. ಹದಿನೈದು ಲಕ್ಷ ರೂಪಾಯಿಗಳ ವಾರ್ಷಿಕ ವಹಿವಾಟನ್ನು ನಡೆಸುತ್ತಿರುವ ಈ ಮಹಿಳಾ ಉದ್ಯೋಗ ಮಂಡಲವು ಸುಮಾರು ಇನ್ನೂರೈವತ್ತು ಮಹಿಳೆಯರಿಗೆ ಉದ್ಯೋಗವನ್ನು ಕಲ್ಪಿಸಿದೆ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

# 13. ವಸತಿ ಸೌಕರ್ಯ

ಅನ್ಯಾಯದ ವಿರುದ್ಧ ಸಿಡಿದೆದ್ದು, ರಾಷ್ಟ್ರದ ಉನ್ನತ ಹುದ್ದೆಯನ್ನು ನಿರಾಕರಿಸಿ, ಮರಳಿ ತನ್ನ ನಾಡಿಗೆ ಬಂದ ಕೆ.ಎಸ್. ಹೆಗ್ಡೆಯವರು ನಿಟ್ಟೆ ವಿದ್ಯಾಸಂಸ್ಥೆಯನ್ನು ಆರಂಬಿಸುವ ಮೊದಲೇ ಬಡವರಿಗಾಗಿ ಕಡಿಮೆ ವೆಚ್ಚದಲ್ಲಿ ನೂರಾರು ಸಣ್ಣ ಮನೆಗಳನ್ನು ನಿರ್ಮಿಸಿಕೊಟ್ಟಿದ್ದರು. ಇದುವರೆಗೆ ವಿದ್ಯಾಸಂಸ್ಥೆಯ ವೆಚ್ಚದಲ್ಲಿ ಸುಮಾರು ಇನ್ನೂರೈವತ್ತು ಮನೆಗಳ ನವೀಕರಣಕ್ಕೆ ಕಟ್ಟಡ ಸಾಮಗ್ರಿಗಳನ್ನು ಪೂರೈಸಲಾಗಿದೆ. ನೂರಕ್ಕೂ ಹೆಚ್ಚು ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಿಸಲಾಗಿದೆ.

ಎಪ್ಪತ್ತೈದು ಫಲಾನುಭವಿಗಳಿಗೆ ತಲಾ ಅರುವತ್ತು ಸಾವಿರ ರೂಪಾಯಿಗಳ ಆರ್ಥಿಕ ಸಹಾಯವನ್ನು ಮನೆ ನಿರ್ಮಾಣಕ್ಕಾಗಿ ನೀಡಲಾಗಿದೆ. ಅಲ್ಲದೆ ಮನೆ ದುರಸ್ತಿ ಮತ್ತು ನವೀಕರಣ ಉದ್ದೇಶಗಳಿಗೆಂದು ಇನ್ನೂರು ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಕುಡಿಯುವ ನೀರಿನ ಪೂರೈಕೆಗಾಗಿ ವಿದ್ಯಾಸಂಸ್ಥೆಯು ಈಗಾಗಲೇ ಹನ್ನೆರಡು ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿದೆ.

# 14. ಸನ್ಮತಿ

ನಮ್ಮಲ್ಲಿರುವ ಒಳ್ಳೆಯ ಆಲೋಚನೆ, ಒಳ್ಳೆಯ ಚಿಂತನೆಗಳೇ ನಮ್ಮನ್ನು ಸುಸಂಸ್ಕೃತ ವ್ಯಕ್ತಿಗಳನ್ನಾಗಿ ರೂಪಿಸುತ್ತದೆ. ಕೌಡೂರು ಸದಾನಂದ ಹೆಗ್ಡೆಯವರ ಮನಸ್ಸು ಪರಿಶುದ್ಧವಾಗಿತ್ತು; ಹೃದಯ ನಿರ್ಮಲವಾಗಿತ್ತು. ಹಾಗಾಗಿಯೇ ಅವರು, ತಾನು ಬದುಕುವುದರೊಂದಿಗೆ - ತನ್ನ ಸುತ್ತಣ ಸಮಾಜವು ನೆಮ್ಮದಿಯಿಂದ ಬದುಕಬೇಕು ಎಂಬ ಕನಸು ಕಂಡರು. ಆ ಕನಸನ್ನು ನನಸಾಗಿಸಿದರು. ಸುಸಂಸ್ಕೃತ ತಾಯಿ ತಂದೆಯರಿಗೆ ಮಾತ್ರ ಮಗನಾಗಲಿಲ್ಲ; ಹೊತ್ತ ಭೂಮಿ ತಾಯಿಗೂ ಹೆಮ್ಮೆಯ ಪುತ್ರನಾಗಿ ಬದುಕಿ ಸಮಾಜದ ಋಣ ತೀರಿಸಿದರು. 1990ರ ಮೇ 25ರಂದು ಅವರು ಭೌತಿಕ ಶರೀರವನ್ನು ಬಿಟ್ಟು, ಇಹಲೋಕದ ಯಾತ್ರೆಯನ್ನು ಮುಗಿಸಿದರು. ಇಹಲೋಕದಿಂದ ದೂರವಾದರೂ ಅವರು ವಿದ್ಯಾಸಂಸ್ಥೆಯಿಂದ ದೂರವಾಗಿಲ್ಲ ಎಂಬುದನ್ನು ನೆನಪಿಸುತ್ತಿದೆ - ನಿಟ್ಟೆಯಲ್ಲಿರುವ ಅವರ ಹಾಗೂ ಮೀನಾಕ್ಷಿ ಹೆಗ್ಡೆಯವರ ಸ್ಮಾರಕ - 'ಸನ್ಮತಿ'.

ಸಮಾದಿ ಸ್ಥಳದ ಸಮೀಪದಲ್ಲಿಯೇ ಚಿಕ್ಕದಾದ - ಚೊಕ್ಕದಾದ ವಸ್ತು ಸಂಗ್ರಹಾಲಯವಿದೆ. ಈ ವಸ್ತು ಸಂಗ್ರಹಾಲಯ ಬಹಳಷ್ಟು ಸುಂದರವಾಗಿದೆ. ಚಿಕ್ಕದಾದ ಗ್ರಂಥಾಲಯವೂ ಇದರಲ್ಲಿದೆ. ಕೆ.ಎಸ್. ಹೆಗ್ಡೆಯವರು ನ್ಯಾಯಾಧೀಶರಾಗಿದ್ದ ಸಂದರ್ಭದಲ್ಲಿ ತೊಡುತ್ತಿದ್ದ ಅವರ ಕೋಟು, ಕೊರಳ ಪಟ್ಟಿ, ಪೆನ್ನು, ಕ್ಷೌರ ಮಾಡಲು ಉಪಯೋಗಿಸುತ್ತಿದ್ದ ಸಾಮಗ್ರಿಗಳು ಹಾಗೂ ಅವರು ಬಳಸುತ್ತಿದ್ದ ಕೆಲವು ವಸ್ತುಗಳನ್ನು ಇಲ್ಲಿ ಸಂರಕ್ಷಿಸಿ ಇಡಲಾಗಿದೆ. ಅಲ್ಲದೆ ರಾಜ್ಯಸಭಾ ಸದಸ್ಯರಾಗಿ, ಲೋಕಸಭೆಯ ಸ್ಪೀಕರ್ ಆಗಿ, ನ್ಯಾಯವಾದಿಗಳಾಗಿ, ನ್ಯಾಯಾಧೀಶರಾಗಿ, ರಾಷ್ಟ್ರ ರಾಜಕಾರಣಿಯಾಗಿ ಎಲ್ಲಕ್ಕಿಂತ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಬೆಳೆಯುತ್ತಿರುವ ಬೃಹತ್ ವಿದ್ಯಾಸಂಸ್ಥೆಗೆ ಬೀಜಕ್ಷೇಪ ಮಾಡಿ ತಮ್ಮ ಬದುಕನ್ನು ಸಾರ್ಥಕಗೊಳಿಸಿದ ಕೆ.ಎಸ್. ಹೆಗ್ಡೆಯವರ ಬಾಳ ಪುಟಗಳನ್ನು ತೆರೆದಿಡುವ ಭಾವಚಿತ್ರಗಳು ಈ ವಸ್ತು ಸಂಗ್ರಹಾಲಯದಲ್ಲಿವೆ. ಈ ಸನ್ಮತಿ ಭವನದ ಒಳಹೊಕ್ಕರೆ ಪ್ರಶಾಂತ ಭಾವ ನಮ್ಮಲ್ಲಿ ಮೂಡುತ್ತದೆ. ಹಸಿರು

ರಾಶಿಯಲ್ಲಿ ಬಗೆ ಬಗೆಯ ಬಣ್ಣ ಬೀರಿ ಅರಳಿ ನಿಂತ ಗುಲಾಬಿ ಗಿಡಗಳು ಒಂದೆಡೆಯಾದರೆ, ಶುಭ್ರ ನೀರಿನಿಂದ ಕೂಡಿರುವ ಕೆರೆಗಳು - ಬಣ್ಣ ಬಣ್ಣದ ಮೀನುಗಳು ನಮ್ಮ ಮೈರೋಮಾಂಚನಗೊಳಿಸುತ್ತವೆ. 'ಸನ್ಮತಿ'ಯ ವಾತಾವರಣ ನೊಂದ ಮನಸ್ಸಿಗೆ ಸಾಂತ್ವನ ನೀಡುತ್ತದೆ. ಬೆಂದ ನೋವಿಗೆ ನೆಮ್ಮದಿಯ ತಂಪೆರೆಯುತ್ತದೆ. ನಿರಾಶೆಯ ಮುಗಿಲುಗಳನ್ನು ದೂರ ಸರಿಸಿ, ಆಸೆಯ ಹೊಂಗಿರಣಗಳನ್ನು ಮೂಡಿಸುತ್ತದೆ. ಇಲ್ಲಿ ಕವಿಹೃದಯ ಬಿಚ್ಚಿಕೊಳ್ಳುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಪರಿಸರದ ಬಂಧುಗಳಾಗುತ್ತೇವೆ. ಇಲ್ಲಿನ ಮರ - ಗಿಡ - ಹೂ - ಬಳ್ಳಿಗಳ ನಂಟು ನಮಗೆ ಅಂಟಿನಂತೆ ಅಂಟಿಕೊಳ್ಳುತ್ತದೆ. ನಮ್ಮ ಮತಿಯೂ 'ಸನ್ಮತಿ'ಯಾಗಿ ರೂಪುಗೊಳ್ಳುತ್ತದೆ. ನಮಗೆ ಮಾರ್ಗದರ್ಶನವಿತ್ತ ಹಿರಿಯ ಚೇತನಗಳಿಗೆ ವಂದಿಸಿ ಕೃತಾರ್ಥರಾಗುತ್ತೇವೆ.

## 15. ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಸೇವಾ ಪ್ರತಿಷ್ಠಾನ

1990ರಲ್ಲಿ ಕೆ.ಎಸ್. ಹೆಗ್ಡೆಯವರು ನಿಧನ ಹೊಂದಿದಾಗ ಅವರ ಸ್ಮರಣಾರ್ಥವಾಗಿ ಸಾಮಾಜಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ವಿಸ್ತತ ನೆಲೆಯಲ್ಲಿ ಕೈಗೊಳ್ಳಲು 'ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಸೇವಾ ಪ್ರತಿಷ್ಠಾನ' ಎಂಬ ಸೇವಾಸಂಸ್ಥೆಯನ್ನು ಸ್ಥಾಪಿಸಲಾಯಿತು. ಆರೋಗ್ಯ ಸೇವೆ, ಶಾಲೆ, ಶೈಕ್ಷಣಿಕ ಬೆಂಬಲ, ವಸತಿ, ಕುಡಿಯುವ ನೀರಿನ ಪೂರೈಕೆ, ಜಲಾಗಾರ ಸ್ಥಾಪನೆ, ಅನಾಥ ಮಕ್ಕಳ ಪುನರ್ವಸತಿ, ಸರಕಾರಿ ಮತ್ತಿತರ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಕಲ್ಪಿಸುವಿಕೆ ಮೊದಲಾದ ಧ್ಯೇಯೋದ್ದೇಶಗಳನ್ನು ಈ ಪ್ರತಿಷ್ಠಾನ ಹೊಂದಿದ್ದು, ಅವುಗಳ ಸಾಧನೆಗಾಗಿ ಕಾರ್ಯತತ್ಪರವಾಗಿದೆ. ಈ ಸಂಸ್ಥೆಯು ಸಮುದಾಯ ಅಭಿವೃದ್ಧಿ ಯೋಜನೆಯನ್ವಯ ಆರೋಗ್ಯಸೇವೆಗಾಗಿ ಇದೀಗ ವರ್ಷಕ್ಕೆ ಮೂರು ಕೋಟಿಗೂ ಮಿಕ್ಕಿ ಹಣ ವ್ಯಯಿಸಿದ್ದು ಒಂದು ಲಕ್ಷಕ್ಕೂ ಹೆಚ್ಚು ಜನ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

## 16.ನ್ಯಾ| ಕೆ.ಎಸ್. ಹೆಗ್ಡೆ ಪ್ರತಿಷ್ಠಾನ ಪ್ರಶಸ್ತಿ

ಸಮಾಜದ ವಿವಿಧ ಸ್ತರಗಳಲ್ಲಿ ಉನ್ನತ ಸ್ಥಾನಕ್ಕೇರಿ ಜನಜನಿತರಾದ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆಯವರು 1990ರಲ್ಲಿ ನಿಧನರಾದ ಬಳಿಕ ಅವರ ಸ್ಮರಣಾರ್ಥವಾಗಿ ಜನ್ಮ ತಳೆದ ಸಂಸ್ಥೆಯೇ 'ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಸೇವಾ ಪ್ರತಿಷ್ಠಾನ'. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಾನ್ ವ್ಯಕ್ತಿಗಳನ್ನು ಗುರುತಿಸಿ, ಗೌರವಿಸುವ ನಿಟ್ಟಿನಲ್ಲಿ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಪ್ರತಿಷ್ಠಾನ ಪ್ರಶಸ್ತಿ ನೀಡಲಾಯಿತು. ಈ ಪ್ರಶಸ್ತಿಯು ಎರಡು ಲಕ್ಷ ರೂಪಾಯಿ ನಗದು ಬಹುಮಾನ, ಸ್ಮರಣಿಕೆ, ಬೆಳ್ಳಿಯ ಫಲಕ ಹಾಗೂ ಸನ್ಮಾನಪತ್ರಗಳನ್ನು ಒಳಗೊಂಡಿದೆ.